(SRI M. PALANIYAPPAN.)

the commencement of the sessions. In Mysore also the same practice prevailed. The printed questions and answers would be received sufficiently in advance in the office. But I find unfortunately those things would be supplied to us a little bit late. Unless these things are supplied to us at least one day prior, it would not be possible for us to study the questions and apply our minds.

Mr. SPEAKER.—Regarding the first point raised by the Hon'ble Member about the issue of passes, as the Hon'ble Members are aware, due to special circumstances it has not been possible to issue passes to all the people, and if there are any defects, they will be looked into. So far as the distribution of questions and answers is concerned, I will see that they are made available to them a little bit earlier.

STATES REORGANISATION COMMISSION REPORT

Motion to consider—(contd.)

ಶ್ರೀ ಟಿ. ಎನ್. ಮುದಲಗಿರಿಗೌಡ (ಕುಣಿಗಲ್).—ಮಾನ್ಯ ಸಭಾಪತಿಗಳೇ, ಈವರೆಗೂ ಎಸ್. ಆರ್. ಸಿ. ವರದಿಯ ಮೇಲೆ ಚರ್ಚೆ ಮಾಡಿರುವ ರೀತಿಗೂ ಈ ದಿವಸ ಈ ರಿಪೋರ್ಟಿನ ಮೇಲೆ ಚರ್ಚೆಮಾಡುವಾಗ ಇರತಕ್ಕ ಮನೋಭಾವಕ್ಕೂ ವ್ಯತ್ಯಾಸವುಂಟಾಗಿದೆಯೆಂಬುದನ್ನು ನಾನು ಅರಿತಿದ್ದೇನೆ. ಪತ್ರಿಕೆಗಳಲ್ಲಿ ಬಂದಿರತಕ್ಕ ರೀತಿಯಲ್ಲಿ ಹೈ-ಪವರ್ ಕಮಿಟಿಯವರು ಏನು ತೀರ್ಮಾನ ಮಾಡಿದ್ದಾರೆಂಬ ವಿಷಯವನ್ನೂ ನಾನು ಓದಿದ್ದೇನೆ. ಆದರೂ ಕೂಡ ಲೆಜಿಸ್ಲೇಚರಿನಲ್ಲಿ ಈ ವಿಷಯ ಚರ್ಚೆಯಾಗಿ ತೀರ್ಮಾನವಾಗಬೇಕಾಗಿರತಕ್ಕ ಸನ್ನಿವೇಶದಲ್ಲಿ ನಾವಿದ್ದೇವೆ. ಈಗ ಚರ್ಚೆ ಮಾಡಿ ನಮ್ಮ ಅಭಿಪ್ರಾಯಗಳನ್ನು ಖಚಿತವಾಗಿ ತಿಳಿಸಬೇಕಾಗಿದೆ.

ಈ ರಿಪೋರ್ಟನ್ನು ಚರ್ಚೆ ಮಾಡುವಾಗ ಅದರ ಪೂರ್ವಭಾವಿಯಾಗಿ ಒಂದೆರಡು ಮಾತುಗಳನ್ನು ತಿಳಿಸಬೇಕೆಂದಿದ್ದೇನೆ. S.R.C ರಿಪೋರ್ಟು 10-10-55 ರಲ್ಲಿ ಪ್ರಕಟವಾಯಿತು. ಅಂದಿನಿಂದ ಈವರೆಗೂ ಈ ವರದಿಯ ಮೇಲೆ, ಕರ್ಣಾಟಕ ಪ್ರಾಂತ್ಯ ರಚನೆಯಾಗತಕ್ಕ ವಿಷಯದಲ್ಲಿ, ಅದು ಅನಗತ್ಯವೆಂದು ಹೇಳಿ ಎಂಥ ಪರಿಣಾಮಕಾರಿಯಾದಂಥ ಸನ್ನಿವೇಶಗಳು ಬಂದಿವೆಯೆಂಬುದು ಈ ಸಭೆಗೆ ಗೊತ್ತಿದೆ. ಅಕ್ಟೋಬರ್ ತಿಂಗಳ 10ನೆಯ ತಾರೀಖು ಆದಮೇಲೆ ಇಂಡಿಯನ್ ನ್ಯಾಷನಲ್ ಕಾಂಗ್ರೆಸಿನ ಅಧ್ಯಕ್ಷರವರು ಇಡೀ ಮೈಸೂರು ಸಂಸ್ಥಾನದ ಪ್ರವಾಸವನ್ನು ಕೈಕೊಂಡರು. ಅದಾದನಂತರ ಚರ್ಚೆಗಾಗಿ ಈ ಸಭೆಯನ್ನು ಕರೆಯಲಾಯಿತು. ಆ ಕಾಂಗ್ರೆಸ್ ಅಧ್ಯಕ್ಷರು ಮೈಸೂರು ಸಂಸ್ಥಾನದಲ್ಲಿ ಪ್ರವಾಸವನ್ನು ಕೈಕೊಂಡ ಕಾಲದಲ್ಲಿ ಉಂಟಾದ ಸನ್ನಿವೇಶಗಳೂ ಮತ್ತು ಈ ಸಭೆಯು ಪ್ರಾರಂಭವಾದಾಗ ನಡೆದ ಪ್ರಸಂಗಗಳೂ ನಮ್ಮ ಕಣ್ಣೆದುರಿಗೆ ನಿಂತಿವೆ. ನಾವು ಈ ದೇಶದ ಸ್ವಾತಂತ್ರ್ಯವನ್ನು ಗಳಿಸತಕ್ಕ ಹೋರಾಟದ ಸಂದರ್ಭದಲ್ಲಿ ಬ್ಯೂರೋಕ್ರಾಟಿಕ್ ಸರ್ಕಾರವೆಂದು ಹೇಳಿ ಪ್ರಜೆಗಳು ಸರ್ಕಾರವನ್ನು ಎದುರಿಸಿ ಪ್ರಜಾಸರ್ಕಾರವನ್ನು ಸ್ಥಾಪನೆ ಮಾಡಲೋಸುಗ ಹೋರಾಟ ನಡೆಸಬೇಕೆಂದೇನು ಹೇಳುತ್ತಿದ್ದೆವೋ ಅದೇ ರೀತಿ ಪ್ರಾಂತ್ಯ ವಿಂಗಡಣೆಯು ಈ ಸಂದರ್ಭದಲ್ಲಿ ಪ್ರಜೆಗಳಿಗೆ-ಪ್ರಜೆಗಳಿಗೆ, ಗುಂಪು–ಗುಂಪುಗಳಿಗೆ ಪಕ್ಷ–ಪಕ್ಷಗಳಿಗೆ ಜೊತೆಗೆ ಸರ್ಕಾರದೊಡನೆಯೂ ಕೂಡ ಹೋರಾಟ ನಡೆಸುವ ಸನ್ನಿವೇಶವೊದಗಿದೆ. ಇದನ್ನು ನಾನು ವಿಸ್ತರಿಸುವುದಕ್ಕೆ ಹೋಗುವುದಿಲ್ಲ. ಆ ಚಿತ್ರಗಳೆಲ್ಲವನ್ನೂ ನಾವು ಮನಸ್ಸಿನಲ್ಲಿಟ್ಟುಕೊಂಡು ಇಂದು ಚರ್ಚಿಸಬೇಕಾಗಿದೆ.

ಸ್ವಾಮಿ, ನಾನು ಈ ವರದಿಯನ್ನು ಚರ್ಚಿಸುವಾಗ ಯಾವ ಸ್ವಾರ್ಥವನ್ನಾಗಲಿ ಚಪಲತೆಯನ್ನಾಗಲಿ, ಮಹದಾಶೆಯನ್ನಾಗಲಿ ಮನಸ್ಸಿನಲ್ಲಿಟ್ಟುಕೊಂಡು ಆ ಉದ್ರೇಕದಲ್ಲಿ ಮಾತನಾಡುವುದಕ್ಕೆ ಹೋಗುತ್ತಿಲ್ಲ. ನನ್ನ ಮಾತುಗಳಲ್ಲಾಗಲಿ, ಭಾಷೆಯಲ್ಲಾಗಲಿ ಅಸಹ್ಯ ವರ್ತನೆಯನ್ನು ತೋರ್ಪಡಿಸುವುದಕ್ಕೆ ನಾನು ಪ್ರಯತ್ನ ಮಾಡುವುದಿಲ್ಲ. ನಾನೇನಿದ್ದರೂ, ಮೈಸೂರು ದೇಶದ 90 ಲಕ್ಷ ಪ್ರಜೆಗಳ—ಪಟ್ಟಣಗಳಲ್ಲಿ ತಾಲ್ಲೂಕ್ ಹೆಡ್‌ಕ್ವಾರ್ಟ್ರುಗಳಲ್ಲಿ ವಾಸಮಾಡತಕ್ಕ ಜನವನ್ನು ಬಿಟ್ಟು ಹಳ್ಳಿಗಾಡಿನ ರೈತನ ವಿಷಯದಲ್ಲಿ—ಅವರು ಯಾವ ಕೋಮಿಗೇ ಸೇರಿರಲಿ—ಮುಖ್ಯವಾಗಿ ರೈತನ ವಿಷಯದಲ್ಲಿ ಮಾತನಾಡುವವನಾಗಿದ್ದೇನೆ. ಅವನಿಗೆ ಇದರಿಂದ ಸುಖ ದೊರೆಯುವುದೇ ಅಥವಾ ಆ ಸುಖ ಎಷ್ಟು ದಿವಸಗಳಲ್ಲಿ ಆತನಿಗೆ ದೊರೆಯಬಹುದು, ಮತ್ತು ಆ ಸುಖ ದೊರೆಯುವವರೆಗೂ ಅವನು ಎಂಥ ಹಳಸು ಜೀವನವನ್ನು ಅನುಭವಿಸಬೇಕಾಗಿದೆ, ಆ ಹಳಸು ಜೀವನವನ್ನು ಅನುಭವಿಸಬೇಕಾದ ಕಾಲದ ಮಿತಿಯೇನೆಂಬುದನ್ನು ಯೋಚಿಸಿ ನಾನು ವರದಿಯನ್ನು ಚರ್ಚಿಸತಕ್ಕವನಾಗಿದ್ದೇನೆ. ಈ ಸಂದರ್ಭದಲ್ಲಿ ನಾನು ಪಟ್ಟಣಗಳ ವಿಷಯವನ್ನು ಏಕೆ ಕೈಬಿಟ್ಟಿದ್ದೇನೆ ಎಂದರೆ ಅವರು ಹಳ್ಳಿಗಾಡಿನ ಜನರ ವಿಷಯದಲ್ಲಿ ಕರುಣೆಯಿಲ್ಲದ ಜನಗಳು ಎನ್ನತಕ್ಕ ಮಟ್ಟದಲ್ಲಿ ಅವರ ರೀತಿ ನೀತಿಗಳಿವೆ. ಅವರು ಹಳ್ಳಿಗಾಡಿನ ಜನರ ವಿಷಯದಲ್ಲಿ ತೋರತಕ್ಕ ನಿರ್ದಯ ಆ ಜನಗಳ ಮನಸ್ಸಿಗೆ ತುಂಬ ವ್ಯಥೆಯನ್ನುಂಟುಮಾಡಿದೆಯಾದ್ದರಿಂದ ನಾನು ಅವರನ್ನು ಸೇರಿಸಿಲ್ಲ. ಪಟ್ಟಣಗಳಲ್ಲಿರತಕ್ಕ ಜನಗಳು ಎಲ್ಲ ವಿಧದಲ್ಲೂ ಸುಖಸಂತೋಷಗಳನ್ನು ಅನುಭವಿಸುತ್ತಿದ್ದಾರೆ. ಎಲ್ಲಾ ಸೌಕರ್ಯಗಳೂ ಅವರಿಗೆ ದೊರೆಯುತ್ತಿರುತ್ತವೆ. ಅವರಿಗೆ ಹಳ್ಳಿಗಾಡಿನವರ ಕಷ್ಟಗಳು ಯಾವುದೂ ಗೊತ್ತಾಗುತ್ತಿಲ್ಲ. ಈ ಕಾರಣ ಅವರು ತಮಗೆ ಇಷ್ಟ ಬಂದಂತೆ, ತಮಗೆ ಅನುಕೂಲವಾಗುವಂತೆ ಅಭಿಪ್ರಾಯಗಳನ್ನು ತಿಳಿಸುವುದರಲ್ಲಿ ಮಗ್ನರಾಗಿದ್ದಾರೆ. ಹಳ್ಳಿಗಾಡಿನವರ ಕಷ್ಟದಿಂದ ಸುಖವನ್ನು ಅನುಭವಿಸುತ್ತಾ, ಆ ಸುಖದಲ್ಲಿ ಹಳ್ಳಿಗಾಡಿನವರನ್ನು ಮರೆತಿದ್ದಾರೆಂದು ಹೇಳಿದರೆ ಸಾಕು.

ಇದನ್ನು ಇನ್ನು ಹೆಚ್ಚಿಗೆ ಬೆಳೆಸುವುದಿಲ್ಲ. ಈ ವರದಿಯ ಮೇಲೆ ಈ ಸಭೆಯ ನಾಯಕರು ಕೆಲವು ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಆದರೆ, ಅವರೇ ಹೇಳಿದಂತೆ, ಅವರು ಈ ಸಭೆಯ ನಾಯಕರಾಗಿ ಮಾತನಾಡಿಲ್ಲ. ವೈಯಕ್ತಿಕವಾಗಿ ಹನುಮಂತಯ್ಯನವ

ರಾಗಿ ಮಾತನಾಡುತ್ತಿದ್ದೇನೆ ಎಂದು ಅವರೇ ಹೇಳಿದರು.

1-30 P.M.

ಅವರು ಏನಾದರೂ ಹೇಳಿರಲಿ, ಅವರ ಭಾಷಣದ ಕೆಲವು ಅಂಶಗಳನ್ನು ಮಾತ್ರ ನಾನೀಗ ಇಲ್ಲಿ ಹೆಚ್ಚಿಗೆ ಚರ್ಚಿಸಬೇಕಾಗಿದೆ. ಇವರು S.R.C. ರಿಪೋರ್ಟಿನಲ್ಲಿ ಹೇಳಿರತಕ್ಕ ಅಭಿಪ್ರಾಯಗಳೇನಿವೆಯೋ ಅವುಗಳ ವಿಷಯಗಳನ್ನು ಎತ್ತಿ ಹಿಡಿಯದೆ ರಿಪೋರ್ಟು ಅಷ್ಟು ಸಮರ್ಪಕವಾಗಿ ಕೂಡಿದ್ದಾಗಿಲ್ಲವೆಂದು ಹೇಳಿ, ಕೆಲವು ನೀತಿಬೋಧೆಗೆ ಸಂಬಂಧಪಟ್ಟ ವಿಷಯಗಳನ್ನು ಸೇರಿಸಿಕೊಂಡು ಅವರೊಂದು ಭಾಷಣಮಾಡಿ ಇದೇ ಮುಖ್ಯ ಮಂತ್ರಿಗಳ ಭಾಷಣ ಎಂದು ಹೇಳಿದ್ದಾರೆ. ಆದರೆ ಈ ಭಾಷಣವನ್ನು ಅವರು ಮುಖ್ಯಮಂತ್ರಿಗಳಾಗಿ ಮಾಡಿಲ್ಲ. ಅವರು ಕೇವಲ ಹನುಮಂತಯ್ಯನವರಾಗಿ ಈ ಭಾಷಣ ಮಾಡಿದ್ದಾರೆಂದು ನಾನೀಗ ತಿಳಿಸಬೇಕಾಗಿದೆ. S.R.C. ರಿಪೋರ್ಟಿನಲ್ಲಿ ಎಲ್ಲಾ ಕಡೆಗಳಲ್ಲೂ ಅವರು ಒಂದೇತರಹದ ಅಭಿಪ್ರಾಯಗಳನ್ನು ವ್ಯಕ್ತಪಡಿಸಿರುವುದಿಲ್ಲ. ಒಂದು ಕಡೆಯಲ್ಲಿರತಕ್ಕಂಥ ಸನ್ನಿವೇಶಗಳನ್ನು ನಿಕೃಷ್ಟವಾಗಿ ಎಣಿಸಿದ್ದಾರೆ. ಅದೇ ಸನ್ನಿವೇಶಗಳಿರತಕ್ಕಂಥ ಮತ್ತೊಂದು ಕಡೆಯಲ್ಲಿ ಅವುಗಳನ್ನೇ ಪ್ರಬಲವಾಗಿ ಎತ್ತಿ ಹಿಡಿದಿದ್ದಾರೆ. ಅವುಗಳನ್ನು ಒಪ್ಪಬೇಕೆಂದು ಹೇಳಿದ್ದಾರೆ. ಇದರಿಂದ ದೇಶಕ್ಕೂ, ಜನಗಳಿಗೂ ಸೌಖ್ಯವಿದೆ ಎಂದು ಹೇಳಿ ಅವರ ವಾದವನ್ನೇ ಎತ್ತಿ ಹಿಡಿದಿದ್ದಾರೆ. ಶ್ರೀಮಾನ್ ಹನುಮಂತಯ್ಯನವರು ಹೇಳಿದಂತೆ, 1942ರಲ್ಲಿ ಅವರು ಅಸೆಂಬ್ಲಿಯಲ್ಲಿದ್ದರು. ನಾನೂ ಸಹ ಅವರಂತೆ ಅದೇ ಅಸೆಂಬ್ಲಿಯಲ್ಲಿದ್ದೆ. ಈ ಬಗ್ಗೆ ಅವರು ಅನೇಕ ವಿಚಾರಗಳನ್ನು ಚರ್ಚೆಮಾಡಿದ್ದಾರೆ. ಅನಂತರ 1953ರಲ್ಲಿ ಬಳ್ಳಾರಿಯ ಬಿಲ್ಲು ಬಂದಾಗ ಅದರ ವಿಚಾರದಲ್ಲೂ ಇವರು ಬಹಳ ಮಾತನಾಡಿದ್ದಾರೆ. ಆದರೆ ಶ್ರೀ ಹನುಮಂತಯ್ಯನವರು 1942ರಿಂದ ಅಸೆಂಬ್ಲಿಗೆ ಸದಸ್ಯರಾಗಿದ್ದರೆ ನಾನು ಅವರಿಗಿಂತಲೂ ಹೆಚ್ಚು ದಿವಸಗಳಿಂದ ಸದಸ್ಯನಾಗಿರುತ್ತೇನೆ. ಆದರೆ ಇವರು ಯಾವ ಒಂದು ಸಂದರ್ಭದಲ್ಲೇ ಆಗಲಿ ಮೊನ್ನೆ ಕೊಟ್ಟಂಥ ಒಂದು ಖಚಿತವಾದ ಹೇಳಿಕೆಯೇನಿದೆಯೋ ಅಂಥ ಒಂದು ಖಚಿತವಾದ ಹೇಳಿಕೆಯನ್ನಾಗಲಿ ಅಥವಾ ಅಭಿಪ್ರಾಯವನ್ನೇ ಆಗಲಿ ನನಗೆ ತಿಳಿದಿರುವ ಮಟ್ಟಿಗೆ, ನಾನು ಕಂಡಹಾಗೆ ಅವರು ಅಧಿಕಾರಯುತವಾಗಿ ಹೇಳಿರತಕ್ಕದ್ದು ನನಗಿನ್ನೂ ಸಿಕ್ಕಿಲ್ಲ. ನಾನಂತೂ ಇಲ್ಲ ಅಂತಲೇ ಹೇಳುತ್ತೇನೆ. ಅವರು ಕೊನೆಗಾದರೂ ಹುಡುಕಿ ತಿಳಿಸುವುದಾದರೆ ಬಹಳ ಸಂತೋಷ. ಆದರೆ ಅವರು ಇತ್ತೀಚೆಗೆ ಯಾವ ರೀತಿ ತಮ್ಮ ಅಭಿಪ್ರಾಯಗಳನ್ನು ಬದಲಾಯಿಸಿಕೊಳ್ಳಲು ಹೊರಟಿದ್ದಾರೆ ಎನ್ನುವುದನ್ನು ನಾನು ಅವರಿಗೊಬ್ಬ ಕೇವಲ ಅತ್ಯಂತ ಆತ್ಮೀಯ ಸ್ನೇಹಿತನಾಗಿ, ಅವರಲ್ಲಿ ಒಂದು ಹೆಚ್ಚಿನ ಆಸಕ್ತಿಯುಳ್ಳವನಾಗಿ, ಅವರ ಶ್ರೇಯೋಭಿವೃದ್ಧಿಗೂ, ಅವರ ಮೇಲ್ಮೆಗೂ ನಾನೂ ಒಬ್ಬ ಮುಖ್ಯ ಕಾರಣನಾಗಿದ್ದುಕೊಂಡು, ಅವರು ಈ ದಿವಸ ಈ ಮಟ್ಟಕ್ಕೆ ಬರಲು, ಇಂಥ ಒಂದು ಸುಯೋಗವನ್ನು ಅನುಭವಿಸಲು. . . . .

ಒಬ್ಬ ಮಾನ್ಯ ಸದಸ್ಯರು.—ಓಹೋ ಹಾಗಾದರೆ ಆ "ಮೂಡಲಗಿರಿ ನಿವಾಸ" ನೀವೇ !

(ಸಭೆಯಲ್ಲಿ ನಗು)

ಶ್ರೀ ಟಿ. ಎನ್. ಮೂಡಲಗಿರಿಗೌಡ.—ನಾನು ಅವರಿಗಾಗಿ ನನ್ನ ಶಕ್ತಿಯನ್ನೆಲ್ಲಾ ವಿನಿಯೋಗಿಸಿದ್ದೇನೆ. ಅವರ ಇತ್ತೀಚಿನ ನಿಲುವನ್ನು ಅರಿತಿದ್ದೇನೆಂದು ಹೇಳಿದರೆ ಇದನ್ನು ಅವರು ಅರ್ಥಮಾಡಿಕೊಳ್ಳಬಲ್ಲರು ಎಂದು ನಾನು ತಿಳಿದುಕೊಂಡಿದ್ದೇನೆ. ಇವರು ಏತಕ್ಕಾಗಿ ಆಶ್ಚರ್ಯವಾದ ಭಾಷಣವನ್ನು ಈ ವರದಿಯ ಪರವಾಗಿ ಮಾಡಿದ್ದಾರೆ ಅಂದರೆ ಇವರು ಅಂಥ ಒಂದು ದೊಡ್ಡ ಭಾಷಣವನ್ನು ಮಾಡಿದ್ದು S.R.C.ರಿಪೋರ್ಟಿನ ವಿಷಯದ ಚರ್ಚೆಗಿಂತಲೂ ಈ ಮಾನ್ಯ ಸಭೆಯ ಸದಸ್ಯರ ಮಾನವನ್ನು ತಾವು ಒಲಿಸಿಕೊಳ್ಳಬೇಕೆಂದು ಒಂದು ಆಕಾಂಕ್ಷೆಯಿಂದ ಅಂಥ ಒಂದು ಭಾಷಣವನ್ನು ಅವರು ಮಾಡಿರುತ್ತಾರೆಯೇ ಹೊರತು ಅವರು ಈ S.R.C. ರಿಪೋರ್ಟಿನ ಮೇಲೆ ಏನಾದರೂ ಒಂದು ವಿಷಯವನ್ನು ಹೇಳಿದ್ದರೆ ಅದು ಮುಖ್ಯಮಂತ್ರಿಗಳ ಭಾಷಣ ಎಂದು ನಾನು ಹೇಳುತ್ತಿದ್ದೆ. ಇವರು ಹಣಕಾಸಿನ ಸಚಿವರಾಗಿ ದೇಶದ ಹಣಕಾಸಿನ ವಿಚಾರದಲ್ಲಿ ಎಷ್ಟು ಲಘುವಾಗಿ ಮಾತನಾಡಿದ್ದಾರೆ, ಎಷ್ಟು ಹಗುರವಾಗಿ ಮಾತನಾಡಿದ್ದಾರೆ ಎನ್ನುವುದನ್ನೀಗ ನಾನು ತಿಳಿಯಬಯಸುತ್ತೇನೆ. ಇವರು ಮೈಸೂರು ಅಸೆಂಬ್ಲಿಯಲ್ಲಿ ಮುಖ್ಯ ಮಂತ್ರಿಗಳಾಗಿದ್ದುಕೊಂಡು ಕೊಡಗು, ಮದರಾಸು, ಇತ್ತ ಹೈದರಾಬಾದು ಮತ್ತು ಬೊಂಬಾಯಿ ಈ ಅಸೆಂಬ್ಲಿಗಳೆಲ್ಲಾ ಸೇರಿ ಇದನ್ನು ತೀರ್ಮಾನಮಾಡಿದರಲ್ಲವೇ ಇದು ಬಗೆಹರಿಯುವುದು ಎಂದು ಪ್ರಸ್ತಾಪಿಸುತ್ತಾ ಅವುಗಳೆಲ್ಲಾ ಈ ಪ್ರಾಂತಗಳ ಪುನರ್ವಿಂಗಡಣೆಗೆ ಒಪ್ಪಿಕೊಂಡಿರುವುದರಿಂದ ಈಗ ಕರ್ಣಾಟಕ ಪ್ರಾಂತ್ಯ ಆಗಿಯೇ ಆಗುತ್ತದೆ ಎಂದು ತಿಳಿಸಿದರು. ಹೀಗೆ ಅವರೇಕೆ ಮಾತನಾಡಿದ್ದಾರೆ ಎಂದು ಕೇಳಿದರೆ ಈ ಸಭೆಯಲ್ಲಿರತಕ್ಕ ಮಾನ್ಯ ಸದಸ್ಯರುಗಳು ಗಾಬರಿಗೊಂಡು, ಹೀಗೆಲ್ಲಾ ಅಷ್ಟು ಹೊರ ಪ್ರಾಂತ್ಯಗಳ ಶಾಸನ ಸಭೆಗಳು ಈ ವಿಚಾರವನ್ನು ಒಪ್ಪಿಕೊಂಡಿರುವುದರಿಂದ ತಾವೀಗ ಇದರ ಬಗ್ಗೆ ಎಷ್ಟೇ ಹೊಡೆದಾಡಿದರೂ ಇದನ್ನು ಉಳಿಸಿಕೊಳ್ಳುವುದಕ್ಕೆ ಆಗುವುದಿಲ್ಲ ಎಂಬ ಒಂದು ಅಭಿಪ್ರಾಯ ಅವರಲ್ಲಿ ಮೂಡುವಂತೆ ಮಾಡಿ, ತನ್ಮೂಲಕ ತಮ್ಮ ಕಾರ್ಯಸಾಧನೆಯನ್ನು ಹಗುರ ಮಾಡಿಕೊಳ್ಳಲು ಅವರು ಅಂಥ ಒಂದು ವಾದವನ್ನು ಎತ್ತಿಹಿಡಿದು ಸಭೆಯ ಸದಸ್ಯರನ್ನು ಕ್ಯಾನ್‌ವಾಸ್ ಮಾಡಿದ್ದಾರೆ. ಇದೇ ಸಂಬಂಧದಲ್ಲಿ ಅವರು ಮಾತನಾಡುತ್ತ, ಈ ರಾಜ್ಯಗಳ ಪುನರ್ವಿಂಗಡಣೆಯ ಸಂಬಂಧವಾಗಿ ಪಾರ್ಲಿಮೆಂಟಿನವರು ಒಂದು ಬಿಲ್ಲನ್ನು ತಯಾರಿಸುತ್ತಾರೆ, ಆ ಬಿಲ್ಲು ಎಲ್ಲಾ ಸಂಸ್ಥಾನಗಳ ಅಸೆಂಬ್ಲಿಗಳಲ್ಲೂ ಚರ್ಚೆಗೆ ಬಂದೇ ಬರುತ್ತದೆ, ಮತ್ತು ಎಲ್ಲಾ ಸ್ಟೇಟುಗಳ ಅಸೆಂಬ್ಲಿಯಲ್ಲೂ 'ಪಾಸ್' ಆಗೇ ಆಗುತ್ತದೆ, ಆದರೆ ನಮ್ಮ ಒಂದು ಅಸೆಂಬ್ಲಿಯಲ್ಲಿ ಪಾಸಾಗದೆ ಹೋದರೆ ಅನಂತರ ಪಾರ್ಲಿಮೆಂಟಿನಲ್ಲಿ ಕೇಂದ್ರ ಸರ್ಕಾರದವರು ಬಹುಮತಾಭಿಪ್ರಾಯದಂತೆ ಇದನ್ನು ತೀರ್ಮಾನ ಮಾಡಿಯೇ ಮಾಡುತ್ತಾರೆ ಎಂದು ಸಹ ಹೇಳಿದರು. ಇದೇ ರೀತಿ ಇವರ ಸಹೋದ್ಯೋಗಿಗಳಾದ ಶ್ರೀ ಎಚ್. ಸಿದ್ದವೀರಪ್ಪನವರೂ ಸಹ ಉದಾಹರಿಸಿದ್ದಾರೆ.

"Parliament is the sovereign authority."

ಹೌದು. ಅದು ಕಾನ್ಸ್ಟಿಟ್ಯೂಷನ್ನಲ್ಲಿದೆ. ಆ ವಿಚಾರ ನನಗೂ ಗೊತ್ತಿದೆ. ಆ ಬಗ್ಗೆ ಶ್ರೀ ಎಚ್. ಕೆ. ವೀರಣ್ಣಗೌಡರು ಚೆನ್ನಾಗಿ ಹೇಳಿದ್ದಾರೆ.

ಒಬ್ಬ ಮಾನ್ಯ ಸದಸ್ಯರು.—ಅವರು ಇನ್ನೂ ಮಾತನಾಡಿಯೇ ಇಲ್ಲ!

ಶ್ರೀ ಟಿ. ಎನ್. ಮೂಡಲಗಿರಿಗೌಡ.—ಈ ವಿಷಯವನ್ನು ಆ ಹೈಪವರ್ ಸಮಿತಿಯವರ ಪರಿಶೀಲನೆಗೇ ಬಿಟ್ಟು ಕೊಡುವುದಾಗಿದ್ದರೆ ಈ ದಿವಸ ನಾವುಗಳು ಯಾರೂ ಇಲ್ಲಿ ಕುಳಿತು ಇದನ್ನು ಪ್ರಸ್ತಾಪಮಾಡಬೇಕಾ

(ಶ್ರೀ ಟಿ. ಎನ್. ಮುಡಲಗಿರಿಗೌಡ.)

ಗುವುದರ ಅಗತ್ಯವೇ ಇರಲಿಲ್ಲವಲ್ಲ ? ಈ ವಾದ ಎಷ್ಟು ಸರಿಯಾದ ವಾದ ಎನ್ನುವುದು ಎಲ್ಲ ಮಾನ್ಯ ಸದಸ್ಯರಿಗೂ ಗೊತ್ತಿದೆ. ಪ್ರತಿಯೊಬ್ಬರೂ ತಮ್ಮ ತಮ್ಮ ಜವಾಬ್ದಾರಿಯೇನೆಂಬುದನ್ನು ತಿಳಿದುಕೊಂಡಿದ್ದಾರೆ. ಆದರೆ ಪಾರ್ಲಿಮೆಂಟಿನವರು ನಮ್ಮಗಳ ಅಭಿಪ್ರಾಯವನ್ನು ಅಷ್ಟೊಂದು ತೃಣೀಕರಿಸಿ, ಪ್ರಜಾಪ್ರಭುತ್ವ ತತ್ವಗಳನ್ನೆಲ್ಲಾ ಅಳಿಸಿಹಾಕಿ, ಈ ಹೊತ್ತು ಡಿಕ್ಟೇಟರಂತೆ ಅವರ ಅಭಿಪ್ರಾಯಕ್ಕೆ ಮನ್ನಣೆ ಕೊಟ್ಟುಕೊಳ್ಳುವುದಾದರೆ ಮುಂದೆ ಇದರ ಪರಿಣಾಮವೇನಾಗುತ್ತದೆ ಎನ್ನುವುದನ್ನೂ ಅವರು ಮತ್ತು ಜನರೂ ಸಹ ಅರಿತಿದ್ದಾರೆಂದು ನಾನು ತಿಳಿದುಕೊಂಡಿದ್ದೇನೆ. ಎರಡುಕೋಟಿ ಖೋತಾ ಬರುತ್ತಿರುವಾಗಲೇ ಈಗಿರುವ ರಾಜ್ಯವನ್ನೇ ಸರಿಯಾಗಿ ಪರಿಪಾಲನೆ ಮಾಡಲು ಈ ಸರ್ಕಾರಕ್ಕೆ ಸಾಧ್ಯವಾಗುತ್ತಿಲ್ಲ; ಎನ್ನುವ ಒಂದು ನೆಪದಮೇಲೆ ಈ ಕಾರ್ಯವನ್ನು ನಿಲ್ಲಿಸುವುದಕ್ಕೆ ಆಗುವುದಿಲ್ಲ ಎನ್ನುವ ಅರ್ಥ ಬರುವಂತೆ ಮಾನ್ಯ ಹಣಕಾಸಿನ ಸಚಿವರಾದ ಶ್ರೀ ಕೆ. ಹನುಮಂತಯ್ಯನವರು ತಿಳಿಸಿದರು. ಹಾಗೆ ಹೇಳುತ್ತ ಈ ಒಂದು ದೊಡ್ಡ ಪ್ರಶ್ನೆಯನ್ನು ಈ ಕಾರಣಕ್ಕಾಗಿ ವಿರೋಧಿಸುವುದು ಸರಿಯಾದುದಲ್ಲ ಎಂದು ಹೇಳಿದರು. ಆದರೆ ಅವರು ಹಣಕಾಸಿನ ಸಚಿವರಾಗಿದ್ದುಕೊಂಡು ಹಣಕಾಸಿನ ವಿಚಾರದಲ್ಲಿ ಇಷ್ಟು ಹಗುರವಾಗಿ ಮಾತನಾಡುವುದು ಅವರಿಗೆ ಸರಿಯೇ ಎಂದು ನಾವೀಗ ಕೇಳಬೇಕಾಗಿದೆ. ನಮ್ಮ ಸಂಸ್ಥಾನದ ಹುಟ್ಟುವಳಿಯಲ್ಲಿ ನಮಗೆ ಎರಡುಕೋಟಿ ರೂಪಾಯಿಗಳು ಖೋತಾಬರಲು ಕಾರಣವೇನೆಂಬುದನ್ನು ಗಮನಿಸಿ ನೋಡಿದರೆ ನಾವೀ ದಿವಸ ಅನೇಕ ಅನವಶ್ಯಕವಾದ ಬಾಬುಗಳಿಗಾಗಿ ಅಪಾರ ಹಣವನ್ನು ಖರ್ಚು ಮಾಡುತ್ತಿರುವುದರಿಂದ ಈ ಖೋತಾ ಬರಲು ಅವಕಾಶವಾಯಿತು. ಉದಾಹರಣೆಗೆ ಈ ಸಂಸ್ಕೃತಿ ಪ್ರಸಾರ. ಈ ಬಾಬಿಗಾಗಿ ಲಕ್ಷಾಂತರ ರೂಪಾಯಿಗಳನ್ನು ಖರ್ಚುಮಾಡುವುದು ಸರಿಯಾದದ್ದಲ್ಲ ಎಂದು ಎಷ್ಟೋ ವೇಳೆ ಈ ಮಾನ್ಯ ಸಭೆಯಲ್ಲೇ ನಾವು ಚರ್ಚೆ ಮಾಡಿದ್ದೇವೆ. ಹೀಗೆ ಇನ್ನೂ ಎಷ್ಟೋ ಅನವಶ್ಯಕವಾದಂಥ ಬಾಬುಗಳಿಗೆ ಕೋಟಿಗಟ್ಟಲೆ ಹಣವನ್ನು ಖರ್ಚುಮಾಡುತ್ತಿದ್ದೇವೆ. ಇಂಥ ಖರ್ಚು ವೆಚ್ಚಗಳನ್ನೆಲ್ಲಾ ನಾವು ತಡೆಗಟ್ಟಲು ತೊಡಗಿದ್ದರೆ ಹೀಗೆ ಖೋತಾ ಬಜೆಟ್ಟಾಗಲು ಅವಕಾಶವೇ ಇರುತ್ತಿರಲಿಲ್ಲ ಎನ್ನುವುದನ್ನು ತಿಳಿಸುವುದಕ್ಕೆ ಬದಲಾಗಿ ಈಗಾಗಲೇ ನಮ್ಮ ಬಜೆಟ್ 2 ಕೋಟಿ ರೂಪಾಯಿಗಳ ಖೋತಾ ಬಜೆಟ್ಟಾಗಿದೆ ಎಂದು ಅವರು ಹೇಳಿದ್ದು ಅಸಮಂಜಸವಾದ ಮಾತು. ಅದು ಸರಿಯಾದುದಲ್ಲ. ಹಾಗೂ ಅದು 'ಮಿಸ್‌ಲೀಡಿಂಗ್' ಎಂದು ಈಗಾಗಲೇ ಶ್ರೀ ವೀರಣ್ಣಗೌಡರು ಹೇಳಿರತಕ್ಕದ್ದು ಸರಿಯಾದದ್ದೇ. ಆದಕಾರಣ ನಾನಿನ್ನು ಈ ವಿಚಾರದಲ್ಲಿ ಹೆಚ್ಚು ಭಾಷಣ ಮಾಡುವುದಕ್ಕೆ ಹೋಗುವುದಿಲ್ಲ. ಕಾಲಾವಕಾಶವನ್ನು ಕೊಟ್ಟರೆ ಇಂಥ ಅನವಶ್ಯಕವಾದ ವೆಚ್ಚದ ಉದಾಹರಣೆಗಳನ್ನು ನೂರಾರು ಕೊಡಬಲ್ಲೆ. ಅವುಗಳಿಗೆಲ್ಲಾ ಈಗ ಕಾಲಾವಕಾಶವಿಲ್ಲ. ಆದರೆ ಈ ಸಂದರ್ಭದಲ್ಲಿ ನಾನೊಂದು ವಿಶೇಷ ಅಂಶವನ್ನು ಪ್ರಸ್ತಾಪಿಸಬೇಕಾಗಿದೆ. ಈ ದಿವಸ ಇರುವ ಇಷ್ಟೊಂದು ಅತ್ಯುನ್ನತ ಮಟ್ಟದ ಮೈಸೂರನ್ನು ಕಟ್ಟಲು ನಮ್ಮವರು ಮೊದಲು ಪ್ರಯತ್ನಪಟ್ಟ ಕಾಲದಲ್ಲಿ ನಮ್ಮ ಮೈಸೂರಿನ ಉತ್ಪತ್ತಿಯೆಲ್ಲಾ ಆಗ ಕೇವಲ ಮೂರುಕೋಟಿ ಇತ್ತು. ಆಗಲೇ ಮೈಸೂರು ಸಂಸ್ಥಾನ ಸೆಲ್ಫ್ ಸಫಿಷಿಯೆಂಟಾಗಿತ್ತು. ಆಗಲೇ ತಾನೆ ಇಂದು ಮೈಸೂರಿನಲ್ಲಿರತಕ್ಕ ಕನ್ನಂಬಾಡಿಯಂಥಾ ದೊಡ್ಡ ಎಲ್ಲ ಜಲಾಶಯಗಳೂ, ನಾವಿಲ್ಲಿ ಕುಳಿತಿರುವ ಸೆಕ್ರೆಟೇರಿಯೆಟ್‌ನಂಥ ದೊಡ್ಡ ಕಟ್ಟಡಗಳೂ, ರೈಲ್ವೆ ಮಾರ್ಗಗಳೂ ಆದದ್ದು ? ಎಲೆಕ್ಟ್ರಿಸಿಟಿಯನ್ನು ಉತ್ಪತ್ತಿ ಮಾಡಿದ್ದು ಆ ಕಾಲದಲ್ಲೇ. ಆ ರೀತಿ 3 ಕೋಟಿ ಉತ್ಪತ್ತಿ ಇದ್ದು ಅಷ್ಟೆಲ್ಲಾ ಆಗಿದ್ದರೆ, ಈ ದಿವಸ ಇಷ್ಟು ಉತ್ಪತ್ತಿ ಹೆಚ್ಚಿದ್ದರೂ ದೇಶವನ್ನು ಎಷ್ಟರಮಟ್ಟಿಗೆ ರೂಪಿಸಿದ್ದಾರೆ ಎನ್ನುವುದನ್ನು ನೋಡಿ ! ಈ ದಿವಸ ದೇಶದ ಉತ್ಪತ್ತಿ 20 ಕೋಟಿ ರೂಪಾಯಿಗಳಿಗೆ ಏರಿದೆ. ಆಗಿದ್ದ 3 ಕೋಟಿಯಲ್ಲೇ ಅವರು ಅಷ್ಟೊಂದು ಕೆಲಸಗಳನ್ನೆಲ್ಲಾ ಹೇಗೆ ತೂಗಿಸಿಕೊಂಡು ಬಂದರು, ಇಂದು ದೇಶದ ಆದಾಯ ಹೆಚ್ಚಿದ್ದರೂ ಏಕೆ ಈ ರೀತಿ ಖೋತಾ ಬಜೆಟ್ಟಾಗಿದೆ ಅನ್ನುವುದನ್ನು ಲೆಕ್ಕ ಹಾಕಿದರೆ ಇದರಲ್ಲಿ ಅನವಶ್ಯಕವಾದ ವೆಚ್ಚಗಳೇ ಇಷ್ಟಕ್ಕೆಲ್ಲಾ ಕಾರಣವೆಂದು ಗೊತ್ತಾಗುತ್ತದೆ. ದೇಶ ಈ ಹೊತ್ತು ಈ ಸ್ಥಿತಿಯಲ್ಲಿರುವುದು ಆ ಹಿಂದಿನವರ ಜಾಣ್ಮೆಯಿಂದ. ಆ ಅಂಶವನ್ನು ಮಾನ್ಯ ಶ್ರೀ ಕೆ. ಹನುಮಂತಯ್ಯನವರು ತಿಳಿದುಕೊಳ್ಳಬೇಕು. ಈಗಲೂ ಸಹ ನಾವು ಆ ಹಿಂದಿನವರಂತೆಯೇ ನಡೆಯತಕ್ಕಂಥ ಬುದ್ಧಿವಂತಿಕೆ, ನಡೆ ನುಡಿಗಳನ್ನು ಅನುಸರಿಸುವುದು ಉತ್ತಮ ಎನ್ನುವುದನ್ನು ಇವರು ಅರಿಯಬೇಕು. ನಮ್ಮ ದೇಶಕ್ಕೆ ಈ ದಿವಸ ಸೆಂಟರಿನವರು ಹಣ ಸಹಾಯ ನೀಡದೆ ಹೋಗಿದ್ದರೆ ನಾವು ಈ ದಿವಸ ನಮ್ಮ ಸಂಸ್ಥಾನದಲ್ಲಿ ಒಂದು ಸ್ಕೂಲನ್ನಾಗಲಿ ಹೊಸದಾಗಿ ಪ್ರಾರಂಭಿಸಲು ಸಾಧ್ಯವಾಗುತ್ತಿರಲಿಲ್ಲ ಎಂದು ಅವರು ಹೇಳಿದ್ದಾರೆ. ಇವರು ಹಣಕಾಸಿನ ಸಚಿವರಾಗಿದ್ದುಕೊಂಡೂ ಇಂಥ ಮಾತನಾಡಬಹುದೇ ? ಇದೆಷ್ಟು ನಾಚಿಕೆಗೇಡು ? ಇದು ನಮ್ಮ ದೇಶದ ದೌರ್ಭಾಗ್ಯ; ಹಣಕಾಸಿನ ಸಚಿವರೇ ಇಂಥ ಭಾಷಣ ಮಾಡುವುದು ತುಂಬ ವ್ಯಸನ. ಇದು ಅವರ ಸ್ಥಾನಕ್ಕೆ ಸರಿಯಾದ ಭಾಷಣವಲ್ಲ. ನಮ್ಮ ದೇಶದ ದಿನಚರಿಯ ಕೆಲಸಗಳನ್ನು ನಡೆಸಿಕೊಂಡು ಹೋಗಲು ನಮಗೆ ಇಲ್ಲಿ ಸಾಕಷ್ಟು ಹಣದ ಭದ್ರತೆಯಿದೆ. ನಮ್ಮ ಅಭಿವೃದ್ಧಿ ಕಾರ್ಯಕ್ರಮಗಳು ಸಾಂಗವಾಗಿ ನಡೆಯುತ್ತಿವೆ. ಮಾಮೂಲಿನಂತೆ, ಕೇಂದ್ರದ ಹಣಕಾಸಿಗೆ ಬಾಯಿಬಿಡದೆ, ನಾವು ಇಲ್ಲಿ ನಮ್ಮ ಹೊಸ ಹೊಸ ಯೋಜನೆಗಳನ್ನು ನಡೆಸಿಕೊಂಡು—ನಮ್ಮ ಶಾಲಾ ಕಾಲೇಜುಗಳ ಮತ್ತು ಕಛೇರಿಗಳ ಕಾರ್ಯ ನಡೆಸಿಕೊಂಡು ಹೋಗಲು ಅವಕಾಶವಿದೆ. ಹಾಗಿದ್ದರೂ ಇವರು ಈ ಬಾಬುಗಳಿಗೆಲ್ಲಾ ಸೆಂಟರಿನಿಂದ ಹಣ ತಂದು ಹಾಕಿದ್ದೇವೆ ಎಂದು ಹೇಳಿದ್ದಾರೆ. ಅವರು ಹಣಕಾಸಿನ ಆಡಳಿತ ನಡೆಸುವ ಸ್ಥಾನದಲ್ಲಿ ಕುಳಿತು ಹೀಗೆ ಹೇಳಿರತಕ್ಕದ್ದು ಸರಿಯಾದದ್ದಲ್ಲ ಎಂದು ಹೇಳುತ್ತೇನೆ. ನಾವು ಈ ದಿವಸ ಮೈಸೂರು ಸಂಸ್ಥಾನದ ಅಭಿವೃದ್ಧಿಯನ್ನೂ ಮತ್ತು ಸಂಸ್ಥಾನದಲ್ಲಿ ನಡೆಯುತ್ತಿರುವ ದಿನಚರಿಯ ಕೆಲಸ ಕಾರ್ಯಗಳನ್ನೂ ಯಾವ ತೊಂದರೆಯೂ ಇಲ್ಲದೆ ನಡೆಸಿಕೊಂಡು ಹೋಗುತ್ತಿದ್ದೇವೆ. ಈ ಸರ್ಕಾರ ಮೊದಲಿನಿಂದಲೂ ಬೆಳೆದು ಬಂದಿದೆ. ಶ್ರೀ ಕೆ. ಹನುಮಂತಯ್ಯನವರೇನೂ ಮೊದಲಿನಿಂದಲೂ ಆಡಳಿತ ನಡೆಸುತ್ತಾ ಬಂದಿಲ್ಲ. ಆ ಸೆಂಟರಿನವರಾದರೂ ಹಣ ಕೊಡುವುದು ಯಾವ ಆಧಾರದ ಮೇಲೆ ? ಅವರು ನಮ್ಮಿಂದ ಕಸಿದುಕೊಂಡು ಇರುವ ರೈಲ್ವೆ, ಇನ್‌ಕಂ ಟ್ಯಾಕ್ಸ್ ಇವುಗಳ ಉತ್ಪತ್ತಿ ಕೊಡುತ್ತಾರೊ ಈ ಸಭೆಯೇ ಅರಿಯಲಿ. ನಮ್ಮಲ್ಲೂ ಹಣವಿದ್ದರೆ ತಾನೇ ಅವರಾದರೂ ಹಾಗೆ ನಮಗೆ ಹಣ ಸಹಾಯ ನೀಡುವುದು ? ಹಾಗೆಯೇ ನಾವು ಬರಿಗೈಯಲ್ಲಿದ್ದರೆ ಯಾರೂ ನಮಗೆ ಸಹಾಯ ನೀಡುವುದಿಲ್ಲ. ಅಂಥ ಒಂದು ನೀತಿಯನ್ನು ನಮ್ಮ ಸ್ಟೇಟು ಈ ದಿವಸ

ಉಳಿಸಿಕೊಳ್ಳದೆ ಇಲ್ಲ ಎಂದು ನಾನು ತಿಳಿದುಕೊಂಡಿದ್ದೇನೆ.

ಸ್ವಾಮಿ, ಹೀಗೆ ಇವರು ಈ ವಿಷಯಗಳನ್ನು ಪ್ರಸ್ತಾಪ ಮಾಡುತ್ತ ಆ ಹರಿಜನರ ವಿಷಯವನ್ನೂ ಸಹ ಪ್ರಸ್ತಾಪ ಮಾಡುವುದಕ್ಕೆ ಹೋಗಿದ್ದಾರೆ. ಅವರು ಈ ಸಂದರ್ಭದಲ್ಲಿ ಆ ಹರಿಜನರ ವಿಚಾರವನ್ನು ಪ್ರಸ್ತಾಪ ಮಾಡಬೇಕಾದ್ದೇನೂ ಇರಲಿಲ್ಲ. ಹಾಗಿದ್ದರೂ ಮಾಡಿದ್ದಾರೆ. ಈ ಹರಿಜನರ ಅಭಿವೃದ್ಧಿಗೋಸ್ಕರವಾಗಿ, ಈ ಜನರ ಮೇಲ್ಮೆಗಾಗಿ, ಇವರ ವಿಷಯದಲ್ಲಿ ನಾವು ಎಷ್ಟು ವರ್ಷಗಳಿಂದ ಹಣವನ್ನು ಹೇಗೆ ಹೇಗೆ ಖರ್ಚು ಮಾಡುತ್ತಿದ್ದೇವೆ, ಏನೇನು ಇದಕ್ಕಾಗಿ ಕಷ್ಟಗಳನ್ನು ಅನುಭವಿಸುತ್ತಿದ್ದೇವೆ, ಈ ಹರಿಜನರಿಗೆ ಒಂದಲ್ಲ ನಾನಾ ರೀತಿಗಳಲ್ಲಿ ಒಂದು ಮನೆ ಕಟ್ಟಿಕೊಳ್ಳುವುದರ ವಿಷಯದಲ್ಲಾಗಲಿ ಹೀಗೆ ಮತ್ತೊಂದು ಮಗದೊಂದು ಎಲ್ಲ ವಿಷಯಗಳಲ್ಲಿಯೂ ಎಷ್ಟೊಂದು ಆತಂಕಗಳನ್ನು ನಾವು ನೀಗಿಸುತ್ತಾ ಬಂದಿದ್ದೇವೆ ಅನ್ನುವುದನ್ನು ಈ ಮಾನ್ಯ ಸಭೆಯಲ್ಲಿರುವ ಎಲ್ಲ ಮಾನ್ಯ ಸದಸ್ಯರೂ ಅರಿತಿದ್ದಾರೆ. ಅವರ ವಿಷಯದಲ್ಲಿ ಇನ್ನೂ ಅವರ ನೆರವನ್ನು ಹೆಚ್ಚಿಗೆ ಪಡೆಯುವುದಕ್ಕೆ ಆಡಿದ ಮಾತೆಂದು ತಿಳಿದಿದ್ದೇನೆ. ಅವರ ಅಭಿವೃದ್ಧಿಗೋಸ್ಕರ ಅವರ ಬಲವನ್ನು ಪಡೆಯುವುದಕ್ಕಾಗಿ ಆ ರೀತಿ ಹೇಳಿರಬಹುದು. ನಿಜವಾದ ಭಾವನೆಯಿಂದ ನುಡಿದಿಲ್ಲ ಎಂದು ನಾನು ಈ ಸಂದರ್ಭದಲ್ಲಿ ಹೇಳಬೇಕಾಗಿದೆ.

ಶ್ರೀ ಬಿ. ರಾಚಯ್ಯ (ಎಳಂದೂರು—ಅನುಸೂಚಿತ ಜಾತಿಗಳು).—ಭಾಷೆಯಿಂದ ಈ ಕಡೆ ಆ ಕಡೆ ವಾಲುವುದಿಲ್ಲ. ನಮಗೆ ಅರ್ಥ ಮಾಡಿಕೊಳ್ಳುವ ಶಕ್ತಿ ಇದೆ.

ಶ್ರೀ ಎಂ. ಚಿಕ್ಕಲಿಂಗಯ್ಯ (ಮಳವಳ್ಳಿ—ಅನುಸೂಚಿತ ಜಾತಿಗಳು).—ನಮಗೆ ಸ್ವಲ್ಪ ತಿಳಿವಳಿಕೆ ಬಂದಿದೆ, ನಮಗೂ ಗೊತ್ತಿದೆ. ಸುಮ್ಮನೆ ಡೋಲಾಯಮಾನವಾಗಿ ನಡೆಯತಕ್ಕವರಲ್ಲ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ತಮ್ಮನ್ನು ಆಕ್ಷೇಪಣೆಮಾಡಿ ಹೇಳುತ್ತಾ ಇಲ್ಲ. ಮುಖ್ಯ ಸಚಿವರು ಏನು ಹೇಳುತ್ತಿದ್ದಾರೋ ಆ ವಿಷಯವಾಗಿ ಮಾತನಾಡುತ್ತಿದ್ದೇನೆ. ತಮ್ಮನ್ನು ಆಕ್ಷೇಪಣೆ ಮಾಡಲಿಲ್ಲ.

ಶ್ರೀ ಎಂ. ಚಿಕ್ಕಲಿಂಗಯ್ಯ.—ಅವರನ್ನು ವಾಲಿಸುವುದಕ್ಕೋಸ್ಕರ ಈ ರೀತಿ ಮಾಡಿದ್ದಾರೆ ಎಂದು ಹೇಳಿದರು. ಅದಕ್ಕೋಸ್ಕರ ಹೇಳಬೇಕಾಯಿತು. ಇಲ್ಲಿ ವಾಲಿಸಿಕೊಳ್ಳುವ ಪ್ರಮೇಯವಿಲ್ಲ.

Sri T. HANUMIAH (Hiriyur—Scheduled Castes).—On a point of order. ಈಗ ಮುಖ್ಯಮಂತ್ರಿಗಳು ಹರಿಜನರ ಪರವಾಗಿ ಹೇಳಿದರೇ, ವಿರೋಧವಾಗಿ ಹೇಳಿದರೇ ಎಂಬುದನ್ನು ನಾವು ತಿಳಿದು ಕೊಳ್ಳಬಲ್ಲೆವು. ನಾವು ಜವಾಬ್ದಾರೀ ಸ್ಥಾನದಿಂದ ಓಟು ತೆಗೆದುಕೊಂಡು ಬಂದಿದ್ದೇವೆ.

Mr. SPEAKER.—That cannot be a point of order.

ಶ್ರೀ ಟಿ. ಹನುಮಯ್ಯ.—ಹರಿಜನರಿಗೆ ಧಕ್ಕೆ ಬರುತ್ತದೆ ಎಂದು ಹೇಳಿದರು.

ಅಧ್ಯಕ್ಷರು.—ಅವರು ಏನು ಹೇಳಿದರೋ ಅದನ್ನು Proceedings ಕೊಟ್ಟಾಗ ನೋಡಬಹುದು. ಆಗ ಜವಾಬು ಕೊಡಿ.

ಶ್ರೀ ಎಂ. ಚಿಕ್ಕಲಿಂಗಯ್ಯ.—ಹರಿಜನ ಮೆಂಬರುಗಳು ಇಲ್ಲಿ ಬಹಳವಾಗಿ ಇದ್ದಾರೆ; ಅವರು Double Member Constituencyಯಿಂದ ಸುಮಾರು ಒಂದು ಲಕ್ಷ 75 ಸಾವಿರ ಜನರಿಂದ ಚುನಾಯಿತರಾಗಿ ಬಂದಿದ್ದಾರೆ.

ಶ್ರೀ ಎಂ. ಮಾದಯ್ಯ (ನಂಜನಗೂಡು—ಅನುಸೂಚಿತ ಜಾತಿಗಳು).—ಅವರು ಹೇಳಿದಾಗ ನಾನು ಗಮನಿಸಿದೆ. ನಾವು ಮಾತಿಗೆ ಮರುಳಾಗುವುದಿಲ್ಲ. ಅವರ ಕಾರ್ಯವನ್ನು ನೋಡಿ ಅವರ ಮಾತಿನಂತೆ ನಡೆದುಕೊಂಡಿರತಕ್ಕವರೇ ಎಂಬುದನ್ನು ನೋಡುತ್ತೇನೆ. We are all sailing in the same boat. Educationally ಒಕ್ಕಲಿಗರು, ಹರಿಜನರು ಒಂದೇ ಎಂದು ಹೇಳಿದರೆ ಸರಿಹೋಗುತ್ತಿತ್ತು.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಮುಖ್ಯಮಂತ್ರಿಗಳು ಪ್ರಸ್ತಾಪ ಮಾಡದೇ ಇದ್ದರೆ ನಾನು ಆ ವಿಷಯವನ್ನು ಎತ್ತುತ್ತಾ ಇರಲಿಲ್ಲ. ಅದಕ್ಕೋಸ್ಕರ ಹೇಳಿದೆ. ಯಾವ ಕಮಿಟಿಯವರೇ ಆಗಲಿ, ಧಾರ್ ಕಮಿಟಿಯಾಗಲಿ, J.V.P. ಕಮಿಟಿಯಾಗಲಿ, ಪಂಡಿತ ಜವಹರಲಾಲ್ ನೆಹರೂರವರು ವೈಯಕ್ತಿಕವಾಗಿಯಾಗಲಿ ಎಲ್ಲಿಯೂ ಕೂಡ ಇದನ್ನು ಭಾಷಾವಾರು ಪ್ರಾಂತಗಳಾಗಿ ಮಾಡಬೇಕೆಂದು ಹೇಳಿಲ್ಲ. ಭಾಷಾವಾರು ಪ್ರಾಂತಗಳಿಂದ ದೇಶದ ಐಕ್ಯತೆಗೆ ಮತ್ತು ಈ ಭಾರತದ ಭದ್ರತೆಗೆ ಧಕ್ಕೆ ಉಂಟಾಗುತ್ತದೆ ಎಂದು ಅವರು ಪದೇಪದೇ ಹೇಳಿಕೊಂಡು ಬಂದಿದ್ದಾರೆ. ಈ ಕಮಿಟಿಯವರೂ ಸಹ, ಭಾಷಾವಾರು ಪ್ರಾಂತವನ್ನು ಮಾಡುವುದಕ್ಕೆ ಹೋಗಿಲ್ಲ ಎಂದು ಹೇಳುತ್ತಾ ಯಾವ ಪ್ರಾಂತಗಳನ್ನು ಪುನರ್ವಿಂಗಡಣೆ ಮಾಡಬೇಕೆಂದು ಸಲಹೆ ಮಾಡುವಾಗ, ಅವರು ಅದಕ್ಕೆ ತದ್ವಿರುದ್ಧವಾಗಿ ಭಾಷೆಯ ಆಧಾರದ ಮೇಲೆಯೇ ತೀರ್ಮಾನಗಳನ್ನು ಮಾಡಿದ್ದಾರೆ. ಅದರಲ್ಲೂ ಕರ್ಣಾಟಕ ಪ್ರಾಂತವನ್ನು ಮಾಡುವಾಗ ನಾವು ಭಾಷಾವಾರು ಪ್ರಾಂತದ ಮೇಲೆ ಮಾಡಿಲ್ಲ ಎಂದು ಹೇಳುತ್ತಾ 'ಕೋಲಾರ ಜಿಲ್ಲೆಯನ್ನು ಉಳಿಸಿದ್ದೇವೆ, ಬಳ್ಳಾರಿಯನ್ನು ತೆಗಿದಿದ್ದೇವೆ, ಮಹಾರಾಷ್ಟ್ರಕ್ಕೆ ಕೊಡಬೇಕಾದ ಬೆಳಗಾಂನ್ನ ಉಳಿಸಿಕೊಂಡಿದ್ದೇವೆ' ಎಂದು ಹೇಳಿದ್ದಾರೆ. ಆದ್ದರಿಂದ ಪ್ರಾಂತಗಳನ್ನು ಮಾಡುವಾಗ ಹೀಗೆ ಅನನ್ವಯವಾಗಿ ಹಂಚಿಕೆ ಮಾಡಿ, ಭಾಷಾವಾರು ಪ್ರಾಂತಗಳನ್ನಾಗಿ ಮಾಡಿಲ್ಲ ಎಂದು ಶಾಬಾಸ್‌ಗಿರಿ ಪಡೆಯಲು ಮಾಡಿದ್ದಾರೆ. ಆದರೆ ಕಾರ್ಯರೂಪದಲ್ಲಿ, ನ್ಯಾಯಸಮ್ಮತವಾದ ರೀತಿಯ ಲ್ಲಿ ಮಾಡಿಲ್ಲ ಎಂದು ಹೇಳುತ್ತೇನೆ. ಸಮಿತಿಯವರು A, B, C ಸ್ಟೇಟ್‌ಗಳ ವಿವರಣೆಯನ್ನು ಮಾಡಿದ್ದಾರೆ. B ಸ್ಟೇಟ್‌ಗಳಲ್ಲಿ ಯಾವ ಯಾವ ನ್ಯೂನತೆಗಳು, ತೊಂದರೆಗಳು ಇವೆ ಎಂದು ಹೇಳಿದ್ದಾರೆ. ಅವರು ಹೇಳಿರತಕ್ಕದ್ದರಲ್ಲಿ ಯಾವುದಾದರೂ ಮೈಸೂರು ಸಂಸ್ಥಾನಕ್ಕೆ ಅನ್ವಯವಾಗುತ್ತದೆಯೇ ? B ಸ್ಟೇಟಿನಲ್ಲಿ ಇರಬೇಕಾದ ಆಡಳಿತ ದಕ್ಷತೆ, ಹಣಕಾಸಿನ ಭದ್ರತೆ ಮತ್ತು ದೇಶದಲ್ಲಿ ಸರ್ಕಾರೀ ಕೆಲಸ ಕಾರ್ಯಗಳನ್ನು ಮಾಡುವ ಅಧಿಕಾರಿವರ್ಗ ಮೊದಲಾಗಿ ಏನೇನು ಹೇಳಿದ್ದಾರೋ, ಅಂಥ ಯಾವ ವಿಷಯದಲ್ಲಾದರೂ ಮೈಸೂರು ಸಂಸ್ಥಾನದಲ್ಲಿ ಕೊರತೆ ಇದೆಯೇ ಎಂದು ಪ್ರಶ್ನೆ ಮಾಡಿದರೆ, B ಸ್ಟೇಟ್‌ಗಳಿಗೆ ಇರಬಹುದಾದ disqualification ಯಾವುದೂ ಕೂಡ ಮೈಸೂರು ಸಂಸ್ಥಾನಕ್ಕೆ ಅನ್ವಯವಾಗುವುದಿಲ್ಲ ಎಂಬುದನ್ನು ತಿಳಿಸಬೇಕಾಗಿದೆ. ಮೊಟ್ಟಮೊದಲು ಇಲ್ಲಿ ಮಂತ್ರಿ ಮಂಡಲ ರಚನೆಯಾದಾಗ 'B' Stateನ status ಇವಕ್ಕೆ ಕೊಟ್ಟು 'A' Stateಗೆ ಕೊಡಬೇಕಾದ ಸ್ಥಾನಮಾನವನ್ನು ಕೊಡುವ ವಿಚಾರದಲ್ಲಿ ಈ ಸರ್ಕಾರಕ್ಕೂ, ಭಾರತ ಸರ್ಕಾರಕ್ಕೂ ವ್ಯವಹಾರ ನಡೆದು ಮೈಸೂರನ್ನು 'B' ಸ್ಟೇಟ್ ಆಗಿ consider ಮಾಡಬಾರದು 'A' State ಆಗಿ consider ಮಾಡಿ ಆ ಸ್ಥಾನಕ್ಕೆ ಏರಿಸ

(ಶ್ರೀ ಟಿ. ಎಚ್. ಮೂಡಲಗಿರಿಗೌಡ.)

ಬೇಕು, ಎಂಬ ಒಪ್ಪಿಗೆಯನ್ನು ಪಡೆದು 'A' State ಆಗಿ ಯಾವ ರೀತಿಯಲ್ಲಿ treat ಮಾಡುತ್ತಾರೋ ಆ ರೀತಿಯಲ್ಲಿ ಮೈಸೂರು ಸಂಸ್ಥಾನವನ್ನೂ ಕೂಡ ಮೊದಲಿನಿಂದಲೂ treat ಮಾಡಿದ್ದಾರೆ. B ಸ್ಟೇಟ್‌ಗೆ ಇರುವ ಯಾವ disqualification ಕೂಡ ಮೈಸೂರು ಸಂಸ್ಥಾನದಲ್ಲಿ ಇಲ್ಲ ಎಂಬುದನ್ನು ಅವರ ರಿಪೋರ್ಟಿನಿಂದ ಕಂಡುಬರುತ್ತದೆ. ಹಿಂದೆ ಎಲ್ಲಾ ಸ್ಟೇಟುಗಳನ್ನೂ ಕೂಡ amalgamate ಮಾಡಿದಾಗ ಹೈದರಾಬಾದು, ಮೈಸೂರು, ಕಾಶ್ಮೀರ, ಈ ಮೂರು ಸಂಸ್ಥಾನಗಳನ್ನು ಇಂಡಿಯಾ ಸರ್ಕಾರದವರ ಉಳಿಸಿಕೊಂಡರು. ಇವೊತ್ತಿನ ದಿವಸ S.R.C. ಕಮಿಷನ್ ಅವರು ಕಾಶ್ಮೀರವನ್ನು ಉಳಿಸಿದ್ದಾರೆ. ಹೈದರಾಬಾದನ್ನು ಉಳಿಸಿದ್ದಾರೆ. ಹೈದರಾಬಾದಿನ ಮೂರರಲ್ಲಿ ಒಂದು ಭಾಗವನ್ನು ಪ್ರಾಂತವನ್ನಾಗಿ ಮಾಡಿದರೂ ಕೂಡ ಹೈದರಾಬಾದನ್ನು ಉಳಿಸಿಕೊಂಡಿದ್ದಾರೆ. ಅದನ್ನು ಒಂದು ಸಂಸ್ಥಾನವನ್ನಾಗಿ ಇಟ್ಟಿದ್ದಾರೆ. ಮೈಸೂರನ್ನು ಉಳಿಸುವುದಕ್ಕೆ ಯಾವ ಪ್ರಯತ್ನವನ್ನೂ ಮಾಡಿಲ್ಲ. ನಾವಾದರೂ ಕೂಡ ಸಮಿತಿಯವರು ಹೀಗೆ ಮಾಡುವುದಕ್ಕೆ ಅಂತಹ ಬಲವಾದ ಕಾರಣಗಳು ಏನೆಂಬುದನ್ನು ಇವತ್ತಿನ ದಿವಸ ವಿಮರ್ಶೆ ಮಾಡಬೇಕು. ನಮ್ಮಲ್ಲಿ ತಪ್ಪು ಇಲ್ಲ ಎಂದು ಹೇಳುವ ಮಟ್ಟಕ್ಕೆ ನಾನು ಹೋಗುವುದಿಲ್ಲ. ನಮ್ಮ ತಪ್ಪು ಇದರಲ್ಲಿ ಅಡಗಿದೆ. ಫಜಲಾಲಿ ಸಮಿತಿಯವರು ಬಂದಾಗ ನಮ್ಮ ಕಾರ್ಯವನ್ನು ಮಾಡದೆ ಈ ದೇಶದ ಮುಖ್ಯ ಮಂತ್ರಿಗಳ ಮಾತಿಗೆ ಮರುಳಾಗಿ, ನಾಚಿಕೆಯಿಂದ ಹೇಳುತ್ತಿದ್ದೇನೆ, ಅಂದರೆ ನಮ್ಮ ಬುದ್ಧಿಯನ್ನೆಲ್ಲಾ ಇಲ್ಲಿ ಅವರ ಬುದ್ಧಿಯೊಂದಿಗೆ ಸೇರಿಸಿ ಅವರ ಬುದ್ಧಿಯನ್ನು ನಾವು ಹೊತ್ತುಕೊಂಡು ವರ್ತಿಸುತ್ತಿದ್ದುದರಿಂದ ನಮಗೆ ಇವತ್ತಿನ ದಿವಸ ಇಂತಹ ಅಗಾಧವಾದ ವಿರೋಧವಾದ ರಿಪೋರ್ಟ್ ಬಂದು ಈ ಸನ್ನಿವೇಶ ಒದಗಿದೆ ಎಂದು ಹೇಳದೆ ವಿಧಿಯಿಲ್ಲ. ಅದಕ್ಕೆ ನಮ್ಮ ಮಾನ್ಯ ಮುಖ್ಯ ಮಂತ್ರಿಗಳನ್ನು ಚತುರ್ಮುಖಬ್ರಹ್ಮ ಎಂದು ಹೇಳಿದರೂ ಸರಿಹೋಗುತ್ತದೆ. ಏಕೆಂದರೆ ಅಂತಹ ಒಂದು ಸಾಹಸದ ಕಾರ್ಯವನ್ನು ಅವರು ಈ ಪ್ರಯತ್ನದಲ್ಲಿ ಮಾಡಿದ್ದಾರೆ. ನಾಟಕದಲ್ಲಿ ಒಬ್ಬನೇ ವೇಷಧಾರಿ ಬಗೆ ಬಗೆಯ ಪ್ರದರ್ಶನಗಳನ್ನು ಮಾಡಿಕೊಂಡು ಹೇಗೆ ತಾನು ನಾಟಕಾಭಿನಯವನ್ನು ವ್ಯಕ್ತಪಡಿಸುತ್ತಾನೋ ಹಾಗೆ ಒಂದು ಸಾಹಸದ ಕಾರ್ಯವನ್ನು ಅವರು ಪಂಚ ಬಣ್ಣಗಳಿಂದ ಮಾಡಿದ್ದಾರೆ. ಅವರ ಆ ಸಾಹಸದ ಕಾರ್ಯಕ್ಕೆ ದೇಶ ಏನು ಹೇಳುತ್ತಿದೆ ಮತ್ತು ದೇಶ ಏನು ಯೋಚಿಸುತ್ತಿದೆ ಎನ್ನುವುದನ್ನು ನಾವೆಲ್ಲರೂ ಅರಿತವರಾಗಿದ್ದೇವೆ. ಮೊದಲಿನಿಂದಲೂ ಕರ್ಣಾಟಕ ಪ್ರಾಂತರಚನೆ ಮಾಡುವಾಗ ಮೈಸೂರನ್ನು ಸೇರಿಸಬಾರದು ಎನ್ನುವ ಯಾವ ಒಂದು ಹೋರಾಟವನ್ನೂ ಮೈಸೂರಿನಲ್ಲಿ ನಡೆಸಿಲ್ಲ. ಆ ದೆಸೆಯಿಂದ ಇದು *ex parte* ಆಗಬೇಕಾಗಿ ಬಂತು. ಆಗಿದೆ ಎಂದು ಕೂಡ ಹೇಳುತ್ತೇನೆ. ರಿಪೋರ್ಟಿನಲ್ಲಿ ಅವರು ಈ ಕಾಂಗ್ರೆಸ್ ಆರ್ಗನೈಜೇಷನ್ ಏನಿದೆ ಅದನ್ನು ವಿಮರ್ಶಿಸಿದ್ದಾರೆ. ಯಾವ ಭಾಷೆಯ ಮೇಲೆಯೇ ಆಗಲಿ, ಯಾವ ಪ್ರಾಂತದಲ್ಲಿಯೇ ಆಗಲಿ, ಯಾವ ಆಧಾರದಿಂದ ಕಾಂಗ್ರೆಸ್ ಆರ್ಗನೈಜೇಷನ್ ಮಾಡಿದ್ದಾರೋ, ಹಾಗೆ ಕಾಂಗ್ರೆಸ್ ಆರ್ಗನೈಜೇಷನ್ ಮಾಡಿರತಕ್ಕ ನೀತಿ ಮತ್ತು ಆಧಾರದಮೇಲೆ ಪ್ರಾಂತ ಪುನರ್ವಿಂಗಡಣೆಯನ್ನು ಮಾಡಿದರೆ ಮಾತ್ರ ದೇಶ ಭದ್ರತೆ ಆಗಬಲ್ಲುದು ಎಂದು ಉದಹರಿಸಿದ್ದಾರೆ. ಹೀಗೆ ಉದಹರಿಸಿ ಮೈಸೂರಿನ ಪ್ರಾದೇಶಿಕ ಕಾಂಗ್ರೆಸ್ ಹಾಗಾಗಿದೆಯೋ ಇಲ್ಲವೋ ಎಂಬ ವಿಷಯಕ್ಕೆ ಬಂದಾಗ ಕಣ್ಣಿಗೆ ಪರದೆಯನ್ನು ಹಾಕಿಕೊಂಡಿದ್ದಾರೆ. ಮೊದಲು ಮೈಸೂರು ಕಾಂಗ್ರೆಸ್ ಪ್ರಾರಂಭವಾಯಿತು. ದೇಶ ಸ್ವತಂತ್ರವಾದಮೇಲೆ, ಮೈಸೂರು ಕಾಂಗ್ರೆಸ್ಸಿಗೆ ಒಂದು ಸ್ಥಾನವನ್ನು ಕೊಡಲಿಕ್ಕೆ ಸಾಧ್ಯವಿಲ್ಲ ಎಂಬ ಸನ್ನಿವೇಶ ಬಂದ ಕಾಲದಲ್ಲಿ, ಮೈಸೂರು ಕಾಂಗ್ರೆಸ್ಸಿನಲ್ಲಿ ಅಧ್ಯಕ್ಷರಾಗಿದ್ದ ಶ್ರೀಮತಿ ಯಶೋಧರಮ್ಮ ದಾಸಪ್ಪನವರು, ಮೈಸೂರಿಗೆ ಒಂದು political entity ಒಂದು ಸ್ಥಾನಮಾನ ಇರಬೇಕು, ಮತ್ತು ಮೈಸೂರು ಪ್ರಾದೇಶಿಕ ಕಾಂಗ್ರೆಸ್ಸನ್ನಾಗಿ ಉಳಿಸಿಕೊಳ್ಳಬೇಕು, ಎಂದು ಹೋರಾಡಿ ಅದನ್ನು ಉಳಿಸಿಕೊಂಡು ಬಂದರು. ಮೈಸೂರನ್ನು ಉಳಿಸಬೇಕು ಎಂಬ ಸಾಹಸ ಕಾರ್ಯವನ್ನು ಅಂದಿನ ದಿವಸವೇ ಮಾಡಿ ಸಾಧಿಸದ್ದಾಗಿದೆ. ನಾನು ಇಷ್ಟು ಮಾತ್ರ ಈ ವಿಷಯದಲ್ಲಿ ಹೇಳುತ್ತೇನೆ. ಮೈಸೂರು ಪ್ರಾದೇಶಿಕ ಕಾಂಗ್ರೆಸ್ ಕಮಿಟಿ ನಿಗದಿಯಾಗಿ ರಾಜಕೀಯದಲ್ಲಿ ಕೆಲಸಕಾರ್ಯ ನಡೆಸಿಕೊಂಡು ಬರುತ್ತಿದೆ. ಅಂದಿನಿಂದ ಮೈಸೂರಿಗೆ ಒಂದು ಸ್ಥಾನಮಾನ ಒಂದು status ಇದೆ. ಇರಬೇಕೆಂಬುದು ಇದರಿಂದಲೇ ವ್ಯಕ್ತವಾಗುತ್ತದೆ. ಮೈಸೂರು ಪ್ರಾದೇಶಿಕ ಕಾಂಗ್ರೆಸ್ ಒಂದು ಕಡೆ, ಕರ್ಣಾಟಕ ಪ್ರೊವಿನ್ಷಿಯಲ್ ಕಾಂಗ್ರೆಸ್ ಕಮಿಟಿ ಒಂದ ಕಡೆ ಇದೆ. ಕರ್ಣಾಟಕ Provincial Congress, ಮೈಸೂರು ಪ್ರಾದೇಶಿಕ ಕಾಂಗ್ರೆಸ್ ಕಮಿಟಿಯನ್ನು ನಿರ್ಮಾಣಮಾಡಿ ಅದಕ್ಕೆ recognition ಕೊಡುವಾಗ, ಅದಕ್ಕೆ ವಿರೋಧ ಮಾಡಬಹುದಾಗಿತ್ತು. ಈ Organisationನಲ್ಲಿ ಮೈಸೂರಿಗೆ ಒಂದು ಸ್ಥಾನವನ್ನು ಕೊಡಬೇಕಾಗಿಲ್ಲ, ಮೈಸೂರಿಗೆ ಒಂದು ಸ್ಥಾನವನ್ನು ರಾಜಕೀಯ ದೃಷ್ಟಿಯಿಂದ ಕೊಡುವುದು ಯುಕ್ತವಲ್ಲ, ಆದ್ದರಿಂದ ಕರ್ಣಾಟಕ ಪ್ರೊವಿನ್ಷಿಯಲ್ ಕಾಂಗ್ರೆಸ್ ಕಮಿಟಿ ಒಂದು ಮಾತ್ರ ಇರಬೇಕು ಎಂದು ಅವರು ಪ್ರತಿಭಟನೆಮಾಡಿ ಮೈಸೂರು ಪ್ರಾದೇಶಿಕ ಕಾಂಗ್ರೆಸ್ ಸಮಿತಿಯ ರಚನೆಗೆ ಅವಕಾಶಕೊಡದೆ ಹೋಗಿದ್ದರೆ, ಆಗ ಮೈಸೂರಿನ ಜನ ಪ್ರತಿಭಟಿಸದೇ ಇದ್ದಿದ್ದರೆ, ಮೈಸೂರಿನ ಜನ ಮೈಸೂರನ್ನು ಉಳಿಸಿಕೊಳ್ಳಲೇಬೇಕ ಎಂದು ಹೋರಾಟವನ್ನು ನಡೆಸಲಿಲ್ಲ, ಪ್ರತಿಭಟನೆ ಮಾಡಲಿಲ್ಲ ಎಂದು ಹೇಳಬಹುದಾಗಿತ್ತು. ಹಾಗೆ ಹೇಳುವುದರಲ್ಲಿ ಕೊಂಚವಾದರೂ ತಿರುಳಿದೆಯೆಂದು ಹೇಳಬಹುದಾಗಿತ್ತು. ಒಂದು ಉದಾಹರಣೆ ಹೇಳುತ್ತೇನೆ.

2 P.M.

ನನಗೆ ನಾಲ್ಕು ಮನೆಗಳಿವೆ. ಯಾರಾದರೂ ಮೂರು ಮನೆಗಳನ್ನು ಕಿತ್ತುಕೊಂಡು ಹೋಗುತ್ತೇವೆಂದು ಕೂಗಾಡಿಕೊಳ್ಳುತ್ತಿದ್ದರೆ ಆಗ ಕಿತ್ತುಕೊಂಡು ಹೋಗಬೇಡಿ ಎಂದು ಹೇಳುವ ಕೇಳುವ ನಿರ್ಣಯ ಮಾಡುವ ಪ್ರಮೇಯವೇನು ಇರುತ್ತದೆ? ಯಾವತ್ತು ಕಿತ್ತುಕೊಂಡು ಹೋಗಬೇಕೆಂದು ಮನೆಯ ಬಾಗಿಲಿಗೆ ಬರುತ್ತಾರೋ ಆಗ ಮಾತ್ರ ಅದು ಸರಿಯಲ್ಲ, ನ್ಯಾಯವಲ್ಲ ಎಂದು ಹೇಳುವುದು ಸರಿ. ಇಲ್ಲದಿದ್ದರೆ ಸುಮ್ಮನೆ ಹೇಗೆ ಹೇಳುವುದು? ಪ್ರಾಂತಪುನರ್ವಿಂಗಡಣಾ ಸಮಿತಿಯ ವರದಿ ಯಾವಾಗ ಬಂತೋ ಆ ಹೊತ್ತೇ ಪ್ರತಿಭಟನೆಗೆ ಪ್ರಾರಂಭವಾಯಿತು. ಈ ಕಮಿಷನ್ ಬೆಂಗಳೂರಿಗೆ ಬಂದ ದಿವಸವೇ ಅವರಲ್ಲಿಗೆ ಹೋಗಿ ಪ್ರತಿಭಟನೆ ಹೇಳಿಕೆಗಳನ್ನು ಸಾಕಾದಷ್ಟು ಮಾಡಲಾಗಿದೆ. ಹೀಗಿದ್ದರೂ, ಮೈಸೂರನ್ನುಳಿಸಿಕೊಳ್ಳಬೇಕೆಂಬ ಹೋರಾಟ ಪ್ರಾರಂಭವಾಗಿಲ್ಲವೆಂದು ಹೇಳುವ ವಾದದಲ್ಲಿ ತಿರುಳಿಲ್ಲವೆಂದು ಹೇಳಬಯಸುತ್ತೇನೆ.

ಸ್ವಾಮಿ, ಈ ಪುನರ್ವಿಂಗಡಣೆಯ ಕ್ರಮ ಒಂದು ತತ್ವವನ್ನನುಸರಿಸಿಲ್ಲ. ಈ ದಿವಸ ನಮ್ಮ ದೇಶದ ತಂದೆ ಮಹಾತ್ಮ ಗಾಂಧಿಯವರಿದ್ದಿದ್ದರೆ—ಮಹಾತ್ಮ ಗಾಂಧಿಯವರು ಹೇಳುತ್ತಿದ್ದುದನ್ನು ಉದಹರಿಸುತ್ತಿದ್ದೇನೆ.—ಅವರಿದ್ದಿದ್ದರೆ, ಈ ವಿಷಯವನ್ನು, ಈ ಪ್ರಶ್ನೆಯನ್ನು ಯಾವ ಮಟ್ಟದಲ್ಲಿ ಎಷ್ಟರಮಟ್ಟಿಗೆ ಬಗೆಹರಿಸುತ್ತಿದ್ದರು ಎನ್ನುವುದನ್ನು ಯೋಚನೆಮಾಡಬೇಕಾಗಿದೆ. ಮಹಾತ್ಮ ಗಾಂಧಿಯವರು ವಿಕೇಂದ್ರೀಕರಣ ತತ್ವವನ್ನು ಹೇಳುತ್ತಿದ್ದರು. ಸರ್ಕಾರದ ಆಡಳಿತ ವಿಕೇಂದ್ರೀಕೃತವಾಗಬೇಕು ಮತ್ತು ಪ್ರಜಾಪ್ರಭುತ್ವದ ತತ್ವ ಯಾವಾಗಲೂ ಪ್ರತಿಪಾದಿಸಲ್ಪಡಬೇಕು ಎಂದು ಹೇಳುತ್ತಿದ್ದರು. ಈ ದಿವಸ ಸಂಸ್ಥಾನಗಳ ವಿಂಗಡಣೆ ವಿಕೇಂದ್ರೀಕರಣತತ್ವದಮೇಲೆ ಆಗಿದೆಯೆ ಎಂಬುದನ್ನು ನೋಡೋಣ. ಒಂದೊಂದು ಪ್ರಾಂತ ವಿಂಗಡಣೆಯನ್ನು ತೆಗೆದುಕೊಂಡು ನೋಡಿದರೆ, ಈ ವರದಿಯಲ್ಲಿರುವುದು ಸ್ವಾಗತಾರ್ಹವಾಗಿದೆಯೇನು ? ಎಷ್ಟು ದಿವಸ ಇದನ್ನು ತಲೆಗೆ ಹಚ್ಚಿಕೊಂಡಿರುವುದು, ಯಾವುದಾದರೂ ಒಂದು ರೀತಿ ಬಗೆಹರಿಸಿಬಿಡೋಣ, ಒಂದು ಸಮಿತಿಯ ವರದಿ ಬಂದಿದೆ, ಹೇಗೋ ತೀರ್ಮಾನಿಸೋಣ ಎಂಬ ಭಾವನೆಯನ್ನು ನಾವಾಗಲಿ ಕೇಂದ್ರ ಸರ್ಕಾರವಾಗಲಿ ತಾಳಿದರೆ, ಅದು ನ್ಯಾಯವಾಗಿ ಗಾಂಧಿ ತತ್ವಕ್ಕನುಗುಣವಾಗಿದೆಯೆ, ಈ ರೀತಿ ಅವರ ತತ್ವಾನುಯಾಯಿಗಳು ನಡೆದುಕೊಳ್ಳಬಹುದೆ ಎಂಬುದನ್ನು ಯೋಚನೆ ಮಾಡಬೇಕು. ಉತ್ತರ ಪ್ರದೇಶವನ್ನು ಒಂದು ರೀತಿ ಮಾಡಿ, ಇನ್ನೊಂದನ್ನು ಮಾಡುವಾಗ ಭಾಷಾವಾರು ಅಧಾರದಮೇಲೆ ಮಾಡುವುದಿಲ್ಲವೆಂದು ಹೇಳುತ್ತಾರೆ. ಒಂದನ್ನು ಭಾಷಾವಾರು ಪ್ರಶ್ನೆಯ ಮೇಲೆ ಎಂದು ಹೇಳುವುದು, ಇನ್ನೊಂದನ್ನು ಬೇರೆ ರೀತಿ ಎಂದು ಹೇಳುವುದು. ಒಂದರಲ್ಲಿ 70 ಲಕ್ಷ ಜನ ಇನ್ನೊಂದರಲ್ಲಿ ಆರುಕೋಟಿ ಜನ.

ಶ್ರೀ ಕೆ. ಹನುಮಂತಯ್ಯ.—ಆ ವಿಷಯದಲ್ಲಿ ಬೇಕಾದರೆ ನಮ್ಮ ಅಭಿಪ್ರಾಯ ಕಳುಹಿಸೋಣ; ಈ ವಿಷಯ ಮಾತನಾಡಿ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ತಾವು ಪ್ರಾಂತ ಪುನರ್ವಿಂಗಡಣಾ ಸಮಿತಿಯ ವರದಿಯನ್ನು ಅರ್ಥಮಾಡಿಕೊಳ್ಳಿ. ಮೈಸೂರಿನ ವಿಷಯದಲ್ಲಿ ಯಾವ ತತ್ವವನ್ನು, ಯಾವ ನ್ಯಾಯವನ್ನು ಹೇಳಿದ್ದೀರೋ ಇನ್ನೊಬ್ಬರ ವಿಷಯದಲ್ಲಿಯೂ ಅದನ್ನೇ ಮಾಡಿ ಎಂದು ಹೇಳುವುದಕ್ಕೆ ನನಗೆ ಅಧಿಕಾರವಿದೆ.

ಹೀಗೆ ಈ ವರದಿ ಯಾವ ವಿಧದಲ್ಲಿ ನೋಡಿದರೂ ತೃಪ್ತಿಕರವಾಗಿಲ್ಲ. ಹೇಳಿರುವುದೊಂದು, ಆಚರಣೆ ಒಂದು ಆಗಿದೆ. ಬಾಯಲ್ಲಿ ಹೇಳುವುದೊಂದು ತತ್ವಕ್ರಿಯಲ್ಲಿ ಮಾಡುವುದೊಂದು. ಪುನರ್ವಿಂಗಡಣಾ ತತ್ವಗಳನ್ನು ಚರ್ಚೆ ಮಾಡುವಾಗ ಮಹೋನ್ನತ ಮಟ್ಟದಲ್ಲಿ ಚರ್ಚೆಮಾಡಿ ಕಾರ್ಯಗತ ಮಾಡುವಾಗ ಸಮಯೋಚಿತವಾದ ರೀತಿಯಲ್ಲಿ ಮಾಡಿದ್ದಾರೆ. ಬಳ್ಳಾರಿ ವಿಷಯದಲ್ಲಿ ಈ ವರದಿ ಚನ್ನಾಗಿಲ್ಲ ಎಂದು ಹೇಳಿ ಇನ್ನೊಂದು ವಿಷಯದಲ್ಲಿ ಸರಿಯಾಗಿದೆ ಎಂದು ಹೇಳಿದರೆ, ಅದು ನ್ಯಾಯವಲ್ಲ. ನಾನಾಗಲೇ ಹೇಳಿದ ಹಾಗೆ, ಏನಾದರೂ ಒಂದು ಕಡೆಯ ತೀರ್ಮಾನಕ್ಕೆ ಬಂದುಬಿಡಬೇಕು, ಇದಕ್ಕೆ ಎಲ್ಲರೂ ಒಪ್ಪಬೇಕು, ನಮ್ಮ ಮೇಲೆ ಬಲವಂತವಾಗಿ ಹೊರಿಸಬೇಕು, ಸಂಸ್ಥೆಯ ಸೂಚನೆ ಮೂಲಕ ಹೊರಿಸಬೇಕೆಂದು ಹೇಳುವ ಯಾವ ನೀತಿ ನಮ್ಮ ಮುಂದೆ ಬಂದಿದೆಯೋ ಅದು ಬಹಳ ವ್ಯಸನಕರವಾದ ವಿಷಯ. ಪ್ರಜಾಪ್ರಭುತ್ವ ತತ್ವಕ್ಕೆ, ಗಾಂಧಿ ತತ್ವಕ್ಕೆ, ಧಕ್ಕೆಬಂದರೆ ಅವರ ಅನುಯಾಯಿಗಳಾದ ನಾವು ಎಂಥ ಕಷ್ಟ ಬಂದರೂ ಎದುರಿಸೋಣ. ಇನ್ನು ಒಂದು ವರ್ಷವಾಗಲಿ, ಸರಿಯಾದ ತೀರ್ಮಾನಕ್ಕೆ ಬರೋಣ. ಅದರಿಂದ ಕಳೆದುಹೋಗುವುದೇನು ? ಏನೂ ಇಲ್ಲ. ಹಾಗಿಲ್ಲದೆ ಇಂಥ ಒಂದು ವಿಷಯವನ್ನು ನಮ್ಮ ಮೇಲೆ ಹೊರಿಸಿ ಪುನರ್ವಿಂಗಡಣೆ ಮಾಡುವುದಕ್ಕೆ ಹೊರಟಿರುವ ನೀತಿ ಮಹಾತ್ಮ ಗಾಂಧಿಯವರ ತತ್ವಕ್ಕೆ ವಿರುದ್ಧವಾಗಿದೆ ಎಂದು ಹೇಳಲು ನನಗೆ ಅಧಿಕಾರವಿದೆ.

ನಮ್ಮ ಸಂಸ್ಥಾನದ ಮುಖ್ಯ ಮಂತ್ರಿಗಳು ಈ ದೇಶದ ಪ್ರಜೆಗಳಲ್ಲಿ 50 ಲಕ್ಷ, ಕರ್ಣಾಟಕದ ಪ್ರಜೆಗಳು ಒಂದು ಕೋಟಿ, ಒಟ್ಟು ಒಂದೂವರೆ ಕೋಟಿ ಜನ ಒಪ್ಪಿರತಕ್ಕ ವಿಷಯವನ್ನು 50 ಲಕ್ಷ ಜನರು ಹೀಗೆ ವಿರೋಧ ಮಾಡುವುದು ಸರಿಯೆ, ಹೀಗೆ ವಿರೋಧ ಮಾಡಿದುದನ್ನು ಗಣನೆಗೆ ತರುವುದಕ್ಕಾಗುವುದಿಲ್ಲ, ಬಹು ಜನರ ಅಭಿಪ್ರಾಯವೇ ಪ್ರಜಾಪ್ರಭುತ್ವದ ಅಭಿಪ್ರಾಯ ಎಂದು ಹೇಳಿದರು. ಇದು ಗಣಿತಶಾಸ್ತ್ರದ ವಿದ್ಯಾರ್ಥಿಯಾಗಿ ಅವರು ಮಾತನಾಡಿದರೆ ? ಅವರ ಭಾಷಣದಲ್ಲಿ ನಮಗೆ ವೇದಾಂತವನ್ನು ಬೋಧಿಸಿದ್ದಾರೆ. ಪ್ರಾಂತ ಪುನರ್ವಿಂಗಡಣಾ ಸಮಿತಿಯ ವರದಿಯ ಸಾಧಕ ಬಾಧಕಗಳನ್ನು ವಿಮರ್ಶೆಮಾಡಿದರೆಂದು ಅದರಿಂದ ತಿಳಿದುಕೊಳ್ಳಲು ಸಾಧ್ಯವಿಲ್ಲ. ವೇದಾಂತವನ್ನು ಬೋಧಿಸಿ ಅದನ್ನು ನಮ್ಮ ಮುಂದಿಟ್ಟಿದ್ದಾರೆ.

ಇನ್ನೊಂದು ವಿಷಯ. ಸ್ವಾಮಿ, ಬಳ್ಳಾರಿಯ ಯಾವ ತಾಲ್ಲೂಕುಗಳು ಮೈಸೂರು ಸಂಸ್ಥಾನಕ್ಕೆ ಬಂದಿದ್ದವೋ ಅವನ್ನು ಈ ಸಮಿತಿಯವರು ಆಂಧ್ರಕ್ಕೆ ಕೊಡಬೇಕೆಂದು ತಿಳಿಸಿದ್ದಾರೆ. ಆ ಜನರನ್ನು ಮೈಸೂರಿನಲ್ಲಿರುತ್ತೀರೋ, ಆಂಧ್ರಕ್ಕೆ ಹೋಗುತ್ತೀರೋ, ಕರ್ಣಾಟಕಕ್ಕೆ ಹೋಗುತ್ತೀರೋ ಎಂದು ಕೇಳಿ ಅವರ ಅಭಿಪ್ರಾಯವನ್ನು ತಿಳಿದುಕೊಳ್ಳೋಣ. ಹೀಗೆ ಕರ್ಣಾಟಕ ಪ್ರಾಂತದಿಂದ ಆಂಧ್ರಕ್ಕೆ ಹೋಗುತ್ತೀರೋ ಮೈಸೂರಿಗೆ ಹೋಗುತ್ತೀರೋ ಎಂದು ಕೇಳುವುದರಲ್ಲಿ ಅರ್ಥವಿದೆ. ಈ ದೇಶದಲ್ಲಿ ಶೇಕಡ 50 ರಷ್ಟು ಹಾಗೂ 50 ರಷ್ಟು ಹೀಗೂ ಅಭಿಪ್ರಾಯವಿದೆ ಎಂದು ಹೇಳುತ್ತಿದ್ದಾರೆ, ಮುಖ್ಯ ಮಂತ್ರಿಗಳು. ಅವರಿಗೆ ಒಂದು ನೇರವಾದ ಪ್ರಶ್ನೆಯನ್ನು ಹಾಕುತ್ತೇನೆ. ಇದನ್ನು ವೈಯಕ್ತಿಕವಾಗಿ ಹೇಳುತ್ತೇನೆ, ಅವರು ರಾಜಿನಾಮೆ ಕೊಡಲಿ ಎಂದು ನಾನು ಹೇಳುತ್ತಿಲ್ಲ. ಅವರವರ ಕ್ಷೇತ್ರದಲ್ಲಿ, ಮುಖ್ಯ ಮಂತ್ರಿಗಳಾದ ಶ್ರೀ ಹನುಮಂತಯ್ಯನವರೂ ಅವರ ಮಿತ್ರರಾದ ಶ್ರೀಮಾನ್ ಸೋಲೂರು ಸಿದ್ದಪ್ಪನವರೂ ಈ ಪ್ರಶ್ನೆಯ ಮೇಲೆ ಚುನಾವಣೆ ನಡೆಸಲಿ. ಜನಾಭಿಪ್ರಾಯ ತೆಗೆದುಕೊಳ್ಳೋಣ, ಅದರ ಮೇಲೆ ತೀರ್ಮಾನ ತೆಗೆದುಕೊಳ್ಳೋಣ. ಈ ಎರಡು ಕ್ಷೇತ್ರಗಳಲ್ಲಿ ತೆಗೆದುಕೊಂಡರೂ ಸಾಕು. ಈ ಸವಾಲಿಗೆ ಅವರು ಒಪ್ಪಿಕೊಳ್ಳಲಿ. ಇದಿಲ್ಲದೆ ಹೀಗೆ 50-50 ಅಭಿಪ್ರಾಯವಿದೆ ಎಂದು ಲೆಕ್ಕಹಾಕಿ ಹೇಳಿರುವುದು ಸರಿಯಲ್ಲ. ದೇಶದಲ್ಲಿ ಮುಕ್ಕಾಲು ಭಾಗ ಜನ ವಿರೋಧವಾಗಿದ್ದಾರೆ, ಶೇಕಡ 75 ರಷ್ಟು ಜನಸಂಖ್ಯೆ ವಿರೋಧವಾಗಿದೆ. ಬರಿಯ ಅಸೆಂಬ್ಲಿಯಲ್ಲಿ ಓಟು ತೆಗೆದುಕೊಳ್ಳುವ ಸಂಖ್ಯೆಯ ಮೇಲೆ ತೀರ್ಮಾನವಲ್ಲ, ದೇಶದ ಜನಾಭಿಪ್ರಾಯವೇನೆಂಬುದನ್ನು ತಿಳಿಸಿದರೆ, ಅದು ಸರಿ ಎಂದು ನಾನು ಹೇಳುತ್ತೇನೆ. ಬಹಳ ಕಡಮೆ ಸಂಖ್ಯೆಯ ಜನರು ವಿರೋಧವಾದ ಅಭಿಪ್ರಾಯವನ್ನಿಟ್ಟುಕೊಂಡಿದ್ದಾರೆಂದು ಹೇಳಿದರು. ಇದನ್ನು ಹೇಗೆ ಹೇಳುತ್ತಾರೋ ಗೊತ್ತಿಲ್ಲ. ಬೇಡವೆಂದು ಹೇಳುವವರೆಲ್ಲರೂ ಪತ್ರಿಕೆಗಳಲ್ಲಿ ಬರೆಯುವುದಿಲ್ಲ, ಪತ್ರಿಕೆಗಳಿಗೆ ಕಳುಹಿಸು

(ಶ್ರೀ ಟಿ. ಎಸ್. ಮೂಡಲಗಿರಿಗೌಡ.)

ವುದಿಲ್ಲ. ಹಳ್ಳಿಯವರೆಲ್ಲ ಬಂದು ಪತ್ರಿಕೆಗಳಿಗೆ ತಮ್ಮ ಅಭಿಪ್ರಾಯ ಕೊಡುವುದಿಲ್ಲ, ಕಳುಹಿಸಿದುದನ್ನು ಕೂಡ ಪತ್ರಿಕೆಗಳವರು ಹಾಕುವುದು ಕಷ್ಟ. ಹೀಗಿರುವಾಗ ಹಳ್ಳಿಯವರು ಹೇಗೆ ತಮ್ಮ ಅಭಿಪ್ರಾಯವನ್ನು ತಿಳಿಸುತ್ತಾರೆ? ಹೀಗೆ, ಇವರು ಮುಕ್ಕಾಲು ಮೂರು ವೀಸೆ ಪಾಲು ಜನರು ಈ ಅಭಿಪ್ರಾಯವುಳ್ಳವರಾಗಿದ್ದಾರೆಂದು ಹೇಳುವುದರಲ್ಲಿ ಅರ್ಥವಿಲ್ಲ.

ನನಗೆ ಕಾಲಾವಕಾಶ ಜಾಸ್ತಿ ಇಲ್ಲ; ಇದ್ದರೆ ಈ ವಿಚಾರವಲ್ಲಿ ಮೂರು ದಿವಸ ಬೇಕಾದರೂ ಮಾತನಾಡುವಷ್ಟು ವಿಷಯಗಳಿವೆ. ಶ್ರೀ ಹನುಮಂತಯ್ಯನವರಿಗೆ ಉತ್ತರ ಹೇಳುತ್ತೇನೆ. ನಮ್ಮ ದೇಶದಲ್ಲಿ ಕೆಲವು ಮದುವೆಗಳಾಗುತ್ತವೆ; ಹೆಣ್ಣು ಒಪ್ಪದೇ ಇದ್ದರೆ ಹೊತ್ತುಕೊಂಡು ಹೋಗಿ ಮದುವೆ ಮಾಡುವುದು, ಅಥವಾ ತಂದೆತಾಯಿಗಳು ಒಪ್ಪದೇಯಿದ್ದರೆ, ಹೊತ್ತುಕೊಂಡು ಹೋಗಿ ಮದುವೆ ಮಾಡುವುದು ಹೀಗೆ ನಾನಾ ರೀತಿಯಲ್ಲಿ ಮದುವೆಗಳಾಗುತ್ತವೆ. ಆದರೆ ಇಂಥ ಮದುವೆಗಳಿಂದ ಪರಿಣಾಮವೇನಾಗುತ್ತದೆ? ಜೀವನ ಹಳಸಿಹೋಗಿರುವ ನಿದರ್ಶನಗಳಿವೆ. ಹೀಗಿರುವಾಗ ಬಲವಂತದಿಂದ ಮಾಡಿದರೆ ಏನು ಪರಿಣಾಮವಾಗುತ್ತದೆಂಬುದನ್ನು ನಾವು ನೋಡಬೇಕು.

ಶ್ರೀ ಡಿ. ದೇವರಾಜ ಅರಸ್ (ಹುಣಸೂರು).—ಈಗಿನ ಕಾಲದಲ್ಲಿ ತಂದೆತಾಯಿಗಳ ಒಪ್ಪಿಗೆ ಬೇಕಾಗಿಲ್ಲ. ಗಂಡು ಹೆಣ್ಣು ಒಪ್ಪಿಕೊಂಡರೆ ಸಾಕು.

ಶ್ರೀ ಟಿ. ಎಸ್. ಮೂಡಲಗಿರಿಗೌಡ.—ಅದು ಬೇರೆ ದೇಶಗಳಿಗೆ ಸರಿಯಾಗಬಹುದು.

ವೈಷಮ್ಯದಿಂದ ಮಹಾತ್ಮಾ ಗಾಂಧಿಯವರು ನಮ್ಮ ರಾಷ್ಟ್ರವನ್ನು ಸ್ವತಂತ್ರ ಮಾಡಲಿಲ್ಲ. ನಮ್ಮನ್ನು ಸ್ವತಂತ್ರರನ್ನಾಗಿ ಮಾಡಲಿಲ್ಲ. ಅವರನ್ನು ವಿರೋಧಿಸುತ್ತಿದ್ದ ಬ್ರಿಟಿಷರನ್ನು ಕೂಡ ದ್ವೇಷಿಸದೆ ಸ್ನೇಹಿತರನ್ನಾಗಿ ಮಾಡಿಕೊಂಡಿದ್ದರಿಂದ ನಮ್ಮದು ಸ್ವತಂತ್ರ ರಾಷ್ಟ್ರವಾಯಿತು. ದ್ವೇಷದಿಂದ ಮಾಡಬೇಕೆಂದಿದ್ದರೆ ಸ್ವತಂತ್ರ ರಾಷ್ಟ್ರವನ್ನು ಕಟ್ಟುವುದಕ್ಕೆ ಆಗುತ್ತಿರಲಿಲ್ಲ. ನಾನು ಮಹಾತ್ಮ ಗಾಂಧಿಯವರ ಅನುಯಾಯಿಯಾಗಿ ಈ ಸಭೆಗೂ ಕಾಂಗ್ರೆಸ್ ಸಂಸ್ಥೆಗೂ ಅರಿಕೆ ಮಾಡಿಕೊಳ್ಳುವುದಿಷ್ಟೆ. ಮಹಾತ್ಮಾ ಗಾಂಧಿಯವರ ತತ್ವಗಳ ಆರಾಧಕರಾದ ನಾವು ಮಹಾತ್ಮರು ತೋರಿರುವ ಮಾರ್ಗದಲ್ಲಿ ನಡೆಯೋಣ. ಅನುಯಾಯಿಗಳಾಗಿ ವಿರೋಧವಾದ ದಾರಿ ಹಿಡಿಯಬಾರದು. ಕರ್ಣಾಟಕದ ವಿಷಯ ಇಂದಲ್ಲದಿದ್ದರೆ ನಾಳೆ ಅಥವಾ ನಾಳಿದ್ದು ಆಗದೇ ಇರುವ ವಿಷಯವೇನಲ್ಲ. ಒಂದು ವೇಳೆ ಈಗ ಆದರೂ ಬದಲಾವಣೆಯಾಗದೇ ಇರುವ ವಿಷಯವಲ್ಲ. ಇದೇನೂ ಸೂರ್ಯಚಂದ್ರರ ಹಾಗಲ್ಲ. ಮೊಗಲ ಸಾಮ್ರಾಜ್ಯ ಎಷ್ಟು ವಿಸ್ತಾರವಾಗಿತ್ತು ಎಂದು ಮಾನ್ಯ ಮುಖ್ಯ ಮಂತ್ರಿಗಳು ಹೇಳಿದರು. ಅವರು ಈ ದಿವಸ ಮೊಗಲ ಸಾಮ್ರಾಜ್ಯಶಾಹಿಯಾಗಲು ಹೊರಟಿದ್ದಾರೆ. ಆದರೆ ಮೊಗಲ ಸಾಮ್ರಾಜ್ಯ ಎಷ್ಟು ದಿವಸ ಉಳಿದುಕೊಳ್ಳುವುದಕ್ಕೆ ಸಾಧ್ಯವಾಯಿತು ಎಂಬುದನ್ನು ಅವರು ಮರೆತರು, 'ಏಕ್ ದಿನ್‌ಕಾ ಸುಲ್ತಾನ್' ಎಂದು ಹೇಳುತ್ತಾರೆ, ಹಾಗಾಗುತ್ತದೆ.

ಸ್ವಾಮಿ, ಈ 'ಏಕ್-ದಿನ್-ಕ ಸುಲ್ತಾನ್'ತನ, ಈ ರಾಜಕೀಯ ವೈಖರಿ, ಈ ಆಡಳಿತ ನೀತಿ, ಈ ಪುನರ್ವಿಂಗಡಣಾ ಕ್ರಮ ಬೇಡ. ಇದು ಸಾಧುವಲ್ಲವೆಂಬುದನ್ನು ಶ್ರೀಮಾನ್ ಬೋರಣ್ಣಗೌಡರೂ ಬಹಳ ಚೆನ್ನಾಗಿ ಹೇಳಿದ್ದಾರೆ. ನಾನು ಫ್ಯಾಕ್ಟ್ ಫೈಂಡಿಂಗ್ ಕಮಿಟಿಯ ವರದಿಯ ಮೇಲೆ ಮಾತನಾಡಿದಾಗ ಏನು ಹೇಳಿದ್ದೇನೆಂಬುದು ದೇಶಕ್ಕೇ ಗೊತ್ತಿದೆ.

ಶ್ರೀ ಕೆ. ಹನುಮಂತಯ್ಯ.—ಅದು ಮರೆತು ಹೋಗಿದೆ. ಈ ಕೋಪ ಎಷ್ಟು ದಿವಸ?

ಶ್ರೀ ಟಿ. ಎಸ್. ಮೂಡಲಗಿರಿಗೌಡ.—ಮಾನ್ಯ ಮುಖ್ಯ ಮಂತ್ರಿಗಳು ತಮ್ಮ ಅಪರಿಮಿತವಾದ ಬುದ್ಧಿಯಲ್ಲಿ ಈ ಭಾಷೆಯನ್ನು ಪದೇ ಪದೇ ಉಪಯೋಗಿಸುತ್ತಿದ್ದಾರೆ.

ಶ್ರೀ ಕೆ. ಹನುಮಂತಯ್ಯ.—ನಾನು "ಈ ಕೋಪ ಎಷ್ಟು ದಿವಸ ಇರುತ್ತದೆ" ಎಂದು ಹೇಳುವಾಗ "ಸಜ್ಜನರ ಕೋಪ ಕ್ಷಣಿಕ" ಎಂಬ ಸರ್ವಜ್ಞನ ಪದಗಳನ್ನು ಆಧಾರವಾಗಿಟ್ಟುಕೊಂಡು ಹೇಳುತ್ತಿದ್ದೇನೆ ಅಷ್ಟೆ.

ಶ್ರೀ ಟಿ. ಎಸ್. ಮೂಡಲಗಿರಿಗೌಡ.—ಅದು ಕ್ಷಣಿಕವಲ್ಲ; ತದ್ವಿರುದ್ಧ; ಸಜ್ಜನರ ಕೋಪ ನಿರಂತರ; ದುರ್ಜನರ ಕೋಪ ಅತಿ ಕ್ಷಣಿಕ ಅಷ್ಟೆ. ಏಕೆಂದರೆ ಸಜ್ಜನರಿಗೆ ತಾವು ಒಂದು ಸಾರಿ ಹೇಳಿದ್ದು ಸರಿಯೆಂದು ಕಂಡು ಬಂದರೆ ಸಾಕು, ಅದನ್ನು ಸಾಧಿಸುವುದಕ್ಕಾಗಿ ಯಾವುದನ್ನಾದರೂ ತ್ಯಾಗ ಮಾಡುವುದಕ್ಕೂ ಸಿದ್ಧರಾಗಿರುತ್ತಾರೆ.

ಅಧ್ಯಕ್ಷರು.—ನಿಮ್ಮ ವ್ಯಾಖ್ಯಾನವೇ ಬೇರೆ ಅವರ ವ್ಯಾಖ್ಯಾನವೇ ಬೇರೆ!

ಶ್ರೀ ಟಿ. ಎಸ್. ಮೂಡಲಗಿರಿಗೌಡ.—ಅಂತು, ಅದನ್ನು ಈ ಸಭೆ ಯೋಚನೆ ಮಾಡಬೇಕು. ವಶಿಷ್ಠ ವಿಶ್ವಾಮಿತ್ರರ ವಿಷಯವನ್ನು ಈ ಸಭೆಯವರು ತಿಳಿದಿದ್ದಾರೆ. ಅದನ್ನು ನೋಡಿ ಈ ಸಭೆಯವರೇ ತಮ್ಮ interpretation ಅನ್ನು ಕೊಡಲಿ.

ಆದ್ದರಿಂದ ಹೀಗೆ ಮಾಡಿ ರಾಜ್ಯವನ್ನು ಜಿಗುಪ್ಸೆಗೆ ಈಡುಮಾಡುವುದು ತೀರ ಖಂಡನೀಯ. ಬೇರೆ ಪಂಗಡಗಳು ಹುಟ್ಟಿಕೊಳ್ಳುವುದಕ್ಕೆ ನೀವು ಅವಕಾಶಕೊಟ್ಟು ನಮ್ಮ ತಪಸ್ಸಿಗೆ ಭಂಗಮಾಡಿ, ನಮ್ಮ ತಪಸ್ಸನ್ನು ಬೇರೆಯವರಿಗೆ ಧಾರೆಯೆರೆಯತಕ್ಕ ಸನ್ನಿವೇಶಕ್ಕೆ ಹೋಗಬಾರದು. ಇದನ್ನೇ ಬೋರಣ್ಣಗೌಡರೂ ಹೇಳಿದ್ದಾರೆ. ಕರ್ಣಾಟಕದವರೂ ನಮ್ಮ ಅಣ್ಣ ತಮ್ಮಂದಿರು; ಅವರ ಕಷ್ಟ ಸುಖಗಳು ನಮಗೆ ಗೊತ್ತಿಲ್ಲದೆ ಇಲ್ಲ. ಅವರನ್ನು ಮೇಲಕ್ಕೆ ತರಬೇಕಾದದ್ದು ನಮ್ಮ ಕರ್ತವ್ಯ, ನಿಜ. ನಮ್ಮ ಅಣ್ಣ ತಮ್ಮಂದಿರು ಸಂಕಟಕ್ಕೆ ಸಿಕ್ಕಿಬಿದ್ದಿದ್ದರೆ ನಾವು ಸಹಿಸುವವರಲ್ಲ. ಭಾರತದ ಯಾವ ಪ್ರಜೆಯೂ ಕಷ್ಟಕ್ಕೆ ಸಿಕ್ಕಬಾರದು. ಅದೇ ನಮ್ಮ ಆಶಯ. ಬೇರೊಂದು ರಾಷ್ಟ್ರವಾದರೆ ಅವರೂ ಪುಷ್ಟಿಯುತವಾಗಿ ಬೆಳೆಯುವುದಕ್ಕೆ ಅವಕಾಶವಿದೆ. ಅದು ಬಿಟ್ಟು ಮೈಸೂರಿಗೆ ಸೇರಿದರೆ ಅವರು ನಿರ್ಜೀವರಾಗುತ್ತಾರೆ. ಅವರ ವೀರತನವನ್ನು ಕಳೆದುಕೊಳ್ಳಬೇಕಾಗುತ್ತದೆ. ಅವರು ಅಲ್ಲೇ ಇದ್ದರೆ ಸ್ವಶಕ್ತಿಯಿಂದ ರಾಜ್ಯವನ್ನು ಕಟ್ಟಿ ದೇಶವನ್ನು ಮುಂದಕ್ಕೆ ತರಬೇಕೆಂಬ ಹುಮ್ಮಸ್ಸಿನಿಂದ ಕೂಡಿದವರಾಗಿ ಆಂಧ್ರರು ಯಾವ ರೀತಿ ರಾಜ್ಯಪಾಲನೆ ಮಾಡುತ್ತಿದ್ದಾರೋ ಅದೇ ರೀತಿ ಮುಂದುವರಿಯುತ್ತಾರೆ. ಅನಂತರ ಐದು ವರ್ಷಕ್ಕೋ ಹತ್ತು ವರ್ಷಕ್ಕೋ ನಾವಿಬ್ಬರೂ ಒಂದು ಕಡೆ ಸೇರಿ ಬಾಳೋಣವೆಂದರೆ ಒಂದಾಗಬಹುದು. ಅಷ್ಟೇ ಹೊರತು, ಈಗಲೇ ಒಂದಾಗಬೇಕೆಂದರೆ ಅದು ಆಗದಿರತಕ್ಕ ವಿಷಯ. ನಮಗೂ ಅವರಿಗೂ ವೈಷಮ್ಯವಿದೆಯೆಂದು ನಾನು ಹೇಳುವುದಿಲ್ಲ. ನಾನು ಯಾವ ವಿಧವಾದ ಪಂಗಡ ಪಂಥಗಳ ದೃಷ್ಟಿಯಿಂದಲಾಗಲಿ ಕೋಮುವಾರು ದ್ವೇಷದಿಂದಾಗಲಿ ಹೇಳತಕ್ಕವನಲ್ಲವೆಂದು ಸತ್ಯವಾಗಿ ಪ್ರಮಾಣ ಮಾಡಿ ಹೇಳುತ್ತೇನೆ. ಯಾರು ಅಂಥಾ

ಭಾವನೆಗಳನ್ನಿಟ್ಟುಕೊಂಡಿದ್ದಾರೋ ಅವರಿಗೆ ವಿರೋಧಿ ಶತ್ರು ನಾನು. ಕರ್ಣಾಟಕ ದೇಶವನ್ನು ಬೇರೆಯಾಗಿ ಕಟ್ಟಿ ಆ ಜನರಿಗೂ ಸೌಖ್ಯವನ್ನುಂಟುಮಾಡಿಕೊಡುವುದೇ ನನ್ನ ಆಶಯ. ಆದರೆ ಇಲ್ಲಿ ಮುಖ್ಯ ಮಂತ್ರಿಗಳು ಮಾಡಿದ ಭಾಷಣದಲ್ಲಾಗಲಿ ಅಥವಾ ಹೊರಗಡೆಯ ನಾಯಕರುಗಳು ಹೇಳುವ ಭಾಷಣಗಳಲ್ಲಾಗಲಿ ಮತ್ತು ಇದಕ್ಕಾಗಿ (ಕರ್ಣಾಟಕಕ್ಕಾಗಿ) ಪ್ರಯತ್ನ ಮಾಡುವವರ ಮನೋಭಿಪ್ರಾಯಗಳನ್ನೂ ಅವರುಗಳ ಗುರಿಯನ್ನೂ ನೋಡಿದರೆ ಸಾಮಾನ್ಯ ಜನರ ಕ್ಷೇಮ ಚಿಂತನೆಗಿಂತಲೂ ಹೆಚ್ಚಾಗಿ ತಮ್ಮಗಳ ಕ್ಷೇಮ ಚಿಂತನೆಗಳೇ ಮುಖ್ಯವಾಗಿದೆಯೆಂದು ಕಾಣುತ್ತದೆ. ಈ ರಾಜಕೀಯ ಸ್ಥಾನಮಾನಗಳ ಮತ್ತು ಸರ್ಕಾರದ ಸ್ಥಾನಮಾನಗಳ ಲಾಲಸೆಯಲ್ಲಿ ದೇಶದ ಜನಗಳು ಹಾಳಾಗುತ್ತಾರೆ.

Mr. SPEAKER.—Man is a selfish creature; what to do?

ಶ್ರೀ ಟಿ. ಎ. ಮೂಡಲಗಿರಿಗೌಡ.—ಒಟ್ಟಿನಲ್ಲಿ ನನ್ನ ಉದ್ದೇಶವಿಷ್ಟೆ. ಈ ಮಿಳನದಿಂದ ಸಾಮಾನ್ಯ ಪ್ರಜೆಗೆ ನಾವು ಕೆಡುಕನ್ನು ತರಬಾರದು. ದೇಶವು ವಿಶಾಲವಾದರೇನು? ಎಂದು ಕೇಳಬಹುದು. ಇಲ್ಲಿಂದ ಒಮ್ಮೆ ಮುಖ್ಯ ಮಂತ್ರಿಗಳು ಬೆಳಗಾವಿಗೆ ಹೋಗಿ ಅಲ್ಲಿಂದ ಮತ್ತೆ ಇಲ್ಲಿಗೆ ಬರುವ ಹೊತ್ತಿಗೆ . . . .

ಒಬ್ಬ ಸದಸ್ಯರು.—T.A. ಜಾಸ್ತಿಯಾಗುತ್ತದೆ!

ಶ್ರೀ ಟಿ. ಎ. ಮೂಡಲಗಿರಿಗೌಡ.—ಅದಕ್ಕೆ ನಾನು ವ್ಯಥೆಪಡುವುದಿಲ್ಲ. ಅವರು ಒಂದು ಸಾರಿ ಹೋಗಿ ಬಂದರೆಂದರೆ ನಾಲ್ಕು ದಿವಸ ಸುಧಾರಿಸಿಕೊಳ್ಳಬೇಕಾಗುತ್ತದೆ. ಅವರಿಗಿರತಕ್ಕ ಕಾಲಾವಧಿ ಒಂದು ತಿಂಗಳೋ, ಮೂರು ತಿಂಗಳೋ, ಆರು ತಿಂಗಳೋ! ಈ ಪ್ರಜಾಪ್ರಭುತ್ವದಲ್ಲಿ ಯಾರು ಕಂಡವರು?

ಶ್ರೀ ಕೆ. ಹನುಮಂತಯ್ಯ.—ಅವರೇ ಹೇಳುವಂತೆ ಒಂದು ತಿಂಗಳು ಇರುತ್ತದೋ ಎರಡು ತಿಂಗಳು ಇರುತ್ತದೋ ಗೊತ್ತಿಲ್ಲ. ಅದೇ ತೋರಿಸುತ್ತದೆ ನಮಗೆ ಸ್ವಾರ್ಥವಿಲ್ಲ ಎಂದು.

ಶ್ರೀ ಟಿ. ಎ. ಮೂಡಲಗಿರಿಗೌಡ.—ಈ ವರದಿಯಿಂದ ನಮ್ಮ ದೇಶದ ಸಾಮಾನ್ಯ ಪ್ರಜಾವರ್ಗಕ್ಕೆ ಎಷ್ಟು ಸೌಖ್ಯ ದೊರೆಯಬಲ್ಲದು? ಈ ಮಂತ್ರಿ ಮಂಡಳದಿಂದ, ಈ ವಿಸ್ತಾರವಾದ ರಾಷ್ಟ್ರದಿಂದ ಹೆಚ್ಚು ಅನುಕೂಲವಾದೀತೇ? ಹಾಗೆಂದರೆ ನೀವು ಕೇಳಬಹುದು ಇದಕ್ಕಿಂತ ವಿಸ್ತಾರವಾದ ರಾಷ್ಟ್ರಗಳಿಲ್ಲವೇ ಎಂದು. ಮಾನ್ಯ ಸದಸ್ಯರುಗಳೇ ನೋಡಬಹುದು ಅವರು ಎಷ್ಟುಮಟ್ಟಿಗೆ ಸೌಖ್ಯಪಡುತ್ತಿದ್ದಾರೆ ಎಂಬುದನ್ನು ನಾನೇನೂ ಹೇಳಬೇಕಾಗಿಲ್ಲ.

ಇನ್ನೊಂದು ಬಹಳ ಮುಖ್ಯವಾದ ವಿಷಯ. ಈ ಸಮ್ಮಿಳನದಿಂದ ಎಷ್ಟು ಕಷ್ಟ ಕಾರ್ಪಣ್ಯಗಳು ಉಂಟಾಗುತ್ತವೆಂಬುದನ್ನು ಮಾನ್ಯ ಸದಸ್ಯರುಗಳು ಯೋಚಿಸಬೇಕು. ಸುಖ ದೊರೆಯುತ್ತದೆಂದು ಹೇಳುತ್ತಾರೆ. ನಿಶ್ಚಯ; ಯಾವಾಗ? ನಾನು ಮುದುಕನಾದ ಮೇಲೆಯೋ ಅಥವಾ ನನ್ನ ಪರಿಸಮಾಪ್ತಿಯಾದ ಮೇಲೆಯೋ? ಅಥವಾ ಇಮಾಂರವರು ಮುದುಕರಾದ ಮೇಲೆಯೋ?

ಶ್ರೀ ಜೆ. ಮಹಮ್ಮದ್ ಇಮಾಂ.—ನಾನು ಮುದುಕನಾಗುವುದು!

(ನಗು)

ಶ್ರೀ ಟಿ. ಎ. ಮೂಡಲಗಿರಿಗೌಡ.—ಅದಷ್ಟೇ ಅಲ್ಲ ನಮ್ಮ ಮುಂದಿರುವ ಪ್ರಶ್ನೆ. ಭಾರತದ ಸರ್ಕಾರದವರು ಒಂದನೆಯ ಪಂಚವಾರ್ಷಿಕ ಯೋಜನೆಯನ್ನು ಮುಗಿಸಿ ಎರಡನೆಯ ಪಾಂಚವಾರ್ಷಿಕ ಯೋಜನೆಗಾಗಿ 2,000 ಕೋಟಿ ರೂಪಾಯಿಗಳನ್ನು ಖರ್ಚುಮಾಡಿ ನಮ್ಮ ಭಾರತ ದೇಶವನ್ನು ಇಡೀ ಪ್ರಪಂಚದ ಇತರ ರಾಷ್ಟ್ರಗಳಿಗೆ ಸರಿಸಮಕ್ಕೆ ತರಬೇಕಾಗಿದೆ. ಅದಕ್ಕೆ ಆಗಬೇಕಾದ ಎಲ್ಲ ಕಾರ್ಯಕ್ರಮಗಳೂ ಮುಗಿದಿವೆ. ಎರಡನೆಯ ಪಂಚವಾರ್ಷಿಕ ಯೋಜನೆ ಈಗತಾನೆ ಪ್ರಾರಂಭವಾಗಲಿದೆ. ಇಂಥ ಸಂದರ್ಭದಲ್ಲಿ ಈ ಪ್ರಶ್ನೆ ಬಂದಿತೆಂದರೆ ಪಂಚವಾರ್ಷಿಕ ಯೋಜನೆ ಮಣ್ಣುಪಾಲಾದಂತೆಯೇ. ನಾವೇನು ರಾಷ್ಟ್ರಾಭಿವೃದ್ಧಿ ಮಾಡಬೇಕೆಂದಿದ್ದೇವೋ ಅದೆಲ್ಲಾ ನಿಷ್ಪ್ರಯೋಜಕವಾಗುತ್ತದೆ. ಅದು ಸಾಮಾನ್ಯ ಜನರಿಗೆ ಮುಟ್ಟುವುದಿಲ್ಲ. ಈಗ ಮೊದಲನೆಯ ಪಾಂಚವಾರ್ಷಿಕ ಯೋಜನೆಯನ್ನೇ ನೋಡೋಣ. ಅದೆಷ್ಟು ಪರಿಣಾಮಕಾರಿಯಾಗಿದೆಯೆಂಬುದು ನಮ್ಮ ಸ್ನೇಹಿತರುಗಳಿಗೇ ಗೊತ್ತಿದೆ. ಆದ್ದರಿಂದ ಈ ಎರಡನೆಯ ಪಾಂಚವಾರ್ಷಿಕ ಯೋಜನೆ ಕಳೆದುಹೋಗುವವರೆಗೂ ಈ ಪ್ರಶ್ನೆಯನ್ನು ಯೋಚನೆ ಮಾಡುವುದು ಬೇಡ. ಅನಂತರ ಉಭಯ ರಾಷ್ಟ್ರಗಳೂ ಯಾವ ಮಟ್ಟಕ್ಕೆ ಬರುತ್ತವೋ ನೋಡಿಕೊಂಡು ಯೋಚನೆಮಾಡೋಣ. ಈ ಸಮ್ಮೇಳನದಿಂದ ಯಾವ ಯಾವ ಸಮಸ್ಯೆಗಳು ಬರುತ್ತವೆಂಬುದನ್ನು ಫ್ಯಾಕ್ಟ್ ಫೈಂಡಿಂಗ್ ಕಮಿಟಿಯವರು ತಿಳಿಸಿದ್ದಾರೆ. ಪುನರ್ವಿಂಗಡಣಾ ಕಮಿಟಿಯವರೂ ತಿಳಿಸಿದ್ದಾರೆ. ಮೈಸೂರು ಸಂಸ್ಥಾನದ 90 ಲಕ್ಷ ಹಳ್ಳಿಗಾಡಿನ ಜನ ಆ ಕಷ್ಟಗಳನ್ನೆಲ್ಲಾ ಅನುಭವಿಸಬೇಕಾಗಿ ಬರುತ್ತದೆ. ಪಟ್ಟಣದವರು ಅನುಭವಿಸಬೇಕಾಗಿಲ್ಲವೇ ಎಂದು ಕೇಳಬಹುದು. ಆದರೆ ಅವರಿಗೆ ಅದರ ಕಷ್ಟ ಕಡಿಮೆ. ಇದರ ಪರಿಣಾಮವಾಗಿ ಕಂದಾಯ ಹೆಚ್ಚಾದರೆ, ತೆರಿಗೆಗಳು ಹೆಚ್ಚಾದರೆ ಈ ಸಾಮಾನ್ಯ ಜನ ಕೊಡಬೇಕಾಗಿ ಬರುತ್ತದೆ. ನಾವಂತೂ ಆ ಜನಗಳ ಶಾಪವನ್ನು ಹೊರುವುದಕ್ಕೆ ತಯಾರಾಗಿಲ್ಲ. ಆ ರೀತಿ ಕಂದಾಯ ಕಾಣಿಕೆಗಳು ಹೆಚ್ಚಾಗುವುದರಿಂದ ಉಂಟಾಗಬಹುದಾದ ದುಷ್ಪರಿಣಾಮಗಳಿಗೆ ಅಪಘಾತಗಳಿಗೆ ಯಾರು ಕಾರಣರೋ ಅವರ ತಲೆಯಮೇಲೆ ಆ ಶಾಪ ಬೀಳಬೇಕು. ನಾವದಕ್ಕೆ ಹೊಣೆಗಾರರಲ್ಲ.

ಆದ್ದರಿಂದ ಯಾವ ವಿಧದಲ್ಲೂ ಈ ವರದಿ ಅಂಗೀಕಾರಾರ್ಹವಲ್ಲ. ನಮ್ಮ ಬೋರಣ್ಣಗೌಡರೂ ಇದನ್ನು ಒತ್ತಿ ಹೇಳಿದ್ದಾರೆ. ಮೈಸೂರು ದೇಶದ ಕಾಂಗ್ರೆಸ್ ಕಮಿಟಿಯವರೂ ಮತ್ತು ಕಾನ್‌ಸ್ಟಿಟ್ಯುಯಂಟ್ ಅಸೆಂಬ್ಲಿಯವರೂ ಆಗಲೇ ಈ ಬಗ್ಗೆ ನಿರ್ಣಯವನ್ನು ಮಾಡಿದ್ದಾರೆಂದು ಹೇಳಿದರು. ಆದರೆ, ವಾಸ್ತವವಾಗಿ ಆ ನಿರ್ಣಯದಲ್ಲಿರುವ ಪದಗಳನ್ನು ಓದಿನೋಡಿ; ಆ ನಿರ್ಣಯದಲ್ಲಿರುವುದನ್ನು ನಾನೂ ಒಪ್ಪಿಕೊಳ್ಳುತ್ತೇನೆ. ಯಾರಾದರೂ ಅಕ್ಕಪಕ್ಕದವರು ತಮಗೆ ಕಷ್ಟವೆಂದು ಹೇಳಿ ನಮ್ಮೊಡನೆ ಸೇರುತ್ತೇವೆಂದು ಹೇಳಿದರೆ, ಜೊತೆಗೆ ಬರುತ್ತೇವೆಂದು ಹೇಳಿದರೆ ಅವರನ್ನು ಕರೆದುಕೊಳ್ಳುವಷ್ಟಕ್ಕಾದರೂ, courtesyಗೆಂದಾದರೂ ಅವಕಾಶವಿರಬೇಡವೇ ಎಂದು ಹೇಳಿ ಮಾಡಿದ್ದು ಅಷ್ಟೆ. ಆದ್ದರಿಂದ ಭಾರತ ಸರ್ಕಾರದವರು ಮತ್ತು ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ಸಿನವರು ಇದನ್ನು ಮತ್ತೆ ಪರ್ಯಾಲೋಚನೆ ಮಾಡಬೇಕು. ಇನ್ನೂ 5-10 ವರ್ಷಗಳು ಕಳೆಯಲಿ; ಎರಡನೆಯ ಪಂಚವಾರ್ಷಿಕ ಯೋಜನೆ ಕಳೆಯಲಿ. ಆಮೇಲೆ ಬೇಕಾದರೆ ಯೋಚನೆಮಾಡೋಣ. ಕರ್ಣಾಟಕದ ರಾಜ್ಯವೆಂದರೆ ಅತ್ತಕಡೆಯಿಂದ ಇತ್ತಕಡೆಗೆ 500 ಮೈಲಿಗಳ ದೂರವಾಗುತ್ತದೆ. ಹೈಕೋರ್ಟಿಗೆ ಬರಬೇಕೆಂದರೆ 500 ಮೈಲಿಯಿಂದ ಬರಬೇಕಾಗುತ್ತದೆ. ಒಂದು ಸಾರಿ ಹೈಕೋರ್ಟಿಗೆ ಬರಬೇಕೆಂದರೆ 8 ದಿವಸಗಳು ವ್ಯರ್ಥವಾಗುತ್ತವೆ. ಅಲ್ಲಿಗೆ, ಆ ಭಾಗದವರ ಸೌಕರ್ಯಕ್ಕಾಗಿ ಬೇರೊಂದು

(ಶ್ರೀ ಟಿ. ಎನ್. ಮೂಡಲಗಿರಿಗೌಡ.)

ಹೈಕೋರ್ಟು ಮಾಡಲೇ ಬೇಕಾಗುತ್ತದೆ. ಆದ್ದರಿಂದ ಕರ್ಣಾಟಕ ರಚನೆಯಿಂದ ನಮಗೆ ಅಪಘಾತವಾಗುವುದಕ್ಕಿಂತ ಹೆಚ್ಚಾಗಿ ಅವರಿಗೆ ಸೌಕರ್ಯಗಳು ಕಡಿಮೆಯಾಗುತ್ತವೆ. ಆದಕಾರಣ ಭಾರತ ಸರ್ಕಾರದವರು ಹೇಗೆ ಆಂಧ್ರ ರಾಷ್ಟ್ರವನ್ನು ಕಟ್ಟಿಕೊಟ್ಟರೋ ಹಾಗೆಯೇ ನಮ್ಮ ಕರ್ಣಾಟಕ ಮಿತ್ರರಿಗಾಗಿ ಬೇರೆ ಒಂದು ರಾಷ್ಟ್ರವನ್ನೇ ನಿರ್ಮಿಸಲಿ, ಮುಂದೆ ನಾವೇ ಅವರನ್ನು ತಲೆಬಾಗಿ ಬನ್ನಿರಪ್ಪಾ ಎಂದು ಕರೆಯುವ ಕಾಲ ಬರುತ್ತದೆ. ಇಷ್ಟು ಹೇಳಿ ಈ ಎಸ್.ಆರ್.ಸಿ. ವರದಿ ಸ್ವಾಗತಾರ್ಹವಾದದ್ದಲ್ಲವೆಂದು ಹೇಳಿ ಮುಗಿಸುತ್ತೇನೆ.

Sri V. M. MASCARENHAS (St. John's Hill).—Mr. Speaker, I must confess that I suffer from a little handicap following, as I do, my immediate predecessor Sri T. N. Mudalagiri Gowda, who had as his victim Sri Hanumanthaiya for half an hour; but unfortunately I have no victim. So, I restrict myself to speaking on the S. R. C. Report.

Sir, I welcome this Report, and, in doing so, I congratulate its authors on the magnificent and arduous task they have undertaken. They were appointed by the Government to examine objectively and dispassionately the question of the reorganisation of the States,—a task which concerns 380 millions of people and thousands of square miles of land. I must admit the task had its innumerable difficulties, yet it must be admitted that the Report they produced is not only a wonderful document but also an historical one.

The Report, as we are all aware now, has been welcomed by some and it has brought displeasure to others. But the question is this : The Report which concerns the whole of India must be examined from an All-India outlook and not from the outlook of a particular province or a particular area. With these few general remarks, Sir, I now come to the Report itself.

The discussion on this Report has been going on for the last 4½ days and I am inclined to believe that in this House there are two distinct camps. The first camp accepts the Report, or in other words, the formation of a United Karnataka with some modifications as far as Bellary is concerned; while the other camp says that Mysore shall remain as it is, if necessary, with a slight modification, that they would not mind the inclusion of Kollegal, Coorg and South Canara.

The whole discussion goes on these two lines and I will only confine my remarks as to which of the two, in my opinion, sounds reasonable. Sri Ramachandra Rao who is generally sober-minded made a very astounding remark saying that the Report should not find its place here but somewhere-else. Some other member said that the Report should be burnt. If this is the attitude of some of the members in this House, I am afraid I must say that it does not add to the dignity of this House. After all, we are discussing a Report; we are at liberty either to take it or not to take it. But to cast aspersions in the way that has been done—I am very sorry for it and I personally wish that those statesments had been unsaid. Sri Ramachandra Rao in continuing his argument against the Karnataka State began with the theory that Mysore has progressed because it was a composite State. It is strange that Sri Ramachandra Rao with all the experience he has had not only in the field of politics for the last so many years but also after being a Minister for the last 42 months, should have made such a statement. I can without fear of contradiction say in this House that Mysore's progress dates back to 1901, the year in which Sir K. Seshadri Iyer, that eminent and far-sighted statesman laid foundation for the electrical undertakings now known as Sivasamudram Hydro-Electric Works. It is, in my opinion, the electrical undertaking of that year, which gave Mysore an absolutely new look compared to the other parts. There is the other happy factor so far as Mysore State is concerned. A pious ruler with the welfare of his subjects at heart, happened to ascend the throne in the same year and he had the good sense to muster round him a series of succession, all able and eminent statesmen to guide him. These are the two factors that for 40 years gave Mysore a premier position in the whole of India and earned it the name 'Model State'. So Mysore's greatness is closely associated with the electrical undertakings in the State and also side

by side with the progress enunciated by the late Maharaja of revered memory. This brought about progress in the field of education, progress in the field of industry, progress in the field of social sciences, in the field of medicine and animal husbandry, with the result that we see to-day all round progress in the State, which is the envy of others. Now, the argument of the second camp is ! 'Well we have progressed ; we have been quite happy and contented. At this juncture to take as our neighbour or take as a friend along with this household, a neighbour who is economically, industrially and in other respects less advanced than we, would be a definite handicap to the State and would hamper the progress of the State in the coming years." There is no doubt a certain amount of truth in the contention, but the contention has been made on the plea that the neighbouring areas that come into Mysore are absolutely poor or absolutely undeveloped and are not fit to be our brethern. Unfortunately I am not of the same opinion.

I begin with Mysore's financial position itself. There was a charge made that the Chief Minister, in spite of being a Finance Minister, did not present a nice financial statement on the day he made his opening speech suggesting United Karnataka. To-day Mysore State has a debt position of Rs. 50 crores and by the end of the Five-Year Plan our debt position would go up to Rs. 120 crores. It will mean that by the end of 1961 this State will have to bear an interest charge alone of Rs. 5 crores a year. We as members of this House are fully aware of our revenues and I would like to ask Hon'ble Members to consider how best these 5 crores of revenues are to come. It may be said that we have a number of schemes which will bring in revenue, but let me assure the Hon'ble Members that not one of these schemes will bear any fruit before 1964 and even if they do, they will bring an yield as the Krishnaraja sagar Dam has done of 1·8 per cent and from 1964 onwards from the Lakkuvalli and the Tunga dams of less than one per cent. So the States Reorganisation Commission very wisely say—I refer the Hon'ble Members to page 61 of the Report wherein they state that larger units have to be formed and States have to be reorganised and the thing that they stress upon is : "A further point in favour of larger units is that only the creation of relatively larger States will lead to appreciable economy in the unproductive expenditure on administration, which the country so clearly needs at the present stage." So when tomorrow the neighbouring areas are added on to us, we have a population of two crores, we have another eight districts added on to us, have a single Legislature we have a single High Court, a single Secretariat, and Heads of Departments common to a large area. The revenues of the new areas will be distinctly an additional gain to the revenues of Mysore State, while expenditure, though perhaps slightly enhanced, would not be double as it would be if the two States were independent.

There is also a reference made by the Commission with regard to the new areas that are going to be added on to the Mysore State. That is, they have made a specific recommendation regarding the Malnad. They say the fact that practically the whole of the malnad area will belong to one State, is not an insignificant gain. It may be expected that co-ordinated planning for this area will follow. They go on further to say that the large Karnataka areas are now having very many development schemes—Ghataprabha, Tungabhadra *cum* Krishna Hydro-electric Project, etc., and they say that with these rapid developments, the areas that will be added on to Mysore will not only be not a hindrance but will be a positive gain. I am stressing on this important fact that the neighbouring areas that are going to join Mysore are not, as are supposed to be by many members, a definite handicap or a definite drawback to the State. These are areas where any amount of potential wealth is available, where there are abundant areas of mineral and forest wealth and it is up to the brain of Mysore—a challenge has been

(SRI V. M. MASCARENHAS.)

thrown as it were, to us all—to develop these areas to see that Mysore with these areas augments its revenues and also becomes one of the most important States in the Indian Union.

There is also one more aspect which has been touched upon by the Commission. It is stated that a stretch of 210 miles of seacoast will bring in much prosperity to Mysore in trade and commerce. With these facts before us, I will only say that Mysore in this new set-up will definitely prove to be an improvement and an asset to the Indian Union. There is also one aspect to be considered. The neighbour who will now become the friend of Mysore or who becomes our brother, is not only hardy but also a hard-working man and a very good agriculturist and a very good businessman. The inclusion of such a neighbour in the State will be definitely an asset.

I will only briefly touch upon Bellary and the Rajpramukh. Bellary, as has been said by almost every member, has been an unfortunate affair in that after the parliament has taken a definite decision this Commission should have thought it best to reverse the decision and to give it back to Andhra. I am sure with our representation the Parliament will now consider the justness of our request and will see that these three taluks are handed back to us and made part of the Mysore State.

Much has also been spoken of the institution of Rajpramukh. We are all united in saying that the present Rajpramukh has been loved by all his subjects and the ruling House of Mysore has endeared itself to the entire people of the Mysore State. Rajpramukh in the circumstances would certainly be in the interests of the citizens of Mysore. It is earnestly prayed that the present Rajpramukh, though not called by the same name, will continue to be our new Governor, a Governor of the United Karnataka.

I have seen that during these few days there has been unfortunately, so much of heat, so much of annoyance or much of ill-will during discussion. My earnest appeal to all my friends would be: this is not a time when we should give vent to feelings of this kind. The Congress President, Sri Channaiya, when he gave the statement the other day, said that it is our duty to stand by our leader Pandit Jawharlal Nehru and to give him all the support that he needs. He also said that in the interests of the State it was his duty to tell everybody that the decisions that the High Power Committee takes shall be accepted by us in all fairness and in all humility. I would therefore inform all the members that with goodwill, tolerance and understanding it is possible for us to come to an agreed conclusion. The problem is not after all so serious or so very heart-rending as some of the members were inclined to consider. May I therefore appeal to them: Let us all as one united body, as friends, look upon this question and feel that it should be taken with one voice and with such a voice let us welcome our neighbouring friends and call them as our brothers in the new State we will soon create.

*Sri M. PALANIYAPPAN (Ulsoor).—We are now discussing the State Reorganisation Commission's Report. As my friend Sri Mascarenhas stated, there are two kinds of opinion in this House, one for the formation of United Karnataka and the other for the retention of Mysore as it is with a few portions of Kollegal, Coorg and a few other places added to it. My friend Sri Mudalagiri Gowda has stated his views with sincerity from his heart. He remarked that he has given his life and soul for the present position of the Leader of the House. I do not know what has made him to remain behind without following that Leader for whose present position, as he has said, he is personally responsible. The Congress President has very clearly said that it is the duty of every one of us to follow our Leaders, to have faith in them, to trust in their words and to follow their guidance. But here, I feel very much that a friend who has been supporting the Chief Minister all along, just because the Chief Minister had given an opinion contrary to that of his, had to speak such hard words about the Chief Minister. I do not see any other person

than the Congress President, Sri S. Channiah, who has sacrificed so much. He has the interest of the country at heart. He has the welfare of Mysore and the interest of the people of Mysore at heart; he has been elected to the exalted place of the President of the Mysore Pradesh Congress; such a person did not mind saying that he will stand for the United Karnataka. He said that in the larger interests of the State, the larger interests of Mysore, there should be only one Karnataka. He is a trained Congressman and a trained leader, a seasoned politician; he has followed the guidance given by the Leaders of India.

Sri D. DEVARAJ URS.—Have we to follow the Leaders blindly?

*Sri M. PALANIYAPPAN.—The Congress President in his statement the other day has requested the people of Mysore to follow the Leaders of the Nation in whom the people of the country have faith, confidence and full belief. Sir, the Leader of this House, Sri K. Hanumanthaiya, has spoken as Sri Hanumanthaiya and even here at this House he has failed to give a lead as the Leader of this House. I do not know what had prompted him to say that he is giving his opinion as Hanumanthaiya. He should have taken a little more grip over his friends and he should have spoken as the Leader of this House. In this respect, in my opinion, I feel that he has been too liberal. He should have made his opinion clear before the Fazl Ali Commission that his opinion is for Karnataka. Instead of speaking on many platforms, he should have said it like that, he should have mobilised the forces for Karnataka and he should have then expressed that the majority opinion is either for Karnataka or for retention of Mysore before the Commission. The Commission has been constituted by the Government of India and it went round all over the country with the definite purpose of knowing the opinion of the people. It was not fair on the part of the Chief Minister to have given his personal opinion. He should have expressed the opinion of this House or the Cabinet. There he was too liberal to his Ministers also. That is the reason why he has been made the target of attack to-day by some of the Members of the House. If he has forced that opinion on others, he would have been praised today. He would have been applauded for his actions. But that apart, I must congratulate the Chief Minister at least at this stage he has risen to the occasion and said that he was for Karnataka. I need not add to what he has said in his opening speech when he introduced the S. R. C. Report in this House that the adjoining districts that would be joined to Mysore should join Mysore and form one Karnataka. Sir, here, the action taken by the Chief Minister requires to be appreciated. Any man with farsight would say that Karnataka should be formed. He should have said it several months ago. Today, the Commission has given its opinion that Karnataka should be formed. Sir, if Sri Hanumanthaiya has said even today that there should be one Karnataka, it is not an ordinary thing. I should say that he has said it at his own personal sacrifice. I know, Sir, there are some of my friends who were telling him that if he supported the move for the formation of Karnataka, he has to lose his position as Chief Minister of the State. He did not care for that advice. Apart from the question of losing his own leadership, he said he would fight for Karnataka. That is the sacrifice he has now made You know, Sir, all my brothers who are sitting here are good patriots. They have all fought for the freedom of the country. They have sacrificed and today they have been elected by the people of the State to represent them in this august House. They are filled with patriotism. They have the country's interest at heart. It is not enough if we speak of Mysore alone. If we say that Karnataka should be formed with Mysore, some of my friends say that such persons are traitors to Mysore. It is not so. If the people who have sacrificed for the cause of the country, if they cannot tolerate their brethren coming into their fold, if they cannot tolerate other leaders coming and joining us, and if they cannot bear

(SRI M. PALANIYAPPAN.)

the idea that our neighbours would join us to form one country, can we call that patriotism? If they are really patriots, it is but necessary that we should allow areas added on to Mysore as far as possible. We have sent money; we have sent clothes; we have sent foodgrains to those people who are affected by floods in the northern country, who have been afflicted by famine in other countries. We have gone to the rescue of refugees in other places. Why should we feel hesitant when we think of taking a few more districts which are supposed to be deficit areas? If we could afford to give our help, if we could afford to give our sympathy to other parts of the country where poverty or some other suffering is there, why should we not undertake this kind of little sacrifice for the sake of our own brethren who want to join us? Is it fair, I ask my friends who say that they want Mysore to remain as Mysore. After all, a little sacrifice may not make the people of Mysore poor; it is not as if all their resources will be taken away or transferred to others. My friend Sri Mudalagiri Gowda said that in order to develop neighbouring areas, they need many things. Of course, in order to do some good to our neighbour, we have to suffer a little. Even during war time, we have had the experience of rationing. Though one could eat more than eight ounces, we ate seven ounces or six ounces. We had undergone that ordeal because we wanted equal distribution of foodgrains to all the people. We speak of socialistic pattern of society; we speak of the socialistic pattern of our country in which all people should live equally and all people should think alike. But is this the feeling that responsible men like us should have that the neighbouring State should not join us? Sir, those who argue that outside people should not join us will be doing the greatest injustice possible to the progress of the country. Even Fazl Ali Commission have said that other Districts which join us are full of mineral wealth and if those parts are fully developed, then greater benefit will accrue to Karnataka State. Sir, I need not go deep into it except to refer to a few other points to which my other friends have referred.

One of my Hon'ble friends said that if Mahatma Gandhi would have been alive, he would not have allowed this kind of thing to continue, namely, the merging of Mysore with Karnataka. Sir, if he had been a true follower of Mahatma Gandhi, he would have followed him *in toto*, not that he should quote Mahatma Gandhi wherever it is convenient for him and wherever it suits him. He should quote Mahatma Gandhi at other places as well. This is not the occasion when we should spoil the great name of Mahatma Gandhi. If Mahatma Gandhi had said that Mysore should be retained as Mysore, then Mahatma Gandhi would have also said: "Follow the leader." That also should be followed. If my friend Sri Mudalagiri Gowda, after making him the Leader of the House, does not follow his ideals and differs from him at every stage, then he is also not a true follower of Mahatma Gandhi. The Leader of this House has got great foresight and vigilance. Bangalore is a big City where there is a big beautiful Vidhana Soudha where more than 200 representetives of Karnataka could be accommodated. I hope there is enough space in the newly constructed Vidhana Soudha so that Bangalore may become the seat of Government of this great State which is to come into being.

Sir, I appeal to every one of the Members here to give their supporting hand to the Leader of the House in welcoming Akhanda Karnataka.

MR. SPEAKER.—The House will now rise and meet at 3-30 p.m.

The House adjourned for Lunch at Three of the Clock and reassembled at Thirty Minutes past Three of the Clock.

[MR. SPEAKER in the Chair.]

ಶ್ರೀ ಬಿ. ಟಿ. ಕೆಂಪರಾಜ್ (ಬೆಂಗಳೂರು ದಕ್ಷಿಣ–ಅನುಸೂಚಿತ ಜಾತಿಗಳು).—ಸ್ವಾಮಿ, ಈ ಸಭೆಯು ಮುಂದೆ ಮೂರು ದಿನಗಳಿಂದ ನಡೆದ ಚರ್ಚೆಯನ್ನು ಬಹಳ ಎಚ್ಚರಿಕೆಯಿಂದ ಕೇಳುತ್ತಿದ್ದೇನೆ. ಈ ರಾಜ್ಯ

ಗಳ ಪುನರ್ವಿಂಗಡಣೆಯ ವಿಚಾರ ಬಹಳ ಪ್ರಾಮುಖ್ಯವಾದ ಘಟ್ಟವನ್ನು ಸೇರಿದೆ. ಈ ವರದಿಯನ್ನು ವಿವೇಚಿಸುವಾಗ, ಮುಖ್ಯವಾಗಿ ಎರಡು ಅಭಿಪ್ರಾಯಗಳನ್ನು ನಾವು ಮನಸ್ಸಿನಲ್ಲಿಟ್ಟುಕೊಳ್ಳಬೇಕಾಗುತ್ತದೆ. ಒಂದು, ಮೈಸೂರಿನ ವಿಚಾರ; ಎರಡು, ಅಖಿಲ ಭಾರತದ ವಿಚಾರ. ಈಗಾಗಲೇ ಮೈಸೂರು ಹೀಗೆಯೇ ಇರಬೇಕು, ಮೈಸೂರಿನ ವೈಶಿಷ್ಟ್ಯ ಹೋಗಬಾರದು, ಮೈಸೂರು ತನ್ನ ಅಸ್ತಿತ್ವವನ್ನು ಕಳೆದುಕೊಳ್ಳಬಾರದು ಎನ್ನುವ ಅನೇಕ ವಾದಗಳನ್ನು ಸಭೆಯ ಮುಂದಿಟ್ಟಿದ್ದಾರೆ. ಆ ರೀತಿಯ ಅಭಿಪ್ರಾಯಗಳನ್ನೂ ಹಾಗೂ ನಮ್ಮ ಕ್ಷೇತ್ರದ ಜನರ ಅಭಿಪ್ರಾಯ ಇದೇ ಮುಖದಲ್ಲಿವೆಯೇ ಎಂಬುದನ್ನೂ ಚೆನ್ನಾಗಿ ಯೋಚನೆ ಮಾಡಿದ್ದೇನೆ. ಈ ಎರಡು ಸಮಸ್ಯೆಗಳೂ ನಮ್ಮ ಮುಂದಿರಬೇಕು. ಮೈಸೂರಿನ ಸಮಸ್ಯೆ ಮತ್ತು ಭಾರತದ ಸಮಸ್ಯೆ—ಇವೆರಡನ್ನೂ ಒಂದಕ್ಕೊಂದನ್ನು ತುಲನಮಾಡಿದರೆ, ಭಾರತದ ಸಮಸ್ಯೆಯಲ್ಲಿ ಮೈಸೂರಿನ ಸಮಸ್ಯೆ ಅಡಕವಾಗಿದೆ, ಭಾರತದಲ್ಲಿ ಬಹುತೇಕ ಅಭಿಪ್ರಾಯವೇನಿದೆಯೋ ಅದಕ್ಕೆ ಮನ್ನಣೆಕೊಡಬೇಕೆಂಬ ಉದ್ದೇಶದಿಂದ ಕೇಂದ್ರ ಸರ್ಕಾರದವರು ಈ ಸಮಿತಿಯನ್ನು ಏರ್ಪಡಿಸಿದರು. ಈ ಸಮಿತಿ ತನಗೆ ದೊರೆತ ಮತ್ತು ಅನೇಕ ಕಡೆಗಳಲ್ಲಿ ಲಭಿಸಿದ ಅಂಕಿ ಅಂಶಗಳನ್ನು ಶೇಖರಿಸಿ ಈ ವರದಿಯನ್ನು ತಯಾರಿಸಿ ನಮ್ಮ ಮುಂದಿಟ್ಟಿದೆ. ನಮ್ಮ ಅನೇಕ ಸ್ನೇಹಿತರು, ಮೈಸೂರಿನ ವೈಶಿಷ್ಟ್ಯವನ್ನು ಉಳಿಸಿಕೊಳ್ಳಬೇಕಾದರೆ ಮೈಸೂರಿನ ವೈಶಿಷ್ಟ್ಯ ಅಳಿಯದಂತೆ ಇರಬೇಕಾದರೆ ಎಷ್ಟುಮಟ್ಟಿನ ತ್ಯಾಗಕ್ಕಾದರೂ ಸಿದ್ಧವಾಗಿದ್ದೇವೆ ಎನ್ನುವ ಮಟ್ಟಿಗೆ ಹೋಗಿದ್ದಾರೆ. ಈ ಒಂದು ಭಾವನೆಯನ್ನು ನಾವು ಬಹಳ ದೀರ್ಘವಾಗಿ ಯೋಚಿಸುವುದಾದರೆ ಇಂಥ ಕಷ್ಟನಷ್ಟಗಳು ಅನೇಕವಾಗಿ ನಮ್ಮ ಮುಂದೆ ನಡೆದುಹೋದುವು. ಜಾತೀಯ ಭಾವನೆಯ ಫಲವಾಗಿ ಪಾಕಿಸ್ತಾನ, ಹಿಂದೂಸ್ತಾನ ಎನ್ನತಕ್ಕ ಭೇದಭಾವನೆಗಳು ಹುಟ್ಟಿ ಅದರಿಂದ ನಿರಾಶ್ರಿತರ ಪ್ರಶ್ನೆ ಉದ್ಭವಿಸಿತು. ಆಗ ಮಹಾತ್ಮಾ ಗಾಂಧಿಯವರು, ಆ ಸಮಸ್ಯೆಯನ್ನು ಕೊನೆಗಾಣಿಸಲು ಹೋಗಿ ತಮ್ಮ ಪ್ರಾಣವನ್ನೇ ಅರ್ಪಿಸಿದರು. ಅಂಥ ಅಗಾಧವಾದ ಪ್ರಶ್ನೆಯನ್ನೂ ಧೈರ್ಯಸ್ಥೈರ್ಯಗಳಿಂದ ಎದುರಿಸಿದ್ದೇವೆ. ಈ ದಿವಸ ನಮ್ಮ ಮುಂದೆ ಇರುವ ಸಮಸ್ಯೆ ಅಷ್ಟು ಅತ್ಯುಗ್ರವಾದ ಅಥವಾ ಭಯಾನಕವಾದ ಪ್ರಶ್ನೆಯಲ್ಲವೆಂದು ನನ್ನ ಮನಸ್ಸಿಗೆ ತೋರುತ್ತದೆ. ಈ ವರದಿಯಲ್ಲಿ ಮುಖ್ಯವಾಗಿ ಎರಡು ಕೋಮುಗಳ ಹೆಸರುಗಳನ್ನು ನಮೂದಿಸಿದ್ದಾರೆ. ಈ ರೀತಿ ಮಾಡಬಾರದಾಗಿತ್ತು. ಇದಕ್ಕೆ ನಾವು ವಿಷಾದ ಪಡಬೇಕಾಗಿದೆ. ಆದರೂ ಈ ಜಾತಿಗಳ ಹೆಸರನ್ನು ಹೇಳಿದ್ದರೂ ಇದಕ್ಕೆ ಸಂಬಂಧಪಟ್ಟ ವ್ಯಕ್ತಿಗಳೂ ಅಷ್ಟು ತೀವ್ರತೆಯಿಂದ ಈ ವರದಿಯನ್ನು ಪರಿಶೀಲಿಸಬೇಕಾಗಿಲ್ಲವೆಂದು ನನ್ನ ಪ್ರಾರ್ಥನೆ. ಏಕೆಂದರೆ, ಇಡೀ ಭಾರತದ ಭೂಪಟವೇ ಬದಲಾವಣೆಯಾಗುತ್ತಿರುವಾಗ, ದೇಶದನಾಯಕರು ಪದೇ ಪದೇ ನಮಗೆ ಅನೇಕ ರೀತಿಯ ಸೂಚನೆಗಳನ್ನು ಕೊಡುತ್ತಿರುವಾಗ, ಇಡೀ ಭಾರತದ ಭದ್ರತೆ, ಐಕ್ಯತೆ, ವೈಶಿಷ್ಟ್ಯಗಳನ್ನು ಉಳಿಸಿಕೊಳ್ಳುವುದು ಪ್ರತಿಯೊಬ್ಬ, ಭಾರತೀಯ ಪ್ರಜೆಯ ಕರ್ತವ್ಯವೆಂದು ಸಾರಿಸಾರಿ ಹೇಳುತ್ತಿರುವಾಗ, ಮೈಸೂರಿನ ಬಗ್ಗೆಯಾಗಲಿ ಇತರ ಪ್ರಾಂತಗಳ ಬಗ್ಗೆಯಾಗಲಿ ಕೂಲಂಕಷವಾಗಿ ಯೋಚಿಸದೆ ನಾವು ತೀವ್ರವಾದ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರೆ, ಅದಕ್ಕೆ ನಾವೇ ಜವಾಬ್ದಾರರಾಗುತ್ತೇವೆ. ಇಂದು ನಾವು ಮಾಡುತ್ತಿರುವ ಕೆಲಸ ಅನೇಕ ತಲೆಮಾರಿನವರೆಗೆ ಇತಿಹಾಸದಲ್ಲಿ ಬರೆಯಲ್ಪಡುತ್ತದೆ. ಚರಿತ್ರಾರ್ಹವಾದ ಬದಲಾವಣೆಗಳಾಗುತ್ತಿವೆ. ಈ ಈ ಬದಲಾವಣೆಗಳಿಗೆ ತಕ್ಕಂತೆ ನಮ್ಮ ಮನಸ್ಸನ್ನು ಅಳವಡಿಸಿಕೊಳ್ಳಬೇಕಾದ ಕಾಲ ಸನ್ನಿಹಿತವಾಗಿದೆ. ಪ್ರಜೆಗಳೇ ನನ್ನ ದೇವರು ಎಂದು ಮಾನ್ಯ ಸದಸ್ಯರು ಕೆಲವರು ಸಭೆಯ ಮುಂದೆ ವ್ಯಕ್ತಪಡಿಸಿದ್ದಾರೆ. ಪ್ರಜೆಗಳೇ ದೇವರು ನಿಜ. ಇಂಥ ದೇವರಾದ ಪ್ರಜೆಗಳಿಗೆ ಪ್ರತಿನಿಧಿಗಳಾಗಿರುವ ನಾವು ಪೂಜಾರಿಗಳಂತೆ ವರ್ತಿಸಬೇಕಾದ ಕಾಲ ನಮ್ಮ ಮುಂದಿದೆ. ಪೂಜಾರಿ ಎಷ್ಟು ನಿಷ್ಠಾವಂತನಾಗಿರುತ್ತಾನೋ, ಅವನಲ್ಲಿ ಎಷ್ಟುಮಟ್ಟಿನ ಭಕ್ತಿ ಇರುತ್ತದೆಯೋ, ಎಷ್ಟುಮಟ್ಟಿಗೆ ತನ್ನ ಮನಸ್ಸಿನ ಹಿಡಿತವನ್ನು ತನ್ನಲ್ಲಿಟ್ಟುಕೊಂಡಿರುತ್ತಾನೋ, ಅಷ್ಟುಮಟ್ಟಿಗೆ ದೇವರನ್ನು ಮೆಚ್ಚಿಸಬಹುದು, ಒಲಿಸಿಕೊಳ್ಳಬಹುದು. ದೇವರನ್ನು ತಿದ್ದಿಕೊಳ್ಳುವುದೂ ಕಷ್ಟವಿಲ್ಲ. ಪ್ರಜೆಗಳೇ ದೇವರೆಂದು ಹೇಳುವಾಗ, ದೇವರು ಯಾವಾಗಲೂ ಭಕ್ತರಿಗೆ ಒಲಿಯತಕ್ಕ ವ್ಯಕ್ತಿ ಎಂಬುದನ್ನರಿಯಬೇಕು. ಅಂದಮೇಲೆ ಪ್ರಜೆಗಳು ಯಾವ ಒಂದು ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೋ ಅದನ್ನು ಸರಿಯಾಗಿ ತಿಳಿಯಬೇಕು. ಇಡೀ ಭಾರತದ ಭದ್ರತೆಯೇನಿದೆಯೋ ಅದು ಬಹುಶಃ ಅನೇಕವೇಳೆ ಸರಿಯಾದ ರೀತಿಯಲ್ಲಿ ಮನವರಿಕೆಯಾಗದೆ ಹೋಗಬಹುದು. ಅಂಥ ಪರಿಸ್ಥಿತಿಯಲ್ಲಿ, ಉದ್ರೇಕ, ಮನಃಕ್ಲೇಶ, ಅಹಿತ, ಅನಾಹುತ ಉಂಟಾಗಬಹುದು. ಆ ರೀತಿಯ ವಾತವರಣವನ್ನು ಹದಕ್ಕೆ ತರುವ ಜವಾಬ್ದಾರಿ ಈ ಮಾನ್ಯಸಭಾಸದಸ್ಯರ ಮೇಲಿದೆ, ಅಂದಮೇಲೆ ನಾನು ಹೇಳುವುದಿಷ್ಟೆ: ಎಲ್ಲಿಯವರೆಗೆ ಭಾರತದ ಒಗ್ಗಟ್ಟಿಗೆ ಚ್ಯುತಿ ಬರುವ ಪ್ರಸಂಗಗಳು ಉದ್ಭವಿಸುವುದಿಲ್ಲವೋ ಅಲ್ಲಿಯವರೆಗೆ ನಾವು ನಮ್ಮ ಕರ್ತವ್ಯ ಮಾಡಿದ್ದೇವೆ ಎನ್ನುವ ಸಮಾಧಾನವನ್ನು ಹೊಂದಬಹುದು.

ಸ್ವತಂತ್ರ ಭಾರತದ ನಿರ್ಮಾಣದಲ್ಲಿ ಪ್ರತಿ ಘಟ್ಟದಲ್ಲಿ ಇದೇರೀತಿ ಒಂದಲ್ಲ ಒಂದು ರೂಪದಲ್ಲಿ ಉದ್ರೇಕ ಪರಿಸ್ಥಿತಿ ತಲೆದೋರಿರುವುದನ್ನು ಕಂಡಿದ್ದೇವೆ. ಅಂದಮೇಲೆ ನಮ್ಮ ಮೈಸೂರು ಸಂಸ್ಥಾನಕ್ಕೂ ಸಹ ಅದು ಬಂದಿದೆ. ಈಗ ನಮಗೆಲ್ಲಾ ಕೇಳಿ ಬರುತ್ತಿರುವಂತೆ, ಆಂಧ್ರದವರು ವಿಶಾಲಾಂಧ್ರ ಬೇಕೆಂದು ಕೇಳುತ್ತಿದ್ದಾರೆ; ದಕ್ಷಿಣದಲ್ಲಿ ಕೇರಳವು ತಾನಾಗಿಯೇ ಉತ್ಪನ್ನವಾಗುವುದರಲ್ಲಿದೆ. ಅತ್ತ ಮಹರಾಷ್ಟ್ರದವರು ಮಹಾರಾಷ್ಟ್ರ ಬೇಕೆಂದು ಕೇಳುತ್ತಿದ್ದಾರೆ. ಈ ಪ್ರಕಾರ ನಾನಾ ಪ್ರಾಂತ್ಯಗಳು ಆದಮೇಲೆ ಉಳಿದ ಪ್ರಾಂತ್ಯಗಳ ಬಗ್ಗೆ ಏನು ಮಾಡಬೇಕೆಂದು ಜಿಜ್ಞಾಸೆ ತಲೆದೋರಿದೆ. ಈ ವಿಷಯದಲ್ಲಿ ಕೆಲವರು ಅದೇ ಬೇರೆ ಪ್ರಾಂತ್ಯವಾಗಲಿ, ಕೆಲವು ದಿವಸಗಳು ಬೇರೆ ಪ್ರಾಂತ್ಯವಾಗುಳಿದು, ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಮುಂದುವರಿದಮೇಲೆ ಮೈಸೂರಿನೊಡನೆ ಒಂದಾಗಬಹುದೆಂದು ಹೇಳುತ್ತಿದ್ದಾರೆ. ಒಂದು ವಿಧದಲ್ಲಿ ಈ ಸೂಚನೆ ಸಮಂಜಸವಾಗಿ ಕಂಡರೂ, ನಾವು ಇಡೀ ಭಾರತದ ದೃಷ್ಟಿಯನ್ನು ತೆಗೆದುಕೊಂಡಲ್ಲಿ ಸಾಧುವಾಗಿ ತೋರುವುದಿಲ್ಲ. ಅವು ಈಗಲೇ ನಮ್ಮೊಡನೆ ಐಕ್ಯವಾಗುವುದರಿಂದ ಯಾವ ಕಷ್ಟವೂ ಇರಲಾರದು. ಏಕೆಂದರೆ ಕರ್ನಾಟಕ ಮೈಸೂರಿನ ಪ್ರಶ್ನೆಯೇ ಅಷ್ಟು ಜಟಿಲವಾದ ಪ್ರಶ್ನೆಯೆಂದು ಭಾವಿಸುವುದಾದರೆ, ಇನ್ನು ರಾಜಾಸ್ಥಾನ, ವಿದರ್ಭ ಮತ್ತಿತರ ಪ್ರಾಂತ್ಯಗಳ—ಏಕೆಂದರೆ ಅವು ಕರ್ನಾಟಕಕ್ಕಿಂತಲೂ ಬಹಳ ಹಿಂದುಳಿದಿರುವ ಪ್ರಾಂತ್ಯಗಳು—ಅವುಗಳ ಗತಿಯೇನು?

ಈ ಸಂದರ್ಭದಲ್ಲಿ ಪಂಚವಾರ್ಷಿಕ ಯೋಜನೆಯ ವಿಚಾರವನ್ನು ಪ್ರಸ್ತಾಪಿಸಿ ಕೆಲವರು ವಾದಮಾಡಿದ್ದಾರೆ. ಮೈಸೂರು ಸಂಸ್ಥಾನಕ್ಕೆಂದೇ ಪ್ರತ್ಯೇಕವಾದ ಪಂಚವಾರ್ಷಿಕ ಯೋಜನೆಯಿಲ್ಲ. ಇಡೀ ಭಾರತಕ್ಕೆ

(ಶ್ರೀ ಬಿ. ಟಿ. ಕೆಂಪರಾಜ್.)

ಸಂಬಂಧಪಟ್ಟಹಾಗೆ ಒಂದು ಯೋಜನೆ ಮುಂದಿಟ್ಟು ಕೊಂಡಿರುವಾಗ, ಮೈಸೂರಿನ ವಿಷಯಕ್ಕೆ ಮಾತ್ರ ಅಷ್ಟು ಪ್ರಾಮುಖ್ಯತೆಯನ್ನು ಕೊಟ್ಟು ವಾದಿಸುವುದು ಸಮಂಜಸವಲ್ಲವೆಂದು ನನಗೆ ಭಾಸವಾಗುತ್ತದೆ.

ಆದ್ದರಿಂದ ನಮ್ಮ ಮುಂದಿರುವ ಈ ಪ್ರಶ್ನೆಯನ್ನು ನಾವು ಸ್ವಲ್ಪ ವಿಶಾಲಹೃದಯದಿಂದ ಪರಿಶೀಲಿಸುವುದು ಸಾಧುವಾದದ್ದು. ನಾನು ಈ ಮಾತನ್ನೇಕೆ ಹೇಳುತ್ತಿದ್ದೇನೆಂದರೆ ಈ ವಿಷಯ ನಮ್ಮಲ್ಲನೇಕರಿಗೆ ನೋವನ್ನುಂಟುಮಾಡುವಂತಹದು. ಮೈಸೂರು ತನ್ನ ಅಸ್ತಿತ್ವವನ್ನು ಕಳೆದುಕೊ ಡೀತೋ, ಇನ್ನು ಮೈಸೂರಿಲ್ಲವೋ ಎನ್ನುವ ಸಂಕಟ ಮೈಸೂರಿನವರಾದ ನಮ್ಮೆಲ್ಲರಿಗೂ ಉಂಟಾಗುತ್ತದೆ. ಯಾವಾಗಲೂ ಯಾವುದೇ ಒಂದು ಜನಾಂಗಕ್ಕೆ, ಒಂದು ಮನೆಗೆ, ಒಂದು ಸಂಸಾರಕ್ಕೆ ಅಥವಾ ಒಂದು ಊರಿಗೆ ನಾವು ಸೇರಿಕೊಂಡಿರುವಾಗ, ಆ ಇರುವಿಕೆಯನ್ನು ನಾವು ಬಿಟ್ಟು ಹೊರಬರಬೇಕಾದರೆ ನಮಗೆ ಸಂಕಟವಾಗದೆ ಇರತಕ್ಕದು ಅತಿಶಯವೇ ಸರಿ. ಸರ್ವೇಸಾಮಾನ್ಯವಾಗಿ ಒಬ್ಬ ವ್ಯಕ್ತಿ ತಾನಿದ್ದ ಮನೆಯನ್ನು ಬಿಡಬೇಕೆಂದರೆ, ತ ನಿದ್ದ ಊರನ್ನು ಬಿಡಬೇಕೆಂದರೆ, ತನ್ನ ಸಂಸಾರದಿಂದ ಹೊರ ಹೋಗಬೇಕೆಂದರೆ ಆತನಿಗೆ ಸಂಕಟವುಂಟಾಗಿಯೇ ಉಂಟಾಗುತ್ತದೆ. ಆದರೆ ಇಡೀ ಭಾರತದ ಆಡಳಿತವನ್ನು ನಡೆಸುತ್ತಿರುವ ನಮ್ಮ ದೇಶದ ನಾಯಕರುಗಳ ಮುಂದಿರುವ ಅಗಾಧ ಹಾಗೂ ಕಷ್ಟ ಸಮಸ್ಯೆಗಳನ್ನು ಯೋಚಿಸಿದಲ್ಲಿ ನಮ್ಮ ಕಷ್ಟ ಅವರ ಕಷ್ಟದ ಮುಂದಲ್ಲವೆಂದು ತಾನಾಗಿಯೇ ವೇದ್ಯವಾಗುತ್ತದೆ. ಅಂದಮೇಲೆ ಭಾರತದ ವೈಶಿಷ್ಟ್ಯವನ್ನು ಉಳಿಸಬೇಕು, ಭಾರತದ ಕೀರ್ತಿಯನ್ನು ಜಗತ್ತಿನಲ್ಲಿ ಬೆಳಗಬೇಕು, ಭಾರತದ ಶಕ್ತಿಯನ್ನು ಒಂದುಗೂಡಿಸಬೇಕೆಂದು ಕಂಕಣ ತೊಟ್ಟು ದುಡಿಯುತ್ತಿರುವ ವಯೋವೃದ್ಧ ಜ್ಞಾನವೃದ್ಧರಾದ ನಮ್ಮ ದೇಶದ ನಾಯಕರುಗಳ ಸೂಚನೆಗಳಿಗೆ ನಾವು ನಮ್ಮ ಮನಸ್ಸು ಕೊಡಬೇಕಾದದ್ದು ಅತ್ಯಗತ್ಯ. ಆದ ಕಾರಣ, ಉತ್ತರ ಪ್ರದೇಶದ ವಿಷಯವೇ ಆಗಲಿ, ಮತ್ಯಾವ ಪ್ರದೇಶಗಳ ವಿಷಯವೇ ಆಗಲಿ, ಪ್ರಾಂತ್ಯ ದೊಡ್ಡದಾಗಿರಲಿ ಅಥವಾ ಚಿಕ್ಕದಾಗಿರಲಿ, ಯಾವುದೂ ನಮ್ಮನ್ನು ಬಾಧಿಸಬಾರದು. ಅವುಗಳನ್ನೆಲ್ಲಾ ಯೋಚನೆ ಮಾಡಿಯೇ ನಮ್ಮ ದೇಶದ ನಾಯಕರು ತಮ್ಮ ಸೂಚನೆಯನ್ನು ಕೊಟ್ಟಿದ್ದಾರೆಂದು ನಾವು ತಿಳಿಯಬೇಕು. ಆದ್ದರಿಂದ ನಾವುಗಳು ಈ ಸಂದರ್ಭದಲ್ಲಿ ಸಂಕುಚಿತ ಮನೋಭಾವನೆಯನ್ನು ಬಿಟ್ಟು ವಿಕಸಿತ ಮನಸ್ಸಿನಿಂದ ವಿಶಾಲ ಹೃದಯದಿಂದ ಈ ವಿಷಯವನ್ನು ಪರಿಶೀಲನೆ ಮಾಡಬೇಕಾದದ್ದು ನಮ್ಮ ಮೇಲೆ ಬಿದ್ದಿರುವ ಜವಾಬ್ದಾರಿಯಾಗಿದೆ. ಲೋಕಮಾನ್ಯ ತಿಲಕ್‌ರವರು ಒಂದು ಸಂದರ್ಭದಲ್ಲಿ ಮಾತನಾಡುತ್ತಾ, ನಾವು ನಮ್ಮ ಹೃದಯವನ್ನು ಒಂದು ಹಿಡಿಯಷ್ಟಾದರೂ ಮಾಡಿಕೊಳ್ಳಬಹುದು ಅಥವಾ ಇಡೀ ಜಗತ್ತನ್ನೇ ಅವರಿಸಿಕೊಳ್ಳುವಷ್ಟು ವಿಶಾಲಗೊಳಿಸಿಕೊಳ್ಳಬಹುದು ಎಂದು ಹೇಳಿದ್ದಾರೆ. ಅಂದರೆ, ಹೃದಯದ ವೈಶಾಲ್ಯತೆಯನ್ನು ಕಂಡುಹಿಡಿದವರಿಲ್ಲ. ಮನಸ್ಸು ಹಾಕುವ ಮಿತಿಯನ್ನನುಸರಿಸಿದೆ ಅದು. ಮನಸ್ಸು ಯಾವರೀತಿ ಶರೀರವನ್ನೇ ಆವರಿಸುತ್ತದೆಂಬುದನ್ನು ಹಿಂದೂ ಶಾಸ್ತ್ರದಲ್ಲಿ ಹೇಳಿದ್ದಾರೆ. ಅದನ್ನು ನಾವು ಮನಗಂಡು ನಾವುಗಳು ಮನಸ್ಸಿಟ್ಟು, ಇರತಕ್ಕ ಪರಿಸ್ಥಿತಿಯನ್ನು ತಾಳ್ಮೆಯಿಂದ ಎದುರಿಸಿ ಉದ್ರೇಕಗೊಂಡಿರತಕ್ಕ ಜನರನ್ನು ಸಮಾಧಾನಗೊಳಿಸತಕ್ಕದ್ದು ನಮ್ಮ ಮೇಲೆ ಬಿದ್ದಿರತಕ್ಕ ಜವಾಬ್ದಾರಿ. ಆ ಜವಾಬ್ದಾರಿಯನ್ನು ನಿರ್ವಹಿಸತಕ್ಕ ಕಾಲ ಸನ್ನಿಹಿತವಾಗಿದೆಯೆಂದು ನಾನು ಹೇಳುತ್ತೇನೆ.

ಈ ವರದಿಯಲ್ಲಿ ಲಿಂಗಾಯಿತರು, ಒಕ್ಕಲಿಗರು ಎಂದು ಎರಡು ಮತದವರ ವಿಷಯವನ್ನು ಪ್ರಾಸ್ತಾಪಿಸಿದ್ದಾರೆ. ಖಂಡಿತವಾಗಿಯೂ ಆ ವಿಷಯವನ್ನು ಅವರು ಪ್ರಸ್ತಾಪಿಸಬಾರದಾಗಿತ್ತೆಂದು ನನಗನ್ನಿಸುತ್ತದೆ. ಒಕ್ಕಲಿಗರು ಶೇಕಡ 29ರಷ್ಟಿದ್ದಾರೆ. ಲಿಂಗಾಯಿತರು ಶೇಕಡ ಇಷ್ಟು ಇದ್ದಾರೆ ಎಂದು ಅಂಕಿ ಅಂಶಗಳಿಂದ ವರ್ಣಿಸಲು ಪ್ರಯತ್ನಪಡದಿದ್ದ ಪಕ್ಷದಲ್ಲಿ ಈ ವರದಿಯ ಬಗ್ಗೆ ಅಷ್ಟು ತೀವ್ರವಾದ ಚರ್ಚೆ ಉದ್ಭವಿಸುತ್ತಿರಲಿಲ್ಲವೆಂದು ನಾನು ಭಾವಿಸಿಕೊಂಡಿದ್ದೇನೆ. ಈಗಲಾದರೂ ನಾನು ಎಲ್ಲರಲ್ಲೂ ಅರಿಕೆಮಾಡಿಕೊಳ್ಳುತ್ತೇನೆ, ಈ ವರದಿಯನ್ನು ಜಾತ್ಯತೀತ ದೃಷ್ಟಿಯಿಂದ ನೋಡಿರಿ. ನಾವು ಚುನಾವಣೆಗೆ ನಿಂತಾಗ ಜಾತ್ಯತೀತವಾದ ಪ್ರಗತಿಪರವಾದ ರಾಷ್ಟ್ರವನ್ನು ಕಟ್ಟುತ್ತೇವೆಂದು ಹೇಳಿ ಕಾಂಗ್ರೆಸ್ಸಿಗೆ ಓಟು ಕೊಡಿಯೆಂದು ಕೇಳಿಕೊಂಡು ಯಾವರೀತಿ ಸ್ಥಾನವನ್ನು ಗಳಿಸಿದೆವೆಂಬುದನ್ನು ಅರಿತು, ಅದೇ ದೃಷ್ಟಿಯಿಂದ ಈ ವರದಿಯನ್ನು ಪರಿಶೀಲಿಸೋಣ. ಅಗ್ಗೆ ಯಾವ ಜನರು ನಮ್ಮ ತತ್ವಗಳಲ್ಲಿ ನಂಬಿಕೆಯಿಟ್ಟು ನಮ್ಮನ್ನು ಚುನಾವಣೆ ಮಾಡಿ ಕಳುಹಿಸಿದರೋ ಅವರೇ ಈ ನಮ್ಮ ಕಾರ್ಯ ನೀತಿಯನ್ನು, ನಮ್ಮ ಅರಿಕೆಯನ್ನು ಮೆಚ್ಚಿಯಾರು. ಅಲ್ಲಿಗೆ ಅವರು ನಮ್ಮಮೇಲೆ ಇಟ್ಟಿರತಕ್ಕ ನಂಬಿಕೆ ಖಂಡಿತ ಕಡಮೆಯಾಗಲಾರದು. ಆದ್ದರಿಂದ ಉದ್ರೇಕವುಂಟಾಗಿರತಕ್ಕ ಈ ಪರಿಸ್ಥಿತಿಯನ್ನು ಸುಧಾರಿಸಲು ನಮಗಿಂದು ಬೇಕಾದದ್ದು ಧೈರ್ಯ, ಸ್ಥೈರ್ಯ ಮತ್ತು ದೇಶಭಕ್ತಿ. ದೇಶದ ಮುಖಂಡರು ಯಾವ ಸೂಚನೆಯನ್ನು ನಮ್ಮ ಮುಂದಿಟ್ಟಿದ್ದಾರೋ ಆ ಸೂಚನೆಗಳನ್ನು ನಾವು ಸರಿಯಾದ ರೀತಿಯಲ್ಲಿ ಜನರ ಮುಂದಿಟ್ಟು ಅವರ ಮನಸ್ಸನ್ನು ನಮ್ಮ ದೃಷ್ಟಿಕೋನದ ಕಡೆಗೆ ತಿರುಗಿಸಿಕೊಳ್ಳತಕ್ಕದ್ದು ನಮ್ಮಗಳ ಜವಾಬ್ದಾರಿಯೆಂದು ನಾನು ಭಾವಿಸಿದ್ದೇನೆ.

ಈ ವರದಿಯನ್ನು ತಯಾರಿಸುವ ಸಂದರ್ಭದಲ್ಲಿ ಅವರು ಭಾಷೆಯನ್ನು ಪ್ರಾಂತ್ಯಗಳ ಪುನರ್ವಿಂಗಡಣೆಗೆ ಆಧಾರವಾಗಿಟ್ಟುಕೊಳ್ಳಬಾರದು ಎಂದು ಒಂದು ಕಡೆ ಹೇಳಿದ್ದಾರೆ. ಆದರೆ, ಕರ್ನಾಟಕಪ್ರಾಂತ್ಯ ನಿರ್ಮಾಣವಾಗಬೇಕೆನ್ನುವ ಸಂದರ್ಭದಲ್ಲಿ, ಮೈಸೂರು, "ಕನ್ನಡ ರಾಜ್ಯ" ಎನ್ನುವ ರೀತಿಯಲ್ಲಿ ತೀರ್ಮಾನ ತಂದುಕೊಂಡಿದ್ದಾರೆ. ಈ ರೀತಿ ಹೇಳಿದ್ದು ಅಷ್ಟು ಸಮಂಜಸವಾದದ್ದಲ್ಲವೆಂದು ನಾನು ಭಾವಿಸುತ್ತೇನೆ. ಏಕೆಂದರೆ, ಮೈಸೂರು ಸಂಸ್ಥಾನದಲ್ಲಿ ಕನ್ನಡಿಗರಂತೆಯೇ ತೆಲಗರೂ ಇದ್ದಾರೆ, ತಮಿಳರೂ ಇದ್ದಾರೆ. ಅಂದಮೇಲೆ ಆ ಜನರ ಹಿತವನ್ನೂ ಅವರು ಪರಿಗಣನೆಗೆ ತೆಗೆದುಕೊಂಡು ಈ ವಾಕ್ಯವನ್ನು ಹೇಳಬಾರದಾಗಿತ್ತು. ಅವರುಗಳೂ ಸಹ ಈ ರಾಜ್ಯದಲ್ಲಿ ಸೇರಿರುವರೆಂದಮೇಲೆ ಅವರಿಗೆ ಯಾವ ರೀತಿಯ ರಕ್ಷಣೆಯನ್ನು ಕೊಡಬೇಕೆಂಬುದನ್ನು ಇಲ್ಲಿ ನಮೂದಿಸಿದ್ದರೆ ಬಹಳ ಚೆನ್ನಾಗಿರುತ್ತಿತ್ತು.

ಒಟ್ಟಿನಲ್ಲಿ, ಒಂದು ಹೊಸರಾಜ್ಯವನ್ನು ನಿರ್ಮಿಸಲು ಯಾವ ಒಂದು ವರದಿಯನ್ನು ನಮ್ಮ ಮುಂದಿಟ್ಟಿದ್ದಾರೋ, ಅದರ ಬಗ್ಗೆ ತಾಳ್ಮೆ, ಸಹನೆ ಮತ್ತು ವಿಶಾಲದೃಷ್ಟಿ—ಈ ಮೂರು ಗುಣಗಳನ್ನು ತಳೆದು ಪರಿಶೀಲನೆ ಮಾಡಬೇಕು. ಈ ಹಾದಿಯಲ್ಲಿ ನಮಗೆ ಏನೇ ಕಷ್ಟಗಳು, ಎಡರುತೊಡರುಗಳು ಬರಲಿ ಅವನ್ನು ಸಮಾಧಾನ ಚಿತ್ತದಿಂದ ಎದುರಿಸಿ, ಕಾರ್ಯಸಾಧನೆಯಲ್ಲಿ ನಮ್ಮ ಕೈಲಾದ ಸೇವೆಯನ್ನು, ನೆರವನ್ನು ನೀಡೋಣ. ಒಟ್ಟಿನಲ್ಲಿ ಈ ನಿರೂಪಣೆಯನ್ನು ಕಾರ್ಯರೂಪಕ್ಕೆ ತರುವುದರಲ್ಲಿ ಬೆಂಬಲಿಗರಾಗುವುದು ನಮ್ಮ ಜವಾಬ್ದಾರಿಯೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

*ಶ್ರೀ ಜಿ. ದುಗ್ಗಪ್ಪ (ಹೊಳಲ್ಕೆರೆ—ಅನುಸೂಚಿತ ಜಾತಿಗಳು).—ಅಧ್ಯಕ್ಷ ಮಹಾಶಯರೇ, ರಾಜ್ಯಗಳ ಪುನರ್ವಿಂಗಡಣೆಯ ಕಮಿಷನ್ನಿನ ವರದಿಯ ಮೇಲೆ ಎರಡು ಮಾತುಗಳಲ್ಲಿ ನನ್ನ ಅಭಿಪ್ರಾಯಗಳನ್ನು ಹೇಳಲು ತಮ್ಮ ಅಪ್ಪಣೆಯನ್ನು ಬೇಡುತ್ತೇನೆ. ಮಾನ್ಯ ಸದಸ್ಯರಾದ ಶ್ರೀ ಮ್ಯಾಸ್ಕರನ್‌ಹ್ಯಾಸ್‌ರವರು ಹೇಳಿದ ಹಾಗೆ, ಈ ಕಮಿಷನ್ನಿನವರು ತಮಗೆ ವಹಿಸಿದ್ದಂಥ ದೊಡ್ಡ ಜವಾಬ್ದಾರಿಯನ್ನು ಬಹಳ ವಿಚಕ್ಷಣೆಯಿಂದ ನಿರ್ವಹಿಸಿದ್ದಾರೆ. ಅದರಲ್ಲಿ ಭಿನ್ನಾಭಿಪ್ರಾಯವಿಲ್ಲ.

ಆದರೆ, ಮೊದಲನೆಯದಾಗಿ, ನಾನು ಈ ವರದಿಯನ್ನು ಸ್ವಾಗತಿಸುತ್ತಾ ಬಹು ವಿಷಾದದಿಂದ ಒಂದು ಮಾತನ್ನು ಹೇಳಬೇಕಾಗಿದೆ. ಬಳ್ಳಾರಿಯ ವಿಚಾರದಲ್ಲಿ ಈ ವರದಿಕಾರರು ಎಸಗಿರತಕ್ಕ ಅನ್ಯಾಯವನ್ನು ನಮ್ಮ ಮಾನ್ಯ ಮುಖ್ಯ ಮಂತ್ರಿಗಳಿಗಿಂತ ಹೆಚ್ಚಿಗೆ ಖಂಡಿಸಲು ನನಗೆ ಸಾಧ್ಯವಿಲ್ಲ. ಅವರು ಮಾಡಿರತಕ್ಕದು ತೀರ ಅನ್ಯಾಯವೆಂದು ಮಾತ್ರ ಹೇಳಿದರೆ ಸಾಕು. ಏಕೆಂದರೆ, ಪಾರ್ಲಿಮೆಂಟಿನವರು ಒಮ್ಮೆ ಸುದೀರ್ಘವಾಗಿ ಪರ್ಯಾಲೋಚನೆ ಮಾಡಿ ತೆಗೆದುಕೊಂಡಿರುವ ತೀರ್ಮಾನದ ಬಗ್ಗೆ ಮತ್ತೆ ಪುನಃ ಅಭಿಪ್ರಾಯವನ್ನು ಕೊಡುವುದಕ್ಕೆ ಪ್ರಯತ್ನಿಸಿದ್ದೇ ಸಾಧುವಾದದ್ದಲ್ಲ. ಆದ್ದರಿಂದ ಈ ಅಂಶವನ್ನು ಪುನಃ ಪರ್ಯಾಲೋಚನೆಗೆ ತೆಗೆದುಕೊಳ್ಳದೆ, ಪಾರ್ಲಿಮೆಂಟಿನವರು ನಮ್ಮ ಮೊದಲಿನ ಅಭಿಪ್ರಾಯವನ್ನೇ ಎತ್ತಿ ಹಿಡಿದು ಮೈಸೂರು ದೇಶದಲ್ಲಿ ಈಗಿರತಕ್ಕ ಬಳ್ಳಾರಿಯ ಮೂರು ತಾಲ್ಲೂಕುಗಳನ್ನು ಇಲ್ಲಿಯೇ ಇರಗೊಡುವುದು ಅವಶ್ಯಕವೆಂದು ಹೇಳಬಯಸುತ್ತೇನೆ.

ಇನ್ನು ಈ ವರದಿಯ ಬಗ್ಗೆ ಎರಡು ಮಾತುಗಳನ್ನು ಹೇಳಬಯಸುತ್ತೇನೆ. ಸ್ವಾಮಿ, ಚರ್ಚೆಯ ಕಾಲದಲ್ಲಿ ಅನೇಕ ಸದಸ್ಯರು ಮಾತನಾಡಿರುವುದನ್ನು ನೋಡಿದರೆ ಎರಡು ಅಭಿಪ್ರಾಯಗಳಿರುವುದು ಕಂಡು ಬರುತ್ತಿದೆ. ಎರಡು ಪ್ರತ್ಯೇಕ ಗುಂಪುಗಳಿವೆ. ಒಂದು ಕರ್ನಾಟಕವಾಗಬೇಕೇ ಅಥವಾ ಎರಡು ಕರ್ನಾಟಕವಾಗಬೇಕೇ ಎನ್ನುವ ಬಗ್ಗೆ ಅಕಸ್ಮಾತ್ತಾಗಿ, ವಿಧಿವಶಾತ್ ಈ ರಿಪೋರ್ಟಿನಲ್ಲಿ ಹೇಳಿರತಕ್ಕ ಎರಡು ಕೋಮುಗಳವರೂ ಒಂದೊಂದು ಅಭಿಪ್ರಾಯಕ್ಕೆ ತಗಲಿಕೊಂಡು ಚರ್ಚೆ ನಡೆಸುತ್ತಿರುವ ಹಾಗೆ ಕಾಣುತ್ತದೆ. ಇದು ನಿಜವಾಗಿಯೂ ನಮ್ಮ ದುರದೃಷ್ಟ.

ಆದರೆ, ಈ ವರದಿಯನ್ನು ಚರ್ಚೆ ಮಾಡುವಾಗ ನಾವು ಬೇರೆ ಪ್ರಾಂತ್ಯಗಳ ಕಡೆಗೂ ನಮ್ಮ ಗಮನವನ್ನು ಸ್ವಲ್ಪಮಟ್ಟಿಗೆ ಹರಿಸುವುದಾದರೆ, ಯಾವ ಪ್ರಾಂತ್ಯಗಳನ್ನೇ ನೋಡಲಿ, ಉದಾಹರಣೆಗೆ ಆಂಧ್ರವನ್ನೇ ಆಗಲಿ ಮಹಾರಾಷ್ಟ್ರವನ್ನೇ ಆಗಲಿ, ಅವರುಗಳು ತಮ್ಮ ತಮ್ಮ ಪ್ರಾಂತ್ಯಗಳು ವಿಶಾಲವಾಗಲೆಂದು ಕೂಗೆಬ್ಬಿಸಿದ್ದಾರೆ. ಬಹು ದೊಡ್ಡದಾಗಿರತಕ್ಕ ಉತ್ತರ ಪ್ರದೇಶವನ್ನು ಸ್ವಲ್ಪ ಚಿಕ್ಕದು ಮಾಡಬೇಕೆಂದು ಪಣಿಕ್ಕರ್‌ರವರು ಹೇಳಿದ್ದರೆ, ಈಗಿರತಕ್ಕ ರೀತಿಯಲ್ಲೇ ಉಳಿಯಬೇಕೆಂದು ಮಿಕ್ಕಿಬ್ಬರು ಸಾಧಿಸಿದ್ದಾರೆ. ಹೀಗಿರುವಾಗ ನಾವು ನಮ್ಮ ಕರ್ನಾಟಕದ ವಿಷಯದಲ್ಲಿ ಯಾವ ಧೋರಣೆಯನ್ನು ತಾಳಬೇಕೆಂಬುದನ್ನು ಹೇಳಬೇಕಾಗಿಲ್ಲ.

ಅಲ್ಲದೆ, ಭಾಷಾವಾರು ತತ್ವದ ಮೇಲೆ ಈ ಪ್ರಾಂತ್ಯಗಳ ವಿಂಗಡಣೆಯಾಗದೆ ಇದ್ದರೂ ಕೂಡ ಆ ಅಂಶ ಇಲ್ಲಿ ಇದ್ದೇ ಇದೆ. ಯಾವ ಮನುಷ್ಯನಿಗೇ ಆಗಲಿ ತನ್ನ ಭಾಷೆಯ ಮೇಲೆ ಅಭಿಮಾನವಿದ್ದೇ ಇರುತ್ತದೆ. ಅದು ಸಹಜವಾದದ್ದೇ. ಆದ್ದರಿಂದ ಪ್ರಾಂತ್ಯಗಳ ಪುನರ್ವಿಂಗಡಣೆಯಲ್ಲಿ ಭಾಷೆಗೆ ಪ್ರಾಧಾನ್ಯತೆ ಕೊಡಬೇಕೆಂಬುದರಲ್ಲಿ ಅಸಮಂಜಸತೆಯೇನಿಲ್ಲ. ಏಕೆಂದರೆ, ಬೆಳಗಾಮಿನಲ್ಲಿ ಓದಿರತಕ್ಕ ಸದಸ್ಯರು ಅಲ್ಲಿನ ಕಹಿ ಅನುಭವವನ್ನು ಹೇಳದೆ ವಿಧಿಯಿಲ್ಲ. ಅಲ್ಲಿ ನಾನು ವಿದ್ಯಾರ್ಥಿಯಾಗಿದ್ದಾಗ ನಾನೇ ನೋಡಿದ್ದೇನೆ, ಕನ್ನಡಿಗರು ಸಭೆಗಳನ್ನು ನಡೆಸಬೇಕಾದರೆ ಎಷ್ಟೊಂದು ಕಷ್ಟನಿಷ್ಠುರಗಳನ್ನು ಅನುಭವಿಸಬೇಕಾಗುತ್ತಿತ್ತು! ನಮಗೇನೂ ಭಾಷೆಯ ಮೇಲಿನ ಅತಿಯಾದ ಅಭಿಮಾನ ಅಥವಾ ಹುಚ್ಚೇನೂ ಇಲ್ಲ. ಆದರೂ ಇದನ್ನು ನೋಡಿದ ಮೇಲೆ, ಅಲ್ಲಿ ಆ ಭಾಷೆಯನ್ನು ಮಾತನಾಡತಕ್ಕ ಜನರು ಎಷ್ಟು ಕಷ್ಟದಲ್ಲಿ ಸಿಕ್ಕಿದ್ದಾರೆಂಬುದನ್ನೂ ಗಮನಕ್ಕೆ ತೆಗೆದುಕೊಳ್ಳುವುದು ನಮ್ಮ ಕರ್ತವ್ಯವೆನಿಸುತ್ತಿದೆ.

ನಾವು ನೀವು ಹೇಳುವುದನ್ನೆಲ್ಲಾ ಕೇಳಿದ್ದೇವೆ. ನಮಗೂ ಕೇಳಿ ಕೇಳಿ ಸಾಕಾಗಿದೆ. ನೀವುಗಳೆಲ್ಲರೂ ಮಾಡತಕ್ಕ ಭಾಷಣ ಒಂದೇ ಆಗಿದೆ. ಆದರೆ ನೀವು ಹೇಳುತ್ತಿರುವಂತೆ ಅವರು ಬೇರೆ ಅಲ್ಲ—ನಾವು ಬೇರೆ ಅಲ್ಲ. ನಾವೆಲ್ಲರೂ ಒಂದೇ. ಒಬ್ಬ ಮನುಷ್ಯನು ಮತ್ತೊಬ್ಬ ಮನುಷ್ಯನ ಹತ್ತಿರ ಕಲೆತು ಒಬ್ಬರ ಮನಸ್ಸನ್ನು ಮತ್ತೊಬ್ಬರು ಅರಿತುಕೊಂಡು, ಒಬ್ಬರ ಕಷ್ಟಸುಖಗಳನ್ನು ಮತ್ತೊಬ್ಬರು ಅರಿತುಕೊಂಡು, ಒಬ್ಬೊರಿಗೊಬ್ಬರು ಸೇರಿ ನಕ್ಕು ನಲಿದಾಡುವಂತೆ ಮಾಡತಕ್ಕದ್ದು ಯಾವುದು ? ಅದು ಭಾಷೆಯೊಂದಲ್ಲದೆ ಮತ್ತಾವುದು ? ಆದುದರಿಂದ ನಾವು ಅಷ್ಟು ಹಗುರವಾಗಿ ನಮ್ಮ ಭಾಷೆಯನ್ನು ಅಲ್ಲಗಳೆಯುವಂತಿಲ್ಲ. ಜಗತ್ತಿನಲ್ಲಿ ಎಲ್ಲರೂ ಅವರವರ ಭಾಷೆಗೆ ಒಂದು ಹೆಚ್ಚಿನ ಮನ್ನಣೆ ಕೊಡುತ್ತಿದ್ದಾರೆಯೇ ಶಿವಾಯಿ ಜಾತಿಗಳಿಗೇನೂ ಅಷ್ಟಾಗಿ ಯಾರೂ ನಿಗಾ ಕೊಡುವುದಿಲ್ಲ. ಈ ದಿವಸ ಆ ಹೊರಗಿರತಕ್ಕ ನಮ್ಮ ಕನ್ನಡ ಬಂಧುಗಳು ನಿಜವಾಗಿಯೂ ಬಹಳ ಕಷ್ಟದಲ್ಲಿದ್ದಾರೆ. ಅವರು ಹಾಗೆ ಕಷ್ಟದಲ್ಲಿರುವುದಕ್ಕೆ ಪ್ರಬಲವಾದ ಕಾರಣಗಳೂ ಇವೆ. ಅವುಗಳಲ್ಲಿ ಮುಖ್ಯವಾದುದು ರಾಜಕೀಯ ಘಟನೆಗಳು. ಈಗ ಇರತಕ್ಕಂಥ ಆ ಬೊಂಬಾಯಿ—ಮದರಾಸು ಇತ್ಯಾದಿ ರಾಜ್ಯಗಳೆಲ್ಲಾ ಹಿಂದೆ ಆದಂಥ ಕೆಲವು ರಾಜಕೀಯ ಘಟನೆಗಳ ಮೇಲೆ ಆದಂಥವುಗಳಾಗಿವೆ. ಈ ರಾಜ್ಯಗಳು ಯಾವ ಒಂದು ಚಾರಿತ್ರಿಕವಾದಂಥ ಆಧಾರಗಳ ಮೇಲೂ ಆಗಿಲ್ಲ; ಯಾವ ಒಂದು ತತ್ವಗಳ ಆಧಾರದ ಮೇಲೂ ಆಗಿಲ್ಲ; ಯಾವ ಒಂದು ಸಂಸ್ಕೃತಿ ಅಥವಾ ಭಾಷೆ ಇತ್ಯಾದಿಗಳಲ್ಲಿ ಯಾವುದೊಂದರ ಆಧಾರದ ಮೇಲೂ ಅವು ರಚಿತವಾಗಿಲ್ಲ. ಅಂತೂ ಈ ಕಾರಣಗಳು ಏನೇ ಇರಲಿ ಈ ಹೊತ್ತು ಅಲ್ಲಿಯ ಕನ್ನಡಿಗರಿಗೆ ಆಗುತ್ತಿರುವ ತೊಂದರೆಯನ್ನು ನಾವು ನೆನೆದುಕೊಂಡರೆ ನಾವೆಲ್ಲರೂ ತುಂಬ ವ್ಯಸನಪಡತಕ್ಕ ವಿಚಾರವಾಗಿದೆ. ಈ ಮಾನ್ಯ ಸಭೆಯಲ್ಲಿ ಅನೇಕ ಹಿರಿಯ ನಾಯಕರುಗಳೂ, ಯಜಮಾನರೂ, ಮೇಧಾವಿಗಳೂ ದೊಡ್ಡ ದೊಡ್ಡ ರಾಜಕೀಯ ನಿಪುಣರೂ ಇರುವುದರಿಂದ ನಾವು ಇಂಥವರಿಗೆ—ಅದರಲ್ಲೂ ಮೈಸೂರಿನಲ್ಲಿ ಕಾಂಗ್ರೆಸ್ಸನ್ನು ಕಟ್ಟಿ ಬೆಳೆಸಿ ಅದನ್ನು ಸಲಹಿಕೊಂಡು ಬಂದಿರತಕ್ಕವರಿರುತ್ತಾರೆ—ಇಂಥವರಿಗೆ ನಾನು ಉಪದೇಶ ಮಾಡಲು ಅಗತ್ಯವಿಲ್ಲ. ಎಲ್ಲರೂ ತಿಳಿದವರಾಗಿದ್ದಾರೆ. ಕಾಂಗ್ರೆಸ್ಸಿಗೆ ವಿಶೇಷವಾಗಿ ದುಡಿದಿರತಕ್ಕಂಥ ಮಾನ್ಯ ಕೆ. ಚೆಂಗಲರಾಯರೆಡ್ಡಿಯವರು ಮೈಸೂರಿನ ಕಾಂಗ್ರೆಸ್ ಅಧ್ಯಕ್ಷರಾಗಿದ್ದಾಗ 1946ನೆಯ ಇಸವಿಯಲ್ಲಿ ಅವರ ಅಧ್ಯಕ್ಷತೆಯಲ್ಲಿ ನಡೆದ ಎಂ. ಪಿ. ಸಿ. ಸಿ. ಅಧಿವೇಶನದಲ್ಲಿ ಅವರ ನೇತೃತ್ವದಲ್ಲಿ ಈ ರೀತಿ

*Arterisk indicates that the speech has not been revised by the Member concerned.

(ಶ್ರೀ ಜಿ. ದುಗ್ಗಪ್ಪ.)

ಕರ್ಣಾಟಕ ಪ್ರಶ್ನೆಯನ್ನು ತೀರ್ಮಾನ ಮಾಡಿದ್ದಾರೆ.—

In November 1946 at the Second and Third Sessions of the Mysore Congress held at Bangalore under the Presidentship of Sri K. C. Reddy, they passed this resolution; "This assembly of the Mysore Congress declares itself in favour of an early formation of a Karnataka Province."

ಸ್ವಾಮಿ, ಹೀಗೆ ಈ ಹಿಂದೆಯೆಲ್ಲಾ ಈ ವಿಚಾರದಲ್ಲಿ ಯಾವ ರೀತಿ ತೀರ್ಮಾನವಾಗಿದೆ, ಎಷ್ಟು ಸಲ ತೀರ್ಮಾನವಾಗಿದೆ ಎನ್ನತಕ್ಕಂಥ ಎಲ್ಲ ವಿಚಾರಗಳನ್ನೂ ತಿಳಿದುಕೊಂಡಿರತಕ್ಕಂಥ ಮಹನೀಯರುಗಳು ಅನೇಕರು ಈಗ ಈ ಮಾನ್ಯ ಸಭೆಯಲ್ಲೇ ಇರುತ್ತಾರೆ. ಇಂಥವರು ಈ ದಿವಸ ಯಾರು ವಿರೋಧ ಮಾಡುತ್ತಿದ್ದಾರೋ ಅವರಿಗೆಲ್ಲಾ ಸರಿಯಾದ ತಿಳಿವಳಿಕೆ ಹೇಳಿ ಜನರನ್ನು ಒಲಿಸಿಕೊಳ್ಳಲು, ಒಪ್ಪಿಸುವಂತೆ ಮಾಡಲು ಸೂಕ್ತ ಕಾರ್ಯಕ್ರಮಗಳಲ್ಲಿ ತೊಡಗಬೇಕೆಂದರೆ ಅದಕ್ಕೆ ಹಿಂದುಮುಂದು ನೋಡುತ್ತಾ ಸಂಶಯಗಳಿಗೆ ಎಡೆ ಕೊಟ್ಟುಕೊಂಡು ಹೋಗುತ್ತಿದ್ದಾರೆ. ಈ ಸಭೆಯಲ್ಲಿ ಅನೇಕ ಮಹನೀಯರಿಗೆ ನಿರ್ದಿಷ್ಟವಾದ ಅಭಿಪ್ರಾಯಗಳಿವೆ. ಇಲ್ಲಿ ಬಹಳ ನಿಷ್ಠಾವಂತರೂ ನಿಷ್ಣಾತರಾದಂಥ ಜನರೂ ಇದ್ದಾರೆ. ಆದಕಾರಣ ನಾನಿನ್ನು ಈ ವಿಷಯದಲ್ಲಿ ಇಂಥವರ ಮುಂದೆ ವಾದ ಮಾಡುವುದು ಸರಿಯಿಲ್ಲ. ಆದರೆ ಈ ದಿವಸ ಕೆಲವು ಮಾನ್ಯ ಸದಸ್ಯರು ಈ ಒಂದು ದೊಡ್ಡ ಪ್ರಶ್ನೆಯನ್ನು ವಿಶಾಲ ದೃಷ್ಟಿಯಿಂದ ನೋಡದೆ ಇದನ್ನು ಕೇವಲ ಎರಡು ಕೋಮುಗಳಿಗೆ ಮಾತ್ರವೇ ಸಂಬಂಧ ಪಟ್ಟಿರತಕ್ಕಂಥ ಒಂದು ವಿಷಯವೆಂಬುದಾಗಿ ವಾದಿಸಲು ಹೊರಟ್ಟಿದ್ದಾರೆ. ಈ ವಾದಗಳೇನೇ ಇರಲಿ; ಕರ್ಣಾಟಕ ಪ್ರಾಂತ್ಯವಂತೂ ಆಗಿಯೇ ಆಗುತ್ತದೆ. ಅದಕ್ಕೆ ಯಾರು ಅಡ್ಡಿ ಬಂದರೂ ಅದು ನಿಲ್ಲುವುದಿಲ್ಲ. ಯಾವ ಒಂದು ಕೋಮೂ ಇದನ್ನು ತಡೆಯಲು ಸಾಧ್ಯವಿಲ್ಲ. ಈ ದಿವಸ ಈ ಪ್ರಶ್ನೆ ದೇಶದಲ್ಲಿರತಕ್ಕಂಥ ಎರಡು ಕೋಮುಗಳಿಗೆ ಮಾತ್ರವೇ ಸಂಬಂಧಪಟ್ಟಿದ್ದಲ್ಲ. ಇದು ಇಡೀ ದೇಶದ ಹಾಗೂ ಭರತ ಖಂಡದಲ್ಲಿರತಕ್ಕಂಥ ಎಲ್ಲಾ ಕೋಮುಗಳ, ಎಲ್ಲಾ ಪಂಗಡಗಳ ಮತ್ತು ಎಲ್ಲಾ ಜನರ ಕ್ಷೇಮಾಭಿವೃದ್ಧಿಗೂ ಸಂಬಂಧಪಟ್ಟ ಪ್ರಶ್ನೆಯಾಗಿದೆ. ಒಂದು ಕೋಮಿಗಾಗಿ ದೇಶದಲ್ಲಿ ಈ ದಿವಸ ಯಾರೂ ಇದನ್ನ ಮಾಡುತ್ತಿಲ್ಲ. ದೇಶದಲ್ಲಿ ಎಲ್ಲರೂ ಮುಂದುವರಿಯಲಿ—ಆದರೆ ನಾವು ಮಾತ್ರ ಹೀಗೆಯೇ ಇರುತ್ತೇವೆ ಎಂದು ಹೇಳುವುದಕ್ಕೆ ಯಾರೂ ಈ ದಿವಸ ತಯಾರಿರುವುದಿಲ್ಲ. ಹಾಗೊಂದು ವೇಳೆ ಯಾರಾದರೂ ಹೇಳುವುದಕ್ಕೆ ತಯಾರಾಗಿದ್ದರೆ ಅವರು ಹೇಳತಕ್ಕ ತಮ್ಮ ವಾದದಿಂದಲೇ ಅವರ ಕಾಲಿನ ಕೆಳಗೆ ಅವರೇ ಗುಂಡಿ ತೋಡಿಕೊಂಡ ಹಾಗೆ ಆಗುತ್ತದೆ. ದೇಶದಲ್ಲಿ ಎಲ್ಲ ಜನರ ಅಭಿವೃದ್ಧಿಗೂ ಸಾಧಕವಾಗುವಂಥ ಈ ಒಂದು ಮಹಾಪ್ರಯತ್ನಕ್ಕಾಗಿ ಇಡೀ ದೇಶಾದ್ಯಂತವೂ ಜನರು ತಮ್ಮ ಶಕ್ತಿಯನ್ನೆಲ್ಲಾ ವಿನಿಯೋಗಿಸುತ್ತಿದ್ದಾರೆ. ಆದುದರಿಂದ ಇಂಥ ಒಂದು ಮಹತ್ಕಾರ್ಯದಲ್ಲಿ ತಾವುಗಳು ಯಾರೂ ಜನರಲ್ಲಿ ತಪ್ಪು ಭಾವನೆಗಳಿಗೆ ಅವಕಾಶ ಉಂಟಾಗುವುದಕ್ಕೆ ದಾರಿಕೊಡಬಾರದು. ಕೋಮುವಾರು ಭಾವನೆಗೆ ಅವಕಾಶ ಕೊಡಬಾರದು. ಕರ್ಣಾಟಕ ಪ್ರಾಂತ್ಯ ನಿರ್ಮಾಣಕ್ಕೆ ಅಡ್ಡಿ ತರಬಾರದು. ಈಗಾಗಲೇ ಈ S.R.C. ವರದಿಯಲ್ಲೇ ಸಾಕಷ್ಟು ಈ ಕೋಮುವಾರು ವಿಚಾರ ಪಸ್ತಾಪಿಸಲ್ಪಟ್ಟಿದೆ. ಸಾಕು. ಈ ವರದಿಯಲ್ಲಿ ಹೀಗೆ ಹೇಳಿದ್ದಾರೆ: "ಕರ್ಣಾಟಕದಲ್ಲಿ ಒಂದು ರಾಜ್ಯವಿರುವುದಕ್ಕಿಂತ ಎರಡು ರಾಜ್ಯಗಳಿರಬೇಕೆಂದು ಕೆಲವು ಸಂದರ್ಭಗಳಲ್ಲಿ ಮಾಡಿರತಕ್ಕ ಕೋರಿಕೆಗಳಿಗೆ ಮುಖ್ಯ ಕಾರಣವು ರಾಜಕೀಯ ಅಥವಾ ಮತಸಂಬಂಧವಾದ ಭೀತಿಯೇ ಆಗಿದೆಯೆಂದು ಅಥವಾ ಇವೆರಡೂ ಆಗಿದೆಯೆಂದು ಸೂಚಿಸಲಾಗಿದೆ." ಮೈಸೂರು ಸಂಸ್ಥಾನದ ಹೊರಗಡೆಯಿರತಕ್ಕ ಕನ್ನಡ ಪ್ರದೇಶಗಳಲ್ಲಿನ ಈಗಿನ ಪ್ರಜಾಸಂಖ್ಯೆಯಲ್ಲಿ ಲಿಂಗಾಯಿತರ ಅಥವಾ ವೀರಶೈವರ ಜನಸಂಖ್ಯೆಯು ಅಧಿಕವಾಗಿದೆಯೆಂದೂ—ಮೈಸೂರು ರಾಜ್ಯದಲ್ಲಿ ಅದೇ ಕನ್ನಡಿಗರಲ್ಲಿ ಮುಖ್ಯವಾದ ಮತ್ತೊಂದು ಪಂಗಡಕ್ಕೆ ಸೇರಿದವರು ಎಂದರೆ ಒಕ್ಕಲಿಗರ ಸಂಖ್ಯೆಯು ಅಧಿಕವಾಗಿದೆಯೆಂದೂ ಉಲ್ಲೇಖಿಸಿದ್ದಾರೆ. ಹೀಗೆ ಅವರು ಉಲ್ಲೇಖಿಸಲು ಅವರಿಗೆ ಯಾರು ಈ ವಿಚಾರ ಹೇಳಿದರು ? ಶ್ರೀ ಜಿ. ಎ. ತಿಮ್ಮಪ್ಪಗೌಡರು ನಾವೇನೂ ಆ ರೀತಿ ಮೆಮೊರಾಂಡಂ ಒಪ್ಪಿಸಿಲ್ಲ ಎಂದು ಹೇಳಿದರು. ಈ ಸಭೆಯವರು ಯಾರೂ ಆ ರೀತಿ ಅಭಿಪ್ರಾಯ ಸೂಚಿಸಿಲ್ಲ. ಆದರೂ ಆ ಸಮಿತಿಯವರು ತಮ್ಮ ವರದಿಯಲ್ಲಿ ಈ ವಿಚಾರವನ್ನು ಪ್ರಸ್ತಾಪಿಸುತ್ತ ಕರ್ಣಾಟಕ ಪ್ರಾಂತ್ಯ ನಿರ್ಮಾಣವಾಗಿ ಅಧಿಕಾರ ಒಂದು ಕೋಮಿನವರ ಕೈಗೆ ಸಿಕ್ಕಿದರೆ ಅವರು ಬಹಳ ಪ್ರಬಲರಾಗುತ್ತಾರೆ, ಅದರಿಂದ ದೇಶಕ್ಕೆ ಬಹಳ ಅನ್ಯಾಯಗಳಾಗುತ್ತವೆ ಎಂದು ಹೇಳಿದ್ದನ್ನು ತಿರಸ್ಕಾರ ಮಾಡಿದ್ದಾರೆ. ಅವರು ಈ ವಿಚಾರದಲ್ಲಿ ಹೀಗೆಲ್ಲಾ ಚರ್ಚೆ ಮಾಡಬೇಕಾಗಿದ್ದುದರ ಅವಶ್ಯಕತೆ ಹೇಗೆ ಉಂಟಾಯಿತು ಎನ್ನುವುದನ್ನು ಆಲೋಚಿಸಿದರೆ, ಯಾರೋ ಈ ಕರ್ಣಾಟಕಕ್ಕೆ ಭಿನ್ನಾಭಿಪ್ರಾಯವಿರತಕ್ಕ ಪಾರ್ಟಿಯವರೇ ಇಂಥ ಒಂದು ಹೇಳಿಕೆ ಕೊಟ್ಟಿದ್ದರ ಕಾರಣ ಈ ವರದಿಯಲ್ಲಿ ಈ ವಿಚಾರ ಬರಲು ಅವಕಾಶ ಉಂಟಾಗಿದೆ ಎಂದು ಹೇಳಬೇಕಾದದ್ದೇ ಇಲ್ಲ. ಆದುದರಿಂದಲೇ ಆ ಸಮಿತಿಯವರು ತಮ್ಮ ವರದಿಯ 325 ನೆಯ ಪ್ಯಾರಾದಲ್ಲಿ ಹೀಗೆ ಹೇಳಿದ್ದಾರೆ;—"ಈ ಅಲ್ಪಸಂಖ್ಯಾತ ಕೋಮುಗಳಲ್ಲಿ ಕೆಲವು ಕೋಮುಗಳು ಭೀತಿಗೊಳ್ಳುವುದಾದರೆ ಪ್ರಾಯಶಃ ಅಂಥ ಭೀತಿಗಳಿಗೆ ಗಾಬರಿಗಳಿಗೆ ವಾಸ್ತವವಾಗಿಯೂ ಕಾರಣಗಳಿವೆಯೋ ಎಂಬುದನ್ನು ಮನದಟ್ಟು ಮಾಡಿಕೊಳ್ಳುವುದೂ ಸಹ ಕಷ್ಟ. ಆದಾಗ್ಯೂ ನಾವು ಗಮನದಲ್ಲಿಟ್ಟಿರುವ ಕರ್ಣಾಟಕ ರಾಜ್ಯದ ರಾಜಕೀಯ ಮತ್ತು ಆರ್ಥಿಕಾಭಿವೃದ್ಧಿಯ ದೃಷ್ಟಿಯಿಂದ ಈ ರೀತಿಯಲ್ಲಿ ಕೀಳುತರಹದ ಕೋಮುವಾರು ಭಾವನೆಗಳಿಗೆ ಪ್ರಾಧಾನ್ಯತೆ ಕೊಡಬಾರದು. ಭೀತಿಗೊಳ್ಳುವುದಕ್ಕಾಗಲಿ ಗಾಬರಿಗೊಳ್ಳುವುದಕ್ಕಾಗಲಿ ಕಾರಣಗಳಿರುವಂತೆ ಸಮರೀತಿಯಲ್ಲಿ ಕೋಮುವಾರು ಹಂಚಿಕೆಯು ಒಂದು ಒಳ್ಳೆಯ ಸರ್ಕಾರವೇರ್ಪಡುವುದಕ್ಕೆ ಉಪಯುಕ್ತವಾದುದೆಂದು ನಿರೀಕ್ಷಿಸುವುದಕ್ಕೂ ಕಾರಣಗಳಿದ್ದೇ ಇವೆ" ಎಂದು ಹೇಳಿದ್ದಾರೆ. ಹೀಗೆ ಅವರು ಹೇಳಿರತಕ್ಕ ಈ ಮುಖ್ಯಾಂಶಗಳನ್ನು ಸರ್ವರೂ ತಮ್ಮ ಗಮನದಲ್ಲಿಟ್ಟುಕೊಂಡು ಒಂದು ಒಳ್ಳೆಯ ಸರ್ಕಾರ ಏರ್ಪಡುವುದಕ್ಕೆ ಈ ಮಾನ್ಯ ಸಭೆಯವರು ಬೆಂಬಲ ನೀಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಇನ್ನು ಇದೇ ಸಂದರ್ಭದಲ್ಲಿ ಹರಿಜನರ ವಿಚಾರವನ್ನೂ ಸಹ ಕೆಲವರು ಪ್ರಸ್ತಾಪಮಾಡಿದ್ದಾರೆ. ಒಂದು ಕೋಮು ಕರ್ಣಾಟಕದಲ್ಲಿ ಹೆಚ್ಚಾಗಿರಬಹುದು. ಈ ದಿವಸ ಮೈಸೂರಿನಲ್ಲಿ ಒಂದು ಕೋಮು ಹೆಚ್ಚಾಗಿರ

ಬಹುದು, ಮತ್ತೊಂದು ಕೋಮು ಹೆಚ್ಚಾಗಿಲ್ಲದೆ ಇರಬಹುದು.

ಒಬ್ಬ ಮಾನ್ಯ ಸದಸ್ಯರು.—ಈಗ ನಿಮ್ಮಲ್ಲೇ ಎರಡು ಕೋಮುಗಳಿವೆ. . . .

ಶ್ರೀ ಜಿ. ದುಗ್ಗಪ್ಪ.—ಇಂಡಿಯಾದೇಶದಲ್ಲಿ ಕೆಲ ಕೆಲವು ಪ್ರಾಂತ್ಯಗಳಲ್ಲಿ ಕೆಲಕೆಲವು ಕೋಮುಗಳು ಮಾತ್ರ ಇದ್ದು ಬಾಕಿ ಕೋಮುಗಳು ಇರುವುದಿಲ್ಲ. ಆದರೆ ನಮ್ಮ ಹರಿಜನರ ವಿಚಾರ ಹಾಗಿಲ್ಲ. ಈ ಕೋಮು ಆಸೇತು ಹಿಮಾಲಚಲದಿಂದ ಹಿಡಿದು ಪ್ರತಿಯೊಂದು ಪ್ರಾಂತ್ಯದಲ್ಲೂ ಪೂರ್ವಬಂಗಾಳ, ಪಶ್ಚಿಮ ಬಂಗಾಳ, ಅಸ್ಸಾಂ, ಇತ್ಯಾದಿ ದೇಶಗಳಲ್ಲೆಲ್ಲಾ ಇದ್ದೇ ಇದೆ.

(ನಾವು ಹೇಳುವುದನ್ನು ನೀವು ಕೇಳುತ್ತಿಲ್ಲ ಎಂದು ಸಭೆಯಲ್ಲಿ ಶಬ್ದ).

ನೀವು ಹೇಳಿದ್ದನ್ನು ನಾವು ಕೇಳಿಕೇಳಿ ನಮಗೆ ಆ ಸಹನೆ ಮಾರಿಹೋಗಿದೆ. ನೀವು ಎಲ್ಲರೂ ಹೇಳತಕ್ಕದ್ದೂ ಒಂದೇ ಒಂದು ವಿಚಾರ. ಅದೇನೆಂಬುದು ಈಗಾಗಲೇ ಎಲ್ಲರಿಗೂ ಗೊತ್ತಾಗಿ ಹೋಗಿದೆ. ಆದರೆ ನಮ್ಮ ವಿಚಾರ ತೆಗೆದುಕೊಂಡರೆ "ನಾವು ಅಪ್ಪನ ಸಂಗಡ ಉಂಡರೂ ಒಂದೇ, ಅಮ್ಮನ ಸಂಗಡ ಉಂಡರೂ ಒಂದೇ" ನಮಗೆಲ್ಲರೂ ಒಂದೇ. ನಾನೂ ಹಿಂದೆಲ್ಲಾ ಟ್ಯೂಷನ್ ಫೀಜ್ ಕೊಟ್ಟು ಓದಿದ್ದೇನೆ. ನನಗೆ ಎಲ್ಲಾ ವಿಚಾರಗಳೂ ಗೊತ್ತಿವೆ. ಆ ವಿಚಾರವಿರಲಿ. ಈ ದಿವಸ ಒಂದು ಸುವ್ಯವಸ್ಥಿತವಾದ ರಾಜ್ಯಕಟ್ಟಿ ಒಳ್ಳೆಯ ಸರ್ಕಾರವನ್ನು ಕಟ್ಟಿ ದೇಶದ ಅಭಿವೃದ್ಧಿ ಸಾಧನೆಯಲ್ಲಿ ನಾವೆಲ್ಲರೂ ಸಹಕರಿಸಿ ಸ್ನೇಹಿತರಂತೆ ವರ್ತಿಸಿಕೊಂಡಿರತಕ್ಕದ್ದು ನಿಜವಾಗಿಯೂ ನಾವೆಲ್ಲರೂ ಹೆಮ್ಮೆಪಡತಕ್ಕಂಥ ವಿಚಾರ. ಆದರೆ ಈ ದಿವಸ ಆ ಹೊಸ ರಾಜ್ಯದಲ್ಲಿ ನಮ್ಮ ಜನಗಳಿಲ್ಲವಲ್ಲ ಎನ್ನುವುದಕ್ಕಾಗಿ ನಾನು ವ್ಯಸನಪಡತಕ್ಕವನಲ್ಲ. ಆದರೆ ಆ ಹೊಸದಾಗಿ ಬರತಕ್ಕಂಥ ಜನರು ನಮ್ಮೊಡನೆ ಸ್ನೇಹಿತರಾಗಿ ಬಾಳಲು ಬರುತ್ತೇವೆಂದರೆ ಅವರನ್ನು ಉದಾರ ಭಾವನೆಯಿಂದ ಸ್ವಾಗತಿಸತಕ್ಕದ್ದು ನಿಜವಾಗಿಯೂ ಹೆಮ್ಮೆ ಪಡತಕ್ಕಂಥ ವಿಚಾರವೆಂದು ನಾನು ಭಾವಿಸಿದ್ದೇನೆ.

ನಾನು ಈಗ ಮಲೆನಾಡಿನ ಬಗ್ಗೆ ಒಂದೆರಡು ಮಾತುಗಳನ್ನು ಹೇಳಲಿಚ್ಛಿಸುತ್ತೇನೆ. ಶ್ರೀಮತಿ ಬಿ. ಎಲ್. ಸುಬ್ಬಮ್ಮನವರು ಆ ಮಲೆನಾಡಿನ ಅಭಿವೃದ್ಧಿ ಈಗಲೇ ಬಹಳ ಹಿಂದೆ ಬಿದ್ದಿದೆ, ಆದರಿಂದ ಮುಂದೆ ಇದು ಅಭಿವೃದ್ಧಿಗೆ ಬರಲು ಬಹಳ ತೊಂದರೆಯಾಗುತ್ತದೆಂದು ಹೇಳಿದರು. ಆದರೆ ಈಗಾಗಲೇ ಶ್ರೀ ವ್ಯಾಸ್ಕರನ್‌ಹ್ಯಾಸ್‌ರವರು ಅದಕ್ಕೆ ಸರಿಯಾದ ಉತ್ತರ ಹೇಳಿದ್ದಾರೆ. ಈ S.R.C. ವರದಿಯಲ್ಲಿ ಆ ಮಲೆನಾಡಿನ ಅಭಿವೃದ್ಧಿ ವಿಚಾರವಾಗಿ ಹೀಗೆ ಹೇಳಿದ್ದಾರೆ: "ಮಲೆನಾಡು ಪ್ರದೇಶವು ನಾಲ್ಕು ರಾಜ್ಯಗಳ ಆಡಳಿತಕ್ಕೊಳಪಟ್ಟಿರುವುದರಿಂದ ಸುಸಂಘಟಿತ ರೀತಿಯಲ್ಲಿ ಆರ್ಥಿಕಾಭಿವೃದ್ಧಿಗೆ ಸಂಬಂಧಪಟ್ಟ ಯೋಜನೆಗಳನ್ನು ನಿರೂಪಿಸಿ ಕಾರ್ಯರೂಪಕ್ಕೆ ತರುವುದಕ್ಕೆ ಸ್ವಲ್ಪಮಟ್ಟಿಗೆ ಅಡ್ಡಿಯಾಗಿದೆ. ಆದರೆ ಈಗ ಈ ಮಲೆನಾಡಿನ ಪುರೋಭಿವೃದ್ಧಿಗಾಗಿ ಅನೇಕ ಯೋಜನೆಗಳನ್ನು ಕೈಗೊಳ್ಳಬೇಕೆಂದು ಪರಿಶೀಲಿಸಬೇಕಾಗುತ್ತದೆ. ಮಲೆನಾಡಿನ ಜನಸಂಖ್ಯೆ ಕಮ್ಮಿಯಾಗುತ್ತಿದೆ ಎಂದು ಹೇಳುವುದು ಸತ್ಯಾಂಶವಲ್ಲ. ಆದರೂ ಸಹ ನಾವು ಒಂದು ವಿಷಯವನ್ನು ಗಮನಿಸಬೇಕಾಗಿದೆ. ಇಡೀ ಮಲೆನಾಡು ಪ್ರದೇಶವು ಮುಂದೆ ಒಂದೇ ರಾಜ್ಯಾಡಳಿತಕ್ಕೆ ಒಳಪಡುತ್ತದೆ. ಮಲೆನಾಡಿನ ಪುರೋಭಿವೃದ್ಧಿ ದೃಷ್ಟಿಯಿಂದ ಇದು ಒಂದು ಅಧಿಕ ಲಾಭವೆಂದೇ ಹೇಳಬಹುದು" ಎಂದು ತಿಳಿಸಿದ್ದಾರೆ.

ಅಧ್ಯಕ್ಷರು.—ಮಲೆನಾಡು ಕಾನ್ಫರೆನ್ಸಿನಲ್ಲಿ ಅವರೂ ಇದ್ದರು.

ಶ್ರೀ ಟಿ. ಎನ್. ಮೂಡಲಗಿರಿಗೌಡ.—ಈ ವರದಿಯಲ್ಲೇ ಮೈಸೂರು ಸರ್ಕಾರ ಮಲೆನಾಡಿನ ಅಭಿವೃದ್ಧಿಗಾಗಿ ಸಾಕಷ್ಟು ಹಣ ಖರ್ಚುಮಾಡಿಲ್ಲ ಎನ್ನುವ ಅಂಶವನ್ನು ತಿಳಿಸಬೇಕಾಗಿತ್ತು. ಅದನ್ನು ಅವರು ಗಣನೆಗೆ ತೆಗೆದುಕೊಂಡಿಲ್ಲ ಎಂದು ಹೇಳುತ್ತೇನೆ.

ಶ್ರೀ ಜಿ. ದುಗ್ಗಪ್ಪ.—ಆ ಒಂದು ವ್ಯಥೆ ಇದ್ದಲ್ಲಿ ನಾಳೆ ಅದು ಪರಿಹಾರವಾಗಿಯೇ ಆಗುತ್ತದೆ. ನಮಗೀಗ ಅಕ್ಕಿ ಬೇಕು, ಅದಕ್ಕಾಗಿ ಭತ್ತವನ್ನು ಕುಟ್ಟುತ್ತೇವೆ. ನಮಗೆ ಬೇಕಾಗುವಂಥ ಅಕ್ಕಿಯು ಜೊತೆಯಲ್ಲೇ ಹೊಟ್ಟು ಬರುತ್ತದೆ, ಆದರೆ ತಾವು ಅಕ್ಕಿಯನ್ನು ಮರೆತು ಹೊಟ್ಟನ್ನೇ ಗಮನಿಸಬಾರದು, ಮಲೆನಾಡಿನ ಅಭಿವೃದ್ಧಿ ಆಗಿಯೇ ಆಗುತ್ತದೆ. ಈ ದಿವಸ ಮಹಾತ್ಮಾಜೀ ಅವರೇ ಇದ್ದಿದ್ದರೆ ಇದನ್ನೆಲ್ಲಾ ನೋಡಿ ಅವರೇನು ಹೇಳುತ್ತಿದ್ದರೋ ನಾನಂತೂ ಹೇಳಲಾರೆ. ಶ್ರೀ ಎ. ಜಿ. ರಾಮಚಂದ್ರರಾಯರು ಬಹಳ ದೊಡ್ಡವರು. ಅವರು ಈ ಕಾಂಗ್ರೆಸ್ಸಿಗೆ ಬಹಳ ದಿವಸಗಳಿಂದ ಮಣ್ಣು ಹೊತ್ತಿದ್ದಾರೆ. ಆದರೆ 'ಅಂಥ ದೊಡ್ಡವರೇ ಮೊನ್ನೆ ಈ ಭಾಷೆಯನ್ನು ಒಂದು ಭೂತ' ಎಂದು ಹೇಳಿದ್ದಾರೆ. ಒಂದು ಭಾಷೆಯಿಲ್ಲದೆ ರಾಜ್ಯ ನಿರ್ಮಾಣವಾಗುವುದಿಲ್ಲ ಎಂದು ರಾಜ್ಯಾಂಗದಲ್ಲೇ ಹೇಳಿದೆ. ಈ ವಿಚಾರದಲ್ಲಿ ರಾಜ್ಯಾಂಗ ಸಮಿತಿಯಲ್ಲಿ ಬಹಳ ಚರ್ಚೆಯಾಗಿದೆ. ಹಾಗೆ ಆ ದಿವಸ ಭಾಷಾವಾರು ತತ್ವಗಳನ್ನು ಒಪ್ಪಿಕೊಂಡು, ಅವುಗಳೇನೆಂಬುದನ್ನು ಅರಿತುಕೊಂಡಿದ್ದರೂ ಅವರು ಹೀಗೆ ಹೇಳಿದ್ದನ್ನು ಈ ದಿವಸ ಯಾರೂ ಒಪ್ಪುವುದಿಲ್ಲ. ಹಾಗೆ ತತ್ವಕ್ಕೆ ಕಟ್ಟುಬಿದ್ದ ಮೇಲೆ ಕೋಲಾರವನ್ನು ಬಿಟ್ಟುಕೊಡಬೇಕೆಂದು ಹೇಳಿದರೆ ಅದನ್ನು ಬಿಟ್ಟುಕೊಡಲೇಬೇಕು. ಆದರೆ ಈ ದಿವಸ ಈ ರಾಜ್ಯಗಳ ಪುನರ್ವಿಂಗಡಣೆ ಮಾಡಿರುವುದು ಕೇವಲ ಈ ಭಾಷೆಯೊಂದರ ಆಧಾರದ ಮೇಲೆಯೇನೂ ಅಲ್ಲ. ಈ ರಾಜ್ಯಗಳ ಪುನರ್ವಿಂಗಡಣೆ ಯಾವ ಆಧಾರಗಳಮೇಲೆ ನಡೆಯಬೇಕೆಂಬುದರ ಬಗ್ಗೆ ಕೇಂದ್ರಸರ್ಕಾರದವರೂ ಆ ಸಮಿತಿಗೆ ನಿರ್ದಿಷ್ಟ ನಿರೂಪಗಳನ್ನು ಕೊಟ್ಟಿದ್ದಾರೆ. ನಾವು ಆ ಅಂಶಗಳನ್ನೆಲ್ಲಾ ಗಣನೆಗೆ ತೆಗೆದುಕೊಂಡು ಮಾತನಾಡುವುದು ಒಳ್ಳೆಯದು. ಈ ಸಮಿತಿಯ ವರದಿಯ 283-284ನೇ ಪುಟಗಳಲ್ಲಿ ಹೀಗೆ ಹೇಳಿದ್ದಾರೆ: "ಒಂದು ಪ್ರದೇಶದಲ್ಲಿರುವ ಭಾಷೆ ಮತ್ತು ಸಂಸ್ಕೃತಿಗೆ ಪ್ರಾಧಾನ್ಯತೆಯಿದೆಯೆಂಬುದು ನಿಸ್ಸಂದೇಹವಾದ ಸಂಗತಿ ಏತಕ್ಕೆಂದರೆ, ಅವು ಒಂದು ಪ್ರದೇಶದ ಸರ್ವಸಾಮಾನ್ಯವಾದ ಜನರ ಜೀವನ ವಿಧಾನವನ್ನು ವ್ಯಕ್ತಪಡಿಸುತ್ತವೆ. ರಾಜ್ಯಗಳು ಪುನರ್ವ್ಯವಸ್ಥಾಕ್ರಮವನ್ನು ಪರ್ಯಾಲೋಚಿಸುವಾಗ ಏನೇ ಆಗಲ ನಾವು ಗಮನಿಸಬೇಕಾದ ಮುಖ್ಯವಾದ ಇತರ ವಿಷಯಗಳು ಇದ್ದೇ ಇವೆ. ಮೊದಲು ಗಣನೆಗೆ ತೆಗೆದುಕೊಳ್ಳಬೇಕಾದ ಮುಖ್ಯ ವಿಷಯವಾವುದೆಂದರೆ—ಭಾರತದ ಭದ್ರತೆಯನ್ನೂ ಮತ್ತು ಐಕ್ಯತೆಯನ್ನೂ ಉಳಿಸಿಕೊಂಡು ಬಂದು ಅದು ಬಲಯುತವಾಗಿರುವಂತೆ ಮಾಡುವುದು ಮತ್ತು ಭಾರತದಲ್ಲಿ ನೆಮ್ಮದಿಯನ್ನು ಸ್ಥಾಪಿಸುವುದು. ಹಣಕಾಸಿನ ಸಂಬಂಧವಾದ, ಆರ್ಥಿಕ ಮತ್ತು ಆಡಳಿತ ಸಂಬಂಧವಾದ, ವಿಷಯಗಳನ್ನು ಗಣನೆಗೆ ತೆಗೆದುಕೊಳ್ಳುವುದು ಅದರಂತೆಯೇ ಬಹುಮಟ್ಟಿಗೆ ಪ್ರಾಮುಖ್ಯವಾದ ವಿಷಯವಾಗಿದೆ. ಹಾಗೆ ಪ್ರಾಮುಖ್ಯತೆಯಿಂದ ಇರುವುದು ಪ್ರತಿಯೊಂದು ರಾಜ್ಯದ ದೃಷ್ಟಿ

(ಶ್ರೀ ಸಿ. ದುಗ್ಗಪ್ಪ.)

ಯಿಂದಲೇ ಅಲ್ಲ, ಇಡೀ ಭಾರತದ ಹಿತದೃಷ್ಟಿಯಿಂದ ಪ್ರಾಮುಖ್ಯವಾದುದು. ಭಾರತವು ತನ್ನ ಆರ್ಥಿಕಾಭಿವೃದ್ಧಿಗಾಗಿ ಮತ್ತು ಸಾಂಸ್ಕೃತಿಕ ಮತ್ತು ನೈತಿಕ ಪ್ರಗತಿಗಾಗಿ ಒಂದು ಕ್ರಮಬದ್ಧ ಯೋಜನೆಯ ಮೇರೆಗೆ ಕಾರ್ಯಕ್ರಮಗಳನ್ನು ಕೈಗೊಂಡಿರುತ್ತದೆ; ಅಂಥ ರಾಷ್ಟ್ರೀಯ ಯೋಜನೆಯನ್ನು ಕಾರ್ಯರೂಪಕ್ಕೆ ತರಲು ಅಡ್ಡಿಬರುವ ಬದಲಾವಣೆಗಳು ರಾಷ್ಟ್ರದ ಹಿತಕ್ಕೆ ಧಕ್ಕೆಯನ್ನುಂಟು ಮಾಡುವುವು" ಹೀಗೆ ಆ ಸಮಿತಿಯವರು ಈ ಒಂದು ವರದಿಯನ್ನು ಒಪ್ಪಿಸುವುದರ ಬಗ್ಗೆ ಅನೇಕ ವಿಷಯಗಳನ್ನು ಗಣನೆಗೆ ತೆಗೆದುಕ್ಕೊಂಡು ಅನೇಕ ಬೆಲೆಯುಳ್ಳ ಸಲಹೆಗಳನ್ನು ಮಾಡಿದ್ದಾರೆ. ಹೀಗೆ ಎಲ್ಲಾ ವಿಚಾರಗಳನ್ನೂ ಅವರು ಗಣನೆಗೆ ತೆಗೆದುಕೊಂಡು ಕೊನೆಯಲ್ಲಿ ಒಂದು ಮಾತನ್ನು ಹೇಳಿದ್ದಾರೆ: "ಕರ್ಣಾಟಕ ರಾಜ್ಯದ ವ್ಯವಸಾಯ ಸಂಪತ್ತು, ಖನಿಜಸಂಪತ್ತು, ಜಲಸಂಪತ್ತು ಮತ್ತು ಅರಣ್ಯಸಂಪತ್ತು ಗಣನೀಯವಾದುದು. ಕರ್ಣಾಟಕ ರಾಜ್ಯಕ್ಕೆ ಸಂಬಂಧಪಟ್ಟ ಸಮಸ್ಯೆಗಳನ್ನು ಯಾವದೃಷ್ಟಿಯಿಂದ ಗಮನಿಸಿ ನೋಡಿದರೂ ಸಹ, ಕರ್ಣಾಟಕ ರಾಜ್ಯದಲ್ಲಿ ಸಾಂಸ್ಕೃತಿಕ ಏಕರೂಪತೆಯು ಕಂಡು ಬರುತ್ತದೆ. ಆರ್ಥಿಕ ವ್ಯವಸ್ಥೆಯು ಸಮಸ್ಥಿತಿಯಲ್ಲಿರುತ್ತದೆ ಕರ್ಣಾಟಕ ರಾಜ್ಯದಲ್ಲಿ ಭಾಷಾದೃಷ್ಟಿಯಿಂದ ಐಕ್ಯತೆಯು ಕಂಡುಬರುವುದು ಮಾತ್ರವೇ ಅಲ್ಲದೇ ಇತರ ವಿಚಾರಗಳಿಂದ ಸಹ ಐಕ್ಯತೆ ಕಂಡು ಬರುತ್ತದೆ" ಎಂದು ಒಮ್ಮನಸ್ಸಿನಿಂದ ಹೇಳಿದ್ದಾರೆ. ಇದರಲ್ಲಿ ಎರಡು ಅಭಿಪ್ರಾಯಗಳೇ ಇಲ್ಲ. ಕರ್ಣಾಟಕ ರಾಜ್ಯ ಮೈಸೂರನ್ನೊಳಗೊಂಡ ಒಂದು ಸುವ್ಯವಸ್ಥಿತವಾದ ರಾಜ್ಯವಾಗುತ್ತದೆ. ಈ ಅಂಶಗಳನ್ನೆಲ್ಲಾ ಆ ತ್ರಿಮೂರ್ತಿಗಳು ಹೇಳಿದ್ದಾರೆ. ಇದು ನಿಜವಾಗಿಯೂ ಸ್ವಾಗತಾರ್ಹವಾದದ್ದು.

ಕೆಲವು ಮಾನ್ಯ ಸದಸ್ಯರು "ಅಲ್ಲಿಂದ ಇಲ್ಲಿಗೆ ಬರುತ್ತಾರೆ. ಅವರದು ಒಂದು ತರಹ ಭಾಷೆ, ನಮ್ಮದು ಒಂದು ತರಹ ಭಾಷೆ ಇರುತ್ತದೆ. ಅದು ಸರಿಹೋಗುವುದಿಲ್ಲ" ಎಂದು ಹೇಳಿದರು. ನಮಗೆ ಕನ್ನಡ ಮಾತನಾಡುವವರು ಬಂದಾಗಲೇ ಅಷ್ಟೊಂದು ಯೋಚನೆ ಮಾಡಿದರೆ, ತಮಿಳು, ತೆಲುಗು, ಕನ್ನಡ ಮಾತನಾಡುವವರು ಪಾರ್ಲಿಮೆಂಟ್‌ನಲ್ಲಿ ಸೇರಿರುತ್ತಾರೆ. ಅಂಥವರು ಇಡೀ ದೇಶದ ಪ್ರಶ್ನೆಗಳನ್ನು ಬಗೆಹರಿಸಿ ತೀರ್ಮಾನಕ್ಕೆ ಬರುವುದಕ್ಕೆ ಸಾಧ್ಯವಿದ್ದರೆ, ಕನ್ನಡ ಮಾತನಾಡುವವರು ರಾಗ ಎಳೆದು ಹಾಂಗಿದೆ, ಹೀಂಗಿದೆ ಎಂದು ಹೇಳುವುದರಿಂದ ತೊಂದರೆಯಿಲ್ಲ. ಒಂದೇ ಭಾಷೆ ಮಾತನಾಡುವವರಲ್ಲಿ ಐಕ್ಯತೆಗೆ ತೊಂದರೆ ಬರುತ್ತದೆ, ಅವರನ್ನು ಅರಿತುಕೊಳ್ಳುವುದಕ್ಕಾಗುವುದಿಲ್ಲ ಎಂಬ ವಾದವನ್ನು ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ. ಪುನರುಕ್ತಿ ಆದರೂ ಸಹ ಇನ್ನೊಂದು ಮಾತು ಹೇಳಬೇಕಾಗುತ್ತದೆ. ಭಾಷಾವಾರಿನಮೇಲೆ ಆಗುವ ಪ್ರಾಂತಕ್ಕೆ ಯಾರೂ ಹೆದರಬೇಕಾಗಿಲ್ಲ. ಈ ಸಂದಿಗ್ಧ ಪರಿಸ್ಥಿತಿಯಲ್ಲಿ ಅನೇಕ ಕಾರಣಗಳಿಂದ ಎಲ್ಲವೂ ಸುಲಭವಾಗಿ ಪರಿಹಾರವಾಗುತ್ತದೆ. ಹೆಚ್ಚಿಗೆ ಯೋಚನೆ ಮಾಡತಕ್ಕ ಕಾಲವಲ್ಲ. ಯೋಚನೆಗೆ ವಿರಾಮ ಸಿಕ್ಕಿದಹಾಗಾಯಿತು. ಮುಖ್ಯಮಂತ್ರಿಗಳ ಭಾಷಣ, ಆಮೇಲೆ ವಿಚಕ್ಷಣೆಯಿಂದ ಮತ್ತು ದೂರದೃಷ್ಟಿಯಿಂದ ನಮ್ಮ ಕಾಂಗ್ರೆಸ್ ಅಧ್ಯಕ್ಷರು ಕೊಟ್ಟಿರತಕ್ಕ ಹೇಳಿಕೆ, ಇವತ್ತಿನ ದಿವಸ ಪತ್ರಿಕೆಯಲ್ಲಿ ನೋಡಿದಹಾಗೆ ರಾಷ್ಟ್ರದ ನಾಯಕರು ಒಂದು ಕಮಿಟಿ ಮಾಡಿ ಅಲ್ಲಿ ಮೈಸೂರು ಸೇರಿದ ಕರ್ನಾಟಕವಾಗಬೇಕು ಎನ್ನುವ ತೀರ್ಮಾನವನ್ನು ತೆಗೆದುಕೊಂಡಿರುವುದು, ಇವೆಲ್ಲವನ್ನೂ ನೋಡಿದ ಮೇಲೆ, ನಿಜವಾಗಿಯೂ, ಇಷ್ಟು ಚರ್ಚೆಗೆ ಮತ್ತು ಇಷ್ಟು ತೀವ್ರಕರವಾದ ಯೋಚನೆಗೆ ಅವಕಾಶವೇ ಇಲ್ಲ. ಆದ್ದರಿಂದ ಇನ್ನಾವ ಯೋಚನೆಗೂ ಅವಕಾಶವಿಲ್ಲ. ಮಾನ್ಯ ಮುಖ್ಯಮಂತ್ರಿಗಳ ಮತ್ತು ಅಧ್ಯಕ್ಷರ ಅಭಿಪ್ರಾಯವನ್ನು ಸರ್ವಾನುಮತದಿಂದ ಸ್ವಾಗತಿಸುತ್ತೇನೆ. ಈ ಕಾರ್ಯದಲ್ಲಿ ಅಧ್ಯಕ್ಷರು ಮತ್ತು ಮುಖ್ಯ ಮಂತ್ರಿಗಳು ಒಂದಾಗಿ ಒಂದು ಅಭಿಪ್ರಾಯಕ್ಕೆ ಬಂದಿರುವುದು ನಿಜವಾದ ಘಟನೆ. ಇದು ಬಹುದೂರ ನಮ್ಮನ್ನು ತೆಗೆದುಕೊಂಡು ಹೋಗುತ್ತದೆ ಎನ್ನುವ ನಂಬಿಕೆ ಇದೆ. ನಿಜವಾಗಿ ಮುಂದಿನ ಕರ್ಣಾಟಕದಲ್ಲಿ ಯಾವುದೇ ಅಕಸ್ಮಾತ್ತಾಗಿ ಬರುವ ಘಟನೆಗಳಿಗೆ ಇದು ಎಡೆ ಇಲ್ಲದಹಾಗೆ ಮಾಡಿದೆ. ಈಗ ದುರಂತ ಬಂದಿದೆ ಎಂದು ಹೇಳುತ್ತಾರೆ. ಶ್ರೀ ಕೆ. ವಿ ಪುಟ್ಟಪ್ಪನವರು ದುರಂತ ಕರ್ಣ ಎಂದು ಹೇಳುವಾಗ 'ದುರಂತ ಎಲ್ಲಿದೆ? ಕರ್ಣನ ಹುಟ್ಟಿನಲ್ಲಿಲ್ಲ. ಕರ್ಣನ ಸಾವಿನಲ್ಲಿಲ್ಲ. ಆದರೆ ಕರ್ಣನ ಹುಟ್ಟು ಸಾವುಗಳನ್ನು ನೋಡಿ, ಮಿಲಮಿಲನೆ ಮರುಗುವ ನಮಗೆ ದುರಂತ ಭಾಸವಾಗುತ್ತದೆ' ಎಂದು ಹೇಳಿದ್ದಾರೆ. ಕರ್ನಾಟಕದಲ್ಲಿ ದುರಂತ ಮೈಸೂರಿನವರಿಗೂ ಇಲ್ಲ, ಕರ್ನಾಟಕದವರಿಗೂ ಇಲ್ಲ. ಕನ್ನಡ ಭಾಷೆ ಆಡುವ ಒಂದೇ ಜನಬೇಕು, ಬೇಡ ಎನ್ನುವ ಗೊಂದಲಕ್ಕೆ ಸಿಕ್ಕಿರುವ ಜನರನ್ನು ನಾಳೆ ನಮ್ಮ ಪೀಳಿಗೆ ನೋಡುತ್ತಾರೆ. ಅದರಲ್ಲಿದೆ ದುರಂತ. ಇದಕ್ಕೆ ಎಡೆ ಕೊಡಬಾರದೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

*ಶ್ರೀಮತಿ ಬಿ. ಎಲ್. ಸುಬ್ಬಮ್ಮ (ಚಿಕ್ಕಮಗಳೂರು-ಮೂಡಿಗೆರೆ)—ಸ್ವಾಮಿ, ನಾನು ಇವತ್ತು ಪ್ರಾಂತಗಳ ಪುನರ್ವಿಂಗಡಣಾ ವಿಷಯದಲ್ಲಿ ಅದರಲ್ಲೂ ಕರ್ನಾಟಕ ವಿಷಯದಲ್ಲಿ ಮಾತನಾಡುವುದಕ್ಕೆ ನಿಂತಾಗ ನನ್ನ ಮನಸ್ಸಿನಲ್ಲಿ ಹಲವಾರು ಭಾವನೆಗಳು ಬರುತ್ತಿವೆ. ಮೊದಲು ಕರ್ನಾಟಕ ಪ್ರಾಂತದ ವಿಚಾರದಲ್ಲಿ ನಮ್ಮಲ್ಲಿ ಭಿನ್ನಾಭಿಪ್ರಾಯ ಬಂದುದು ಎಲ್ಲರಿಗೂ ಗೊತ್ತೇ ಇದೆ. ಮಾನ್ಯ ಕಾಂಗ್ರೆಸ್ ಅಧ್ಯಕ್ಷರು ನಮ್ಮ ಮೈಸೂರು ದೇಶದಲ್ಲಿ ಪ್ರವಾಸ ಮಾಡಿದಾಗ ನಮ್ಮ ಜನಗಳ ಮನೋಭಾವ ಹೇಗಿದೆ ಎನ್ನುವುದನ್ನು ಅವರು ತಿಳಿದುಕೊಂಡಿದ್ದಾರೆ. ಆದರೆ ಅವರು ತಿಳಿದ ವಿಷಯಗಳನ್ನು ನಿಜವಾಗಿಯೂ ದೇಶದಲ್ಲಿ ಅಥವಾ ಕೇಂದ್ರದಲ್ಲಿ ನಮ್ಮ ಭಾರತ ಮಹಾ ಪ್ರಧಾನಿ ಜವಹರಲಾಲ್ ನೆಹರೂ ಅವರಿಗೂ ಮತ್ತು ದೇಶದ ಎಲ್ಲಾ ಜನಗಳಿಗೂ ಮುಟ್ಟುವ ರೀತಿಯಲ್ಲಿ ಪ್ರಚಾರ ಮಾಡತಕ್ಕ ದೇಶದ ಕಣ್ಣು, ಕಿವಿ, ಮೂಗು ಎಂದು ಯಾವ ಪತ್ರಿಕೆಗಳನ್ನು ಕರೆಯುತ್ತೇವೋ ಅವು ಮೈಸೂರು ಸೇರುವುದು ಬೇಡ ಎನ್ನುವ ವಿಷಯದಲ್ಲಿ ಹೆಚ್ಚಿಗೆ ಪ್ರಾಶಸ್ತ್ಯ ಕೊಡಲಿಲ್ಲ ಎಂಬುದು ತುಂಬ ವಿಷಾದಕರವಾದ ವಿಷಯ. ಒಳ್ಳೆಯದಾಗಲಿ, ಕೆಟ್ಟದ್ದಾಗಲಿ, ದೇಶದ ಜನಗಳ ಮುಂದೆ ಅವುಗಳನ್ನು ಇಡುವುದು ಪತ್ರಿಕೆಗಳ ಕರ್ತವ್ಯ. ಪತ್ರಿಕೆಗಳು ಅಂತಹ ಕರ್ತವ್ಯವನ್ನು ಮಾಡಲಲ್ಲ ಎಂಬುದನ್ನು ವಿಷಾದದಿಂದ ಹೇಳಬೇಕಾಗಿದೆ. ನಾನು ಮಾತನಾಡುವಾಗ ಮೊದಲಿನಿಂದಲೂ ಭಾಷಾವಾರು ತತ್ವಕ್ಕೆ ವಿರೋಧಿ ಎನ್ನುವುದು ಅಧ್ಯಕ್ಷರಿಗೂ ಗೊತ್ತಿದೆ. ಸಭಿಕರಿಗೂ ಗೊತ್ತಿದೆ. ಆದರೆ ಈಗ ಭಿನ್ನಾಭಿಪ್ರಾಯ ಇರುವುದನ್ನು ಅರಿತಮೇಲೆ ನಮ್ಮ ಕೇಂದ್ರದವರ, ಶಾಸನ ಸಭೆಗಳ ಅಭಿಪ್ರಾಯ ಮತ್ತು ಆಯಾ ಪ್ರಾಂತದ M. P. C. C. ಅಭಿಪ್ರಾಯವನ್ನು ತಿಳಿದು ಕೇಂದ್ರಕ್ಕೆ ತಿಳಿಸಬೇಕು ಎಂದು ಒಂದು ವಿಷಯವನ್ನು ಯೋಚನೆಮಾಡಿದಂತೆ ಕಾಣುತ್ತದೆ. ಅದರಂತೆ ನಮ್ಮ ಶಾಸನಸಭೆಯವರು ನಮ್ಮ ಅಭಿಪ್ರಾಯಗಳನ್ನು ಸಂಗ್ರಹಿಸುವುದಕ್ಕೆ ಇಲ್ಲಿ ಕರೆದಿದ್ದಾರೆ. ಇಂತಹ

ಸಂದರ್ಭದಲ್ಲಿ ನಾವು ಇನ್ನು ಈ ವಿಷಯಬೇಕು, ಬೇಡ ಎನ್ನುವ ಪ್ರಶ್ನೆಯನ್ನು ಇಲ್ಲಿ ಯೋಚನೆಮಾಡುತ್ತಿದ್ದೇವೆ. ಈ ಸಮಯದಲ್ಲಿ ಚರ್ಚೆಮಾಡಿ ನಮ್ಮ ಅಭಿಪ್ರಾಯ ಗಳನ್ನು ತಿಳಿಸುವುದಕ್ಕೆ ಬದಲು ಅವರ ಅಭಿಪ್ರಾಯ ವನ್ನು ಒಪ್ಪಿಕೊಳ್ಳಬೇಕು, ಮಾತನಾಡಬಾರದು ಎಂದು directive ಅಲ್ಲಿಂದ ಬಂದಿರುವುದನ್ನು ನೋಡಿದರೆ ಇದು ಪ್ರಜಾಪ್ರಭುತ್ವವೋ ಅಥವಾ ಸರ್ವಾಧಿ ಕಾರವೋ ನನಗೆ ಅರ್ಥವಾಗುವುದಿಲ್ಲ. ನಮ್ಮ ಸಭೆಯ ಮಹಾನಾಯಕರು ಮಾತನಾಡಿ ಅವರ ಅಭಿಪ್ರಾಯ ವನ್ನು ಹೇಳಿದ್ದಾರೆ. ಅವರು ವೈಯಕ್ತಿಕ ಅಭಿಪ್ರಾಯ ಎಂದು ಹೇಳಿಕೊಂಡು ಬಂದಿದ್ದಾರೆ. ಮೈಸೂರು ದೇಶದ ಅಭಿಪ್ರಾಯ ಅಥವಾ ಶಾಸನಸಭೆಯ ಅಭಿ ಪ್ರಾಯ ಎಂದು ಹೇಳಿಕೊಂಡು ಬಂದಿಲ್ಲ. ಅದು ಪ್ರಜಾಪ್ರಭುತ್ವ ನೀತಿಗೆ ವಿರುದ್ಧವಾದುದು. ಹಾಗೆ ಹೋದರೆ ಕೇಂದ್ರದವರಿಗೆ ಸರ್ವಾಧಿಕಾರವಿದೆಯೆಂದು ಒಪ್ಪಿಕೊಳ್ಳಲೇಬೇಕು. ಆ ನಿಯಮವನ್ನು ಏತಕ್ಕೆ ತರ ಬೇಕಾಗಿತ್ತು? ಶಾಸನಸಭೆಯನ್ನು ಕರೆದು ಬಿಟ್ಟು ಈಗ ಈ ರೀತಿ ಮಾಡಿರುವುದು ನಿಜವಾಗಿಯೂ ಜವಾ ಬ್ದಾರಿಯುಳ್ಳ ಶಾಸನಸಭಾ ಸದಸ್ಯರಿಗೆ ಗೌರವವನ್ನು ತರತಕ್ಕುದೇ ಎಂದು ಯೋಚನೆಮಾಡಬೇಕು.

ಶ್ರೀ ಬಿ. ಹುಚ್ಚೇಗೌಡ (ತುರುವೇಕೆರೆ).—On a point of order. ಪಾರ್ಟಿಯಲ್ಲಿ ಆಗಿರುವ ವಿಚಾರ ವನ್ನು ಇಲ್ಲಿ ಹೇಳಬಹುದೇ?

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ನಾನು ಭಾಷಾ ವಾರು ತತ್ವದಮೇಲೆ ಪ್ರಾಂತಗಳ ಪುನರ್ವಿಂಗಡಣೆ ಮಾಡುವುದನ್ನು ಮೊದಲಿನಿಂದಲೂ ವಿರೋಧಿಸಿದ್ದೇನೆ. ಆಸೇತು ಹಿಮಾಚಲ ಪರ್ಯಂತದವರೆಗೂ ಭಾರತ ದೇಶ ಯಾವತ್ತೂ ಸ್ವತಂತ್ರವಾಗಿರಲಿಲ್ಲ. ಇವತ್ತು ನಮ್ಮ ದೇಶದಲ್ಲಿ ಪಂಡಿತ ನೆಹರೂರವರಂಥ ಆದರ್ಶ ಮಹನೀಯರು ಇರುವುದರಿಂದ ಮತ್ತು ಭಗವಂತನ ಅನುಗ್ರಹದಿಂದ ನಾವು ಭಾರತದ ಸ್ವತಂತ್ರ ಪ್ರಜೆಗಳಾ ಗಿದ್ದೇವೆ. ಇವತ್ತು ನಮ್ಮಲ್ಲಿರುವ ಭಾಷೆ, ಮತ್ತು ಜಾತಿ, ಪ್ರಾಂತ್ಯವ್ಯಾಮೋಹ, ನಮ್ಮನ್ನು ತಿನ್ನುತ್ತಿದೆ ಎಂದು ಖಂಡಿತವಾಗಿ ಹೇಳಬೇಕು. ನಾನು ಸ್ವಾರ್ಥ ದಿಂದ ಮಾತನಾಡತಕ್ಕವಳಲ್ಲ. ನಿಜವಾಗಿ ಭಾರತದ ಹಿತದೃಷ್ಟಿಯಿಂದ ಈ ದೊಡ್ಡ ಸಭೆಯಲ್ಲಿ ಮಾತನಾಡು ತ್ತಿದ್ದೇನೆ ಎಂದು ನಿಜವಾಗಿ ಹೇಳುವ ನೈತಿಕ ಬಲ ನನ್ನಲ್ಲಿದೆ. ನಮ್ಮ ಜನಗಳು ಸ್ವಾರ್ಥಕ್ಕೆ ಸಿಕ್ಕಿ ಅಧಿ ಕಾರ ಲಾಲಸೆಗೆ ಮತ್ತು ವ್ಯಾಮೋಹಕ್ಕೆ ಗುರಿಯಾಗಿ, ದೇಶದ ಹಿತವನ್ನು ಲಕ್ಷಿಸುತ್ತಾ ಇಲ್ಲ ಎಂದು ವ್ಯಸನ ದಿಂದ ಹೇಳಬೇಕಾಗಿದೆ. ಇದು ಕರ್ಣಾಟಕದ ಪ್ರಶ್ನೆ ಯಲ್ಲ, ಇಡೀ ಭಾರತಕ್ಕೇ ಅನ್ವಯಿಸುವ ಪ್ರಶ್ನೆ ಎಂದು ಮಾನ್ಯ ಸದಸ್ಯರು ಉತ್ತರ ಹೇಳಬಹುದು. ಭಾರತದ ಎಲ್ಲಾ ಪ್ರಜೆಗಳಿಗೂ ನನ್ನ ಅಭಿಪ್ರಾಯ ವನ್ನು ಹೇಳುವುದಕ್ಕೆ ನನಗೆ ಹಕ್ಕು ಇದೆ. ಅದರಲ್ಲೂ ಶಾಸನಸಭಾ ಸದಸ್ಯಳಾದ ನನಗೆ ಹಕ್ಕು ಇದ್ದೇ ಇದೆ ಎಂದು ತಿಳಿಸಬೇಕಾಗಿದೆ. ಭಾಷಾವಾರು ಪ್ರಾಂತದ ವಿಷಯದಲ್ಲಿ ಮಾತನಾಡುತ್ತಾ ನನ್ನ ಮಾನ್ಯ ಸ್ನೇಹಿತರು, ಕರ್ಣಾಟಕವನ್ನು ಕಟ್ಟಿದರೆ ದೊಡ್ಡ ರಾಷ್ಟ್ರವಾಗುತ್ತದೆ, 29 ಸಾವಿರ ಚದರ ಮೈಲಿ ಇರುವುದು 80 ಸಾವಿರ ಚದರ ಮೈಲಿಯ ವಿಶಾಲ ಕರ್ಣಾಟಕದಲ್ಲಿ ನಾವುಗಳೆಲ್ಲರೂ ಓಡಾಡಬಹುದು ಎಂದು ಹೇಳಿದರು. ಅಲ್ಲಿ ವನಸಂಪತ್ತು, ಖನಿಜ ಸಂಪತ್ತು ಮತ್ತು ಮಾರ್ಗ ಸಂಪತ್ತು ಇದೆ, ದೊಡ್ಡ ದೊಡ್ಡ ಜಲಾಶಯಗಳನ್ನು ನಿರ್ಮಾಣಮಾಡಬಹುದು, ಅಲ್ಲಿ ಮಲೆನಾಡು ಇದೆ ಎನ್ನುತ್ತಾರೆ. ಯಾರಿಗೆ ಇದರ ವ್ಯಾಮೋಹ ಎಂದರೆ ಕಣ್ಣು ಹಳದಿಯಾಗಿರುವವರಿಗೆ ಪ್ರಪಂಚವೆಲ್ಲಾ ಹಸುರಾಗಿದ್ದರೂ ಹಳದಿಯಾಗಿ ಕಾಣು ತ್ತದೆ. ಮಲೆನಾಡಿನ ವಿಷಯ ಹೇಳುವುದನ್ನು ನೋಡಿ ತುಂಬ ಆಶ್ಚರ್ಯವಾಯಿತು. ಮಾನ್ಯ ಅಧ್ಯಕ್ಷರಿಗೆ ಗೊತ್ತಿದೆ. ಮೂರು ಡಿಸ್ಟ್ರಿಕ್ಟ್ ಇರುವ ಮಲೆ ನಾಡನ್ನು ಸರ್ ಎಂ. ವಿಶ್ವೇಶ್ವರಯ್ಯ, ಸರ್ ಮಿರ್ಜಾ ಎಂ. ಇಸ್ಮೇಲ್, ಶ್ರೀ ಮಾಧವರಾವ್, ಶ್ರೀ ರಂಗಾ ಚಾರ್ಲು ಶ್ರೀ ಶೇಷಾದ್ರಿ ಅಯ್ಯರ್, ಮುಂತಾದವರ ದಿವಾನರಾಗಿದ್ದಾಗ ಎಷ್ಟು ಅಭಿವೃದ್ಧಿಗೆ ತಂದರು? ಎರಡು ಮಲೆನಾಡು ಡಿಸ್ಟ್ರಿಕ್ಟ್ ಪ್ರಾಂತ್ಯದ ಆಡಳಿತ ವನ್ನು ನೋಡಿಕೊಂಡು ಬಂದರೆ ಏನು ಉದ್ಧಾರ ವಾಗಿದೆ ಎಂಬುದನ್ನು ತಾವೇ ಹೇಳಿ. ಇನ್ನು ಎಂಟು ಡಿಸ್ಟ್ರಿಕ್ಟಿನ ದೊಡ್ಡ ಮಲೆನಾಡು ಪ್ರಾಂತ ನಿರ್ಮಾಣ ಮಾಡಿ ಉದ್ಧಾರ ಮಾಡುತ್ತೇವೆ ಎಂದು ಹೇಳುವುದು ನಿಜವೇ ಎಂಬುದನ್ನು ತಾವೇ ಯೋಚನೆಮಾಡಿ. ಅದು ಕಾಟಾಚಾರಕ್ಕೆ ಹೇಳತಕ್ಕ ಮಾತೇ ಹೊರತು ಮೂರು ಡಿಸ್ಟ್ರಿಕ್ಟ್ ಉದ್ಧಾರ ಮಾಡದೇ ಇರುವವರು ಎಂಟು ಡಿಸ್ಟ್ರಿಕ್ಟು ಉದ್ಧಾರ ಮಾಡುತ್ತಾರೆಯೇ ಎಂಬುದನ್ನು ತಾವೇ ಯೋಚನೆಮಾಡಿ. ಮಲೆನಾಡಿನಲ್ಲಿ ತಿರು ಗಾಡುವುದಕ್ಕೇ ರಸ್ತೆಗಳಿಲ್ಲ.

ಅಧ್ಯಕ್ಷರು.—ರಸ್ತೆ ಮಾಡಿಸುವವರು ಶ್ರೀ ಚನ್ನಯ್ಯ ನವರು.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ಮಲೆನಾಡಿಗೆ ಹೋದರೆ ಕಷ್ಟ ಗೊತ್ತಾಗುತ್ತದೆ. ಮಾರ್ಗ ಸಂಚಾ ರಕ್ಕೆ ರಸ್ತೆಯೇ ಇಲ್ಲ. ಗರ್ಭಿಣಿ ಹೆಂಗಸರಿಗೆ ಹೆರುವು ದಕ್ಕೆ ಒಂದು ಆಸ್ಪತ್ರೆಯೂ ಇಲ್ಲ. ನಾನು ಇದನ್ನು ಒಂದು ಸ್ವಾರ್ಥ ದೃಷ್ಟಿಯಿಂದ ಹೇಳುತ್ತಾ ಇಲ್ಲ. ಮೊದಲು ತನ್ನ ಪ್ರಾಣವನ್ನು ಇಟ್ಟುಕೊಳ್ಳುವುದಕ್ಕೆ ಶಕ್ತಿ ಇಲ್ಲದೆ ಇರುವವರೇ, ಊರನ್ನು ಉದ್ಧಾರ ಮಾಡುತ್ತೇವೆ ಎಂದು ಹೇಳುವುದು ನಿಜವಾಗಿ ನ್ಯಾಯವೇ? ಕರ್ಣಾಟಕದ ಮಾನ್ಯ ಸ್ನೇಹಿತರಿಗೆ ಒಂದು ಕೆಟ್ಟ ಮಾತು ಹೇಳಬೇಕಲ್ಲಾ ಎಂದು ವ್ಯಸನವಾಗುತ್ತದೆ. ಹೀಗೆ ಹೇಳಬೇಕಾದುದು ಅನಿವಾರ್ಯ. ನಾನು ಜವಾಬ್ದಾರಿಯನ್ನು ಅರಿತು ಹೇಳುತ್ತೇನೆ ಎಂಬುದನ್ನು ಅವರು ಚೆನ್ನಾಗಿ ಅರಿತುಕೊಳ್ಳಬೇಕು. ಅದರ ಸ್ಥಿತಿಗತಿಗಳು ನಮ್ಮ ಮಟ್ಟಕ್ಕೆ ಬರಬೇಕು, ಅವರು ವಿದ್ಯಾವಂತರಾಗಬೇಕು, ಮತ್ತು ದಕ್ಷರಾದ ಪ್ರಜೆಗಳಾಗಬೇಕು ಎಂಬ ಆಶೆ ಇದೆ. ಬೇರೆ ಕರ್ಣಾಟಕವೇ ಹೀಗಿರಬೇಕೆಂಬ ಆಶೆ ಇಲ್ಲ. ಕರ್ಣಾಟಕದ ಮೇಲೆ ನನಗೆ ಎಷ್ಟು ಅಭಿಮಾನ ಇದೆಯೋ ಅಷ್ಟೇ ಅಭಿಮಾನ ಸೌರಾಷ್ಟ್ರದ ಮೇಲೆಯೂ ಇದೆ. ಇದನ್ನು ಸ್ವಾರ್ಥದ ಮನೋಭಾವದಿಂದ ಹೇಳುತ್ತೇನೆ ಎಂದು ಯಾರೂ ತಿಳಿದುಕೊಳ್ಳಬಾರದು. "ಧಾರ್ ಕಮಿಷನ್ನಿನವರು ತಮ್ಮ ವರದಿಯನ್ನು ಒಪ್ಪಿಸಿದ ಕೂಡಲೇ ಭಾಷಾವಾರು ಪ್ರಾಂತಗಳಿಗೆ ಸಂಬಂಧಿಸಿದ ಪ್ರಶ್ನೆಯನ್ನು ಪರಿಶೀಲಿಸುವುದಕ್ಕೂ ಮತ್ತು ಧಾರ್ ಕಮಿಷನ್ನಿನವರ ವರದಿಯ ಮೇರೆಗೆ ಸ್ಥಿತಿಗತಿಗಳನ್ನು ಮತ್ತು ಸ್ವಾತಂತ್ರ್ಯವನ್ನೂ ಪಡೆದು ದರಿಂದೀಚೆಗೆ ಹುಟ್ಟಿದ ಹೊಸಸಮಸ್ಯೆಗಳನ್ನು ಪುನ ರ್ವಿಮರ್ಶಿಸುವುದಕ್ಕೂ ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ಸಿನವರು 1948ನೆಯ ಇಸವಿ ಡಿಸೆಂಬರ್ ತಿಂಗಳಲ್ಲಿ ನಡೆದ ಜೈಪುರದ ಅಧಿವೇಶನದಲ್ಲ ಒಂದು ಕಮಿಟಿಯನ್ನು ನೇಮಿಸಿದರು. ಜೆ. ವಿ. ಪಿ. ಕಮಿಟಿ ಎಂದು ಕರೆಯಲ್ಪಟ್ಟ ಆ ಕಮಿಟಿಯು ಶ್ರೀ ಜವಹರ ಲಾಲ್ ನೆಹರೂ, ಸರ್ದಾರ್ ವಲ್ಲಭಾಯ್ ಪಟೇಲ್ ಮತ್ತು ಡಾಕ್ಟರ್ ಪಟ್ಟಾಭಿ ಸೀತಾರಾಮಯ್ಯ ಇವರು ಗಳನ್ನು ಒಳಗೊಂಡಿದ್ದಿತು, ಮತ್ತು ಇದು ಭಾಷಾ ವಾರು ನೀತಿಗೆ ವಿರುದ್ಧವಾಗಿ ಅಭಿಪ್ರಾಯಪಟ್ಟ ಮೊದಲನೆಯ ಕಾಂಗ್ರೆಸ್ ಕಮಿಟಿಯಾಗಿದೆ." ಅವರು ಹೀಗೆ ಭಾಷಾವಾರು ತತ್ವಕ್ಕೆ ಮೊದಲನೆಯದಾಗಿ

(ಶ್ರೀಮತಿ ಬಿ. ಎಲ್. ಸುಬ್ಬಮ್ಮ.)

ವಿರೋಧ ಮಾಡಿದ್ದಾರೆ. ಪಂಡಿತ ಜವಹರಲಾಲ್ ನೆಹರೂ ಅವರು ಒಂದು ನಿರ್ಣಯವನ್ನು ಲೋಕ ಸಭೆಯಲ್ಲಿ ತಂದಾಗ "ನಾವು ಭಾರತದಲ್ಲಿ ಒಗ್ಗಟ್ಟಿನ ಮನೋಭಾವನೆಯನ್ನು ಉಂಟು ಮಾಡಲು ಪ್ರಾಮುಖ್ಯತೆಯನ್ನು ಕೊಡಬೇಕಾಗಿದೆ. ಮತ್ತು ಆ ಒಗ್ಗಟ್ಟಿಗೆ ಪ್ರತಿಬಂಧಕವಾಗಿ ಬರುವ ಯಾವ ವಿಷಯವನ್ನಾದರೂ ಕೊಂಚಮಟ್ಟಿಗೆ ತಡ ಮಾಡಬಹುದು." ಎಂದು ಒತ್ತಿ ಹೇಳಿದ್ದಾರೆ. ಇದೂ ಅಲ್ಲದೆ ಪ್ರಪಂಚದ ರಾಷ್ಟ್ರಗಳು ಅತ್ಯಂತ ವಿಷಮ ಪರಿಸ್ಥಿತಿಯಲ್ಲಿರುವಾಗ, ವಾಸ್ತವಿಕವಲ್ಲದ ವಿಚಾರಗಳಿಗಾಗಿ ಅಥವಾ ಭಾಷಾವಾರು ಭಾಗಕ್ಕಾಗಿ ಭಾರತವನ್ನೆಲ್ಲಾ ಅವ್ಯವಸ್ಥಿತವಾಗಿ ತಲೆಕೆಳಗು ಮಾಡುವುದು ತುಂಬ ಅವಿವೇಕಯುತವಾದುದು" ಎಂದು ಹೇಳಿದ್ದಾರೆ. ಅವುಗಳನ್ನೆಲ್ಲಾ ನಾವು ಸ್ವಲ್ಪ ಯೋಚನೆಮಾಡಬೇಕು. ಅದೂ ಅಲ್ಲದೆ ನಮ್ಮ ಮೈಸೂರು ಎಲ್ಲಾ ಜನಗಳಿಗೂ ಆಶ್ರಯ ಕೊಟ್ಟಿದೆ. ಮೈಸೂರು ಆಡಳಿತ ಮಾಡಿದ ಬಹುಮಂದಿ ದಿವಾನರು ಮೈಸೂರಿನ ಹೊರಗಡೆಯಿಂದ ಬಂದವರು. ಶ್ರೀ ಕೆ. ಸಿ. ರೆಡ್ಡಿಯವರೂ, ಮತ್ತು ಶ್ರೀ ಕೆ. ಹನುಮಂತಯ್ಯನವರೂ ಅಧಿಕಾರಕ್ಕೆ ಬಂದರೆ ಮೈಸೂರು ಒಕ್ಕಲಿಗರ ರಾಜ್ಯವಾಯಿತೇ ? ಬುದ್ಧಿವಂತರು ಯಾರು ಇದ್ದಾರೋ ಅವರೆಲ್ಲರಿಗೂ ರಾಜ್ಯವಾಳುವುದಕ್ಕೆ ಸಹಾಯ ಮಾಡಲು ಹಕ್ಕು ಇದೆ. ಮೈಸೂರನ್ನು ಆಳಲು ಬೇಕಾದ ವಿಷಯಗಳನ್ನು ಹೇಳುವುದಕ್ಕೆ ಸಮಸ್ತ ಪ್ರಜೆಗಳಿಗೂ ಹಕ್ಕು ಇದೆ. ಪರದೇಶಗಳಿಂದ ಬಂದು ಆಡಳಿತದಲ್ಲಿ ಮಾತ್ರವಲ್ಲ, ಎಂತಹ ಒಂದು ದೊಡ್ಡ ಕೆಲಸ ಮಾಡುವುದರಲ್ಲಿಯಾಗಲಿ ಸಮಯೋಚಿತ ಸಲಹೆಯನ್ನು ಕೊಟ್ಟರೆ, ಅದನ್ನು ಶಿರಸಾವಹಿಸಿ ಒಪ್ಪಿಕೊಳ್ಳುವ ವಿಶಾಲ ಮನೋಭಾವದ ಜನರು ನಾವು. ಸ್ವಾಮಿ, ದೇಶದಲ್ಲಿ ಈಗ ಏನಾಗಿದೆ ಎಂದರೆ, "ಭಾಷಾಭಿಮಾನವುಳ್ಳ ಜನಾಂಗವಾಗಿರುವುದು ಪ್ರಾಮುಖ್ಯವಾದ ಅಥವಾ ಏಕಮಾತ್ರವಾದ ಆಧಾರವಾಗಿದ್ದರೆ, ಆಗ ರಾಜ್ಯ ಸರ್ಕಾರಗಳವರು ಅದರಿಂದ ತಮಗಾಗುವ ಪರಿಣಾಮಗಳನ್ನು ಗಮನಿಸುತ್ತಾರೆ; ಮತ್ತು ಹೊಸದಾಗಿ ಏರ್ಪಟ್ಟ ವಸಾಹತುಗಳಲ್ಲಿ ನಾನಾ ಭಾಷೆಗಳನ್ನು ಆಡುವ ತಂಡಗಳಿಗೆ ಸೇರಿದ ಜನಗಳ ನೆಲಸುವಿಕೆಯನ್ನು ನಿಲ್ಲಿಸುವುದಕ್ಕೆ ಕಾರ್ಯಕ್ರಮಗಳನ್ನು ಕೈಗೊಳ್ಳುತ್ತಾರೆ. ಒಂದುವೇಳೆ ಆ ಪ್ರದೇಶಗಳಲ್ಲಿ ಇರುವುದೇ ಆದರೆ, ಆಗ ಅಂಥ ಜನಗಳು ಅಲ್ಲಿ ಬಂದು ನೆಲೆಸುವುದಕ್ಕೆ ಸರ್ವಥಾ ಅವಕಾಶವನ್ನು ಕೊಡಗೊಡಿಸುವುದೇ ಇಲ್ಲ." ಇದನ್ನು ತಾವು ಯೋಚನೆಮಾಡಬೇಕು. ಈಗತಾನೆ ಭಾಷಣಮಾಡಿದ ಶ್ರೀ ಪಳನಿಯಪ್ಪನ್‌ರವರು ಇನ್ನೊಬ್ಬರು, ಈ ಸಭೆಯಲ್ಲಿ ಬಂದು ಸದಸ್ಯರಾಗಲು ಹಕ್ಕಿಲ್ಲ, ಆ ರೀತಿ ಅವಕಾಶ ಕೊಡಕೂಡದು ಎಂದು ಹೇಳಿದ್ದಾರೆ. ಇದು ನ್ಯಾಯವೇ ಎಂಬುದನ್ನು ಯೋಚನೆಮಾಡಬೇಕು. ಏಕೆಂದರೆ, ಆ ರೀತಿ ಮಾಡಿದರೆ ವಿಶಾಲ ಮನೋಭಾವದಿಂದ ಓಟರುಗಳು ಚುನಾಯಿಸಿ ಇನ್ನೊಬ್ಬರು ಬಂದು ಕೆಲಸ ಮಾಡುವುದಕ್ಕೆ ಸಾಧ್ಯವಿದೆಯೇ ಎಂಬುದನ್ನು ಯೋಚನೆ ಮಾಡಬೇಕಾಗಿದೆ. ನಾನು ಹೆಚ್ಚಿಗೆ ಮಲೆನಾಡಿನಿಂದ ಬಂದವಳು ಎಂಬುದು ಗೊತ್ತಿದೆ. ಚಿಕ್ಕಮಗಳೂರು—ಹಾಸನದ ಕಾಫಿ ಎಸ್ಟೇಟುಗಳಲ್ಲಿ ಸುಮಾರು 60 ಸಾವಿರ ಜನರು ಮದರಾಸಿನಿಂದ ಬಂದ ಕೂಲಿಯವರು ಇದ್ದಾರೆ. ಇನ್ನು South Canaraದವರು ಬೇರೆ ಇದ್ದಾರೆ. ಅವರಿಗೆಲ್ಲಾ gate-pass ಕೊಡಬೇಕಾಗುತ್ತದೆ. ಮೈಸೂರಿಗೆ ಬಂದ ಹೊರಗಿನವರನ್ನು ಬಿಟ್ಟು, ನಮ್ಮ ಕೆಲಸಮಾಡಿಕೊಂಡು ಹೋಗುವುದಕ್ಕೆ ಸಾಧ್ಯವೇ ಎಂಬುದನ್ನು ಯೋಚನೆ ಮಾಡಬೇಕು. ಅಷ್ಟು ಜನಗಳನ್ನೂ ಹೊರಗೆ ಕಳುಹಿಸಬೇಕಾಗುತ್ತದೆ. ಹೀಗೆ ನಾನಾ ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ.

ಇನ್ನೊಂದು ವಿಷಯ. ಅದು ತಮಗೆ ನೋವು ಉಂಟುಮಾಡತಕ್ಕ ಪ್ರಶ್ನೆ, ಜಾತಿ ವಿಷಯ. ಮೈಸೂರು ದೇಶದಲ್ಲಿ ಸರ್. ಎಂ. ವಿಶ್ವೇಶ್ವರಯ್ಯನವರು, ಮತ್ತು ಸರ್ ಮಿರ್ಜಾ ಎಂ. ಇಸ್ಮೇಲ್‌ರವರು ದಿವಾನರಾಗಿರಲಿಲ್ಲವೇ ? ಬ್ರಾಹ್ಮಣರು ದಿವಾನರಾಗಿದ್ದಾಗ ಬ್ರಾಹ್ಮಣರು ಭಿಕ್ಷಾನ್ನ ಮಾಡುವುದು ತಪ್ಪಿತ್ತೇ ? ಸರ್ ಮಿರ್ಜಾ ಎಂ. ಇಸ್ಮೇಲ್‌ರವರು ದಿವಾನರಾಗಿದ್ದಾಗ ಮುಸ್ಲಿಮರು ಜಟಕಾಗಾಡಿ ಓಡಿಸುವುದು ತಪ್ಪಿತ್ತೇ ? ಅನಂತರ ಶ್ರೀ ಕೆ. ಸಿ. ರೆಡ್ಡಿಯವರು, ಮತ್ತು ಶ್ರೀ ಕೆ. ಹನುಮಂತಯ್ಯನವರು, ಒಕ್ಕಲಿಗರು ಆಡಳಿತ ನಡೆಸಿಕೊಂಡು ಬಂದಿದ್ದಾರೆ ಎಂಬುದನ್ನು ತಾವು ಸ್ವಲ್ಪ ಯೋಚನೆ ಮಾಡಬೇಕು. ಇಂತಹ ಸಣ್ಣ ಮನೋಭಾವನೆಗೆ ಹೋಗುವುದು ಸರಿಯಲ್ಲ. ದೇವರಮುಂದೆ ಸಾಕ್ಷಿ ಹೇಳುವ ಸಾಮರ್ಥ್ಯವಿದೆ. ಹೀಗಿರುವಾಗ ಬರೀ ಜಾತಿಯ ಆಧಾರದಮೇಲೆ ರಿಪೋರ್ಟ್ ಬರೆದಿರತಕ್ಕ ಫಜಲಾಲಿಯವರು ಒಕ್ಕಲಿಗರು ಶೇಕಡಾ ಇಷ್ಟು, ಲಿಂಗಾಯಿತರು ಶೇಕಡಾ ಇಷ್ಟು ಇದ್ದಾರೆ, ಎಂದು ಹೇಳಿರುವುದನ್ನು ಕೇಳಿ ನನ್ನ ಹೃದಯ ಕುದಿಯುತ್ತದೆ. ಅಣ್ಣ ತಮ್ಮಂದಿರಂತೆ ಬಾಳತಕ್ಕ ಮೈಸೂರು ದೇಶದಲ್ಲಿ ನಿಜವಾಗಿ ನಾನು ಚುನಾಯಿತಳಾಗಿ ಇಲ್ಲಿಗೆ ಬಂದಿದ್ದರೆ ಬರೀ ಒಕ್ಕಲಿಗರಿಂದ ಖಂಡಿತ ಚುನಾಯಿತಳಾಗಿ ಬಂದಿಲ್ಲ. ಲಿಂಗಾಯಿತರು, ಬ್ರಾಹ್ಮಣರು, ಮುಸಲ್ಮಾನರು, ಹರಿಜನರು, ಇವರುಗಳಿಂದ ಚುನಾಯಿತಳಾಗಿ ಬಂದಿದ್ದೇನೆ. ಬರೀ ಒಕ್ಕಲಿಗರಿಂದಲೇ ಚುನಾಯಿತಳಾಗಿ ಬಂದಿಲ್ಲ ಎಂದು ಹೇಳುವ ಶಕ್ತಿ ನನಗೆ ಇದೆ.

4-30 P. M.

ನಾವು ಸಮಸ್ತ ಜನರ ಪ್ರತಿನಿಧಿಗಳಾಗಿ ಮಾತನಾಡುವಾಗ ಬಹಳ ಜವಾಬ್ದಾರಿಯಿಂದ ಮಾತನಾಡಬೇಕೆಂದು ಅಧ್ಯಕ್ಷರು ತಿಳಿಸಿದ್ದಾರೆ. ನಾನು ಸಣ್ಣ ಮನೋಭಾವದಿಂದ ಮಾತನಾಡುವುದಿಲ್ಲವೆಂದು ವಿಜ್ಞಾಪನೆ ಮಾಡುತ್ತೇನೆ. ಶೇಕಡ ಇಷ್ಟು ಒಕ್ಕಲಿಗರಿದ್ದಾರೆ, ಲಿಂಗಾಯಿತರಿಗೆ ಹೆದರಿಕೆ ಎನ್ನುವುದು ನ್ಯಾಯವೇ ? ಬಹುಸಂಖ್ಯಾತ ಜನಾಂಗವಾಗಿರುವವರೇ ರಾಜ್ಯವನ್ನಾಳುವುದಕ್ಕಾಗುತ್ತದೆಯೆ ? ವಿಶಾಲ ಮನೋಭಾವ ಹೊಂದಿ, ದಕ್ಷನಾಗಿಯೂ ಬುದ್ಧಿವಂತನಾಗಿಯೂ ಇರುವವನು ರಾಜ್ಯವಾಳುತ್ತಾನೆ. ಹಾಗಿಲ್ಲದೆ ನನ್ನಂಥ ನೂರು ಜನರಿದ್ದರೂ ಕೂಡ ಆಳುವುದಕ್ಕಾಗುವುದಿಲ್ಲ. ಜಾತಿಯ ಆಧಾರದಮೇಲೆ ಒಂದು ವರ್ಷ ಕೊಡಬಹುದು, ಎರಡನೆಯ ವರ್ಷ ಅವನಿಗೇನಾಗುತ್ತದೆ ಎನ್ನುವುದು ನಮಗೇ ಗೊತ್ತಿದೆ. ಈ ಹೊತ್ತು ನಾನು ಈ ಸಭೆಗೆ ಸದಸ್ಯಳಾಗಿ ಬಂದಿರಬಹುದು, ನಮ್ಮೂರಿನ ಹೆಣ್ಣುಮಗಳೆಂಬ ಅಭಿಮಾನದಿಂದ ಚುನಾಯಿಸಿರಬಹುದು. ಆದರೆ ಎರಡನೆಯ ವರ್ಷ ಜಾತಿಯಮೇಲೆ ನಾನು ಮಾತನಾಡಿದರೆ ನಮ್ಮೂರಿನ ಜನ ನನಗೆ ಓಟು ಕೊಡುತ್ತಾರೆಯೆ ? ಹೀಗಿರುವಾಗ ಜಾತಿಯ ಪ್ರಶ್ನೆಯನ್ನೆತ್ತಿ ಇಲ್ಲದೇಯಿರುವ ಜಾತೀಯ ಮನೋಭಾವವನ್ನು ತಂದಿದ್ದಾರೆ. ಕರ್ನಾಟಕ ಬೇಡವೆನ್ನುವವರೆಲ್ಲ ಜಾತಿಯ ದೃಷ್ಟಿಯಿಂದ ಹೇಳುತ್ತಾರೆಯೆ ? ಈ ಮಾನ್ಯ ಸಭೆಯಲ್ಲಿ ಶ್ರೀಮಾನ್ ಸಿದ್ದಪ್ಪನವರು, ಪಟ್ಟಾಭಿರಾಮನ್‌ರವರು ಮುಂತಾದ ದೊಡ್ಡವರಿದ್ದಾರೆ. ಸಂಕುಚಿತ ಭಾವನೆಯಿದೆಯೆಂದು ಹೇಳುತ್ತಾರೋ ಏನೋ ಎಂದು ಅವರ ಮುಂದೆ ಮಾತನಾಡುವುದಕ್ಕೇ ನನಗೆ ಹೆದರಿಕೆ. ಆದರೂ ಈ ವಿಷಯಗಳನ್ನು ಮುಚ್ಚಿಡುವುದು ನ್ಯಾಯವಲ್ಲವೆಂದು ನನಗನಿಸುತ್ತದೆ. ನಮ್ಮ ಮನಸ್ಸಿನಲ್ಲಿರುವ

ಅಭಿಪ್ರಾಯಗಳನ್ನು ಮುಚ್ಚುಮರೆಯಿಲ್ಲದೆ ಸಮಾಲೋಚನೆ ಮಾಡಬೇಕೆಂದೆನಿಸುತ್ತದೆ. ಇದರಲ್ಲಿ ಏನಿದೆ ಎಂಬುದನ್ನು ಕೂಲಂಕಷವಾಗಿ ಯೋಚನೆ ಮಾಡಬೇಕು.

ಆಮೇಲೆ, ವೀರಶೈವರು ಮತಪ್ರಚಾರ ಮಾಡುತ್ತಾರೆಂದು ಹೇಳಿದರು. ನನಗೆ ಮನಸ್ಸಿಗೆ ಬಹಳ ವ್ಯಥೆಯಾಯಿತು. ರಾಮ, ರಾಮ !

ಕೆಲವು ಸದಸ್ಯರು.—ಶಿವ ಶಿವ ಅನ್ನಿ. (ನಗು !)

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ನಮ್ಮ ಪೂಜ್ಯ ಸಿದ್ಧಮ್ಮನವರು ಅವರ ಭಾಷಣದಲ್ಲಿ ಹೇಳಿದುದನ್ನು ಕೇಳಿದಾಗ ನನಗೆ ಬಹಳ ವ್ಯಸನವಾಯಿತು. ಈ ಪದ್ಧತಿ ಇದೆಯೆಂಬುದು ನನಗೆ ಗೊತ್ತಿಲ್ಲ. ಅವರು ಹಾಗೆ ಮಾಡುತ್ತಾರೆಂದು ಅನೇಕರು ಹೇಳುತ್ತಿದ್ದಾರೆ, ಸ್ವಾಮಿ. (ನಗು!) ನಮ್ಮೂರಿಂದ ಬಂದ ಕೆಲವರನ್ನು ನಾನು ಕೇಳಿದೆ. ಅಯ್ಯೋ ರಾಮ! ನಮ್ಮ ಹಿಂದೂ ಸಂಪ್ರದಾಯದಲ್ಲಿ ಹೀಗಿಲ್ಲವೆಂದು ನನ್ನ ಭಾವನೆ. ಹೊಸದುರ್ಗ, ಹೊಳಲಕೆರೆ, ಹಿರಿಯೂರು ಈ ತಾಲ್ಲೂಕುಗಳ ಮೂವತ್ತು ಗ್ರಾಮಗಳಲ್ಲಿ ಹೀಗೆ ಮತವನ್ನು ಬದಲಾಯಿಸಿದರೆಂದು ಹೇಳುತ್ತಾರೆ. ಇದು ನಿಜವೇ ಅಥವಾ ಇಲ್ಲವೇ ಎಂಬುದನ್ನು ಶ್ರೀ ಭೀಮಪ್ಪನಾಯಕರು ಹೇಳಬೇಕು. ಹೀಗಾಗಿದ್ದರೆ, ಇದು ಬಹಳ ಅನ್ಯಾಯ. ದಯಾನಂದ ಸರಸ್ವತಿಯವರು ಇಂಥ ಕಾರಣಕ್ಕಾಗಿ ತಮ್ಮ ಪ್ರಾಣಕೊಟ್ಟರು. ಮತಾಂತರಗೊಳಿಸುವ ಪದ್ಧತಿ ಮುಸಲ್ಮಾನರಲ್ಲಿದೆ, ಕ್ರಿಶ್ಚಿಯನ್ನರಲ್ಲಿದೆ ಎಂದು ಕೇಳಿದ್ದೇನೆ. ಇಂಥ ಪದ್ಧತಿ ನಮ್ಮಲ್ಲಿ ಬಾರದೇ ಇರುವಹಾಗೆ ಮಾಡಬೇಕು. ನಮ್ಮ ದೇಶದಲ್ಲಿರುವ ದೊಡ್ಡವರು ನೋಡಿಕೊಳ್ಳಬೇಕು. ಇಂಥ ಅನುಮಾನ ನಮ್ಮ ಜನರಲ್ಲಿ ಹೋಗಬೇಕು.

ಇನ್ನು ರಾಜಪ್ರಮುಖರ ಸಂಬಂಧವಾಗಿ ಕೆಲವು ವಿಷಯಗಳನ್ನು ಹೇಳಿದ್ದಾರೆ. ಗಂಡಭೇರುಂಡ ಬಾವುಟ ಕಿತ್ತಾಗ ಎಲ್ಲಿಹೋಗಿದ್ದರು ? ಕಾಯಿಲ್ ಶ್ರೀಗೌರಿ ಗೀತೆ ಹೋದಾಗ ಎಲ್ಲಿಹೋಗಿದ್ದರು? ದೊಡ್ಡ ದೊಡ್ಡ ನಾಯಕರಿದ್ದಾರೆ, ಅವರು ಮೈಸೂರಿನ ಹಿತವನ್ನು ನೋಡಿಕೊಳ್ಳುತ್ತಾರೆ ಎಂದಿದ್ದೆ. ಆದರೆ ಅವರು ಒಂದೊಂದಾಗಿ ಕೈಬಿಡುತ್ತಿದ್ದಾರೆ. ನನ್ನಂಥ ಬಡವರ ಕೂಗು ಗಗನ ಮುಟ್ಟುವುದಿಲ್ಲ. ಈ ಹೊತ್ತು ನೋಡಿದರೆ, ನಮ್ಮನ್ನು ಯಾರು ನಂಬಿದ್ದರೋ ಅವರಿಗೆ ಸೊನ್ನೆಸುತ್ತಿದ ಹಾಗಿದೆ. ಏನೇ ಆಗಲಿ, ನಾನು ಮಹಿಳೆಯಾದರೂ, ಏನು ಹೇಳಬೇಕೆಂದಿದ್ದೇನೋ ಅದನ್ನು ಹೇಳಿದರೆ, ತಪ್ಪು ತಿಳಿದುಕೊಳ್ಳಬಾರದು. ಒಂದು ಸಾರಿ ತಪ್ಪು ಮಾಡಿದರೆ, ಉದ್ದಕ್ಕೂ ತಪ್ಪು ಮಾಡುವುದು ಸರಿಯಲ್ಲ. ರಾಜಪ್ರಮುಖರ ವಿಷಯ ರಾಜ್ಯಾಂಗದಲ್ಲಿದೆ. ಆದರೂ ಮೈಸೂರಿನ ಜನರಿಗೆ ಶ್ರೀಮನ್ಮಹಾರಾಜರ ಮೇಲೆ ಎಷ್ಟು ಗೌರವವಿದೆ ಎಂಬುದನ್ನು ನೋಡಬೇಕು. ಎಲ್ಲಕ್ಕಿಂತ ಮಿಗಿಲಾಗಿ ಅವರಲ್ಲಿ ಗೌರವ ಪ್ರೀತಿ ವಿಶ್ವಾಸಗಳಿವೆ. ನಾಳೆ ಚುನಾವಣೆಯಾದರೂ ಯಾರಾದರೂ ಮಹಾರಾಜರೆದುರಾಗಿ ಚುನಾವಣೆಗೆ ನಿಂತರೆ ಅವರ ತಮ್ಮ ಡಿಪಾಜಿಟ್ ಉಳಿಸಿಕೊಳ್ಳುತ್ತಾರೆಯೆ ? ಅಂಥ ಅಗಾಧವಾದ ಪ್ರೇಮ ಜನರಿಗೆ ಅವರಲ್ಲಿದೆ. ಪ್ರಜೆಗಳನ್ನು ತಮ್ಮ ಮಕ್ಕಳಂತೆ ಕಾಪಾಡಿಕೊಂಡು ಬಂದಿದ್ದಾರೆ. ತಮ್ಮ ಸುಖಕ್ಕಾಗಿ ಯಾವುದನ್ನೂ ಅವರು ಮಾಡುವುದಿಲ್ಲ. ಹಳ್ಳಿಗರ ಉದ್ಧಾರಕ್ಕಾಗಿ ಎಷ್ಟೋ ಪ್ರಯತ್ನ ಮಾಡಿದ್ದಾರೆ. ನಾವು ಶಾಸನಮಾಡಿ ಅವರನ್ನು ಕೀಳುವುದಕ್ಕೆ ಶಕ್ತಿ ಇರಬಹುದು. ಆದರೆ ಮನುಷ್ಯನಲ್ಲಿರುವ ಆತ್ಮಗೌರವ ಪ್ರತಿಷ್ಠೆಗಳನ್ನು ಕೀಳುವುದಕ್ಕೆ ಹೇಗೆ ಯಾರಿಗೂ ಶಕ್ತಿಯಿಲ್ಲವೋ ಹಾಗೆ ಅವರಲ್ಲಿ ಜನರಿಗಿರುವ ಗೌರವ ಪ್ರೀತಿ ವಿಶ್ವಾಸಗಳನ್ನು ಕೀಳುವುದಕ್ಕೆ ಯಾರಿಂದಲೂ ಸಾಧ್ಯವಿಲ್ಲ. ರಾಜ್ಯಾಂಗದ ಪ್ರಕಾರ ಅವರು ಗೌರ್ನರರಾಗಲಿ ರಾಜಪ್ರಮುಖರಾಗಲಿ ಅವರ ವ್ಯಕ್ತಿತ್ವ ಕಡಮೆಯಾಗಲಾರದು. ಈ ಸಮಿತಿಯವರ ವರದಿಯಲ್ಲಿ ರಾಜಪ್ರಮುಖರ ಹುದ್ದೆ ರದ್ದಾಗಬೇಕೆಂದು ಬರೆದಿದ್ದಾರೆ. ಇದಕ್ಕೇಕೆ ಅವರು ಕೈಹಾಕಿದ್ದಾರೋ ಗೊತ್ತಿಲ್ಲ. ಪಂಡಿತ ನೆಹರೂರವರಿಗೆ ನಮ್ಮ ರಾಜಪ್ರಮುಖರ ವಿಷಯ ಗೊತ್ತಿದೆ, ಅವರ ಸ್ಥಾನವನ್ನು ಅವರು ರಕ್ಷಿಸುತ್ತಾರೆಂಬ ನಂಬಿಕೆ ನನಗಿದೆ.

ಸ್ವಾಮಿ, ಎರಡು ಕರ್ನಾಟಕವಾಗಬೇಕೆಂದು ನಾನು ವಾದ ಮಾಡಿದ್ದೇನೆ, ತಮಗೂ ಗೊತ್ತಿದೆ. ಆಡಳಿತ ಚೆನ್ನಾಗಿ ನಡೆಯಬೇಕು, ಪ್ರಾಂತಗಳು ಮುಂದುವರಿಯಬೇಕು ಎಂಬ ದೃಷ್ಟಿಯಿಂದ ಹೀಗೆ ಹೇಳಿದ್ದೇನೆಯೇ ಹೊರತು ಅವರು ನಮ್ಮದನ್ನೆಲ್ಲಾ ದೋಚಿಕೊಂಡು ಹೋಗುತ್ತಾರೆಂಬ ಅಭಿಪ್ರಾಯದಿಂದಲ್ಲ— ಚಿಕ್ಕ ಪ್ರಾಂತವಾದರೆ, ಆಡಳಿತ ಸುಗಮವಾಗಿ ಚೆನ್ನಾಗಿ ನಡೆಯುತ್ತದೆಂಬ ದೃಷ್ಟಿಯಿಂದ ಹೇಳಿದೆನೇ ಹೊರತು ಬೇರೆ ದೃಷ್ಟಿಯಿಂದಲ್ಲ. ಎರಡನೆಯ ಪಂಚವಾರ್ಷಿಕ ಯೋಜನೆಯನ್ನು ತಯಾರುಮಾಡಿದ್ದಾರೆ. ಅದರ ಪ್ರಕಾರ ಹಿಂದುಳಿದ ಪ್ರಾಂತಗಳನ್ನು ಮುಂದೆ ತರಬೇಕೆಂದು ಮಾಡಿದ್ದಾರೆ. ಹೀಗಿರುವಾಗ ಆ ಪ್ರಾಂತವನ್ನೂ ಮುಂದೆ ತರುತ್ತಾರೆ. ಚಿಕ್ಕ ಪ್ರಾಂತವಾದರೆ ಇದು ಸುಲಭ. 29 ಸಾವಿರ ಮೈಲಿ ಎಲ್ಲಿ, 70 ಸಾವಿರ ಮೈಲಿ ಎಲ್ಲಿ? ಅತಿ ದೊಡ್ಡದಾದರೆ ಸಮುದ್ರಕ್ಕೆ ಕಲ್ಲು ಹಾಕಿದ ಹಾಗಾಗುತ್ತದೆ. ಈ ಅನುಮಾನವಿದೆ; ಇದಕ್ಕೆ ದೊಡ್ಡವರು ಉತ್ತರ ಹೇಳಬೇಕು.

ಇಂಡಿಯಾ ದೇಶದಲ್ಲೆಲ್ಲಾ ಹರಿಜನರಿದ್ದಾರೆಂದು ಶ್ರೀ ದುಗ್ಗಪ್ಪನವರು ಹೇಳಿದರು. ಆದರೆ ಒಕ್ಕಲಿಗರು ಇಂಡಿಯಾ ದೇಶದಲ್ಲೇ ಅಲ್ಲದೆ ಇಂಗ್ಲೆಂಡಿನಲ್ಲಿಯೂ ಇದ್ದಾರೆ. ವ್ಯವಸಾಯ ಮಾಡುವವರೆಲ್ಲಾ ಒಕ್ಕಲಿಗರು. ಇಂಡಿಯಾ ದೇಶದಲ್ಲಿ ವ್ಯವಸಾಯ ಮಾಡುವವರು ಹೆಚ್ಚಾದರೆ, ಅನೇಕರು ಒಕ್ಕಲಿಗರಾಗುತ್ತಾರೆ. ಇವರಲ್ಲದೆ ಬ್ರಾಹ್ಮಣರೂ, ಇತರರೂ ಇದ್ದಾರೆ. ಇವರೆಲ್ಲರೂ ದಷ್ಟಪುಷ್ಟವಾಗಿ ಬೆಳೆದು ಸರ್ವಾಂಗ ಸುಂದರ ಭಾರತವಾದರೆ ಒಳ್ಳೆಯದು. ಈ ದೃಷ್ಟಿಯಿಂದಲೂ ಮೈಸೂರು ಮೈಸೂರಾಗಿಯೇ ಉಳಿಯಬೇಕೆಂಬ ವಾದವನ್ನು ತಮ್ಮ ಮುಂದಿಡುತ್ತಿದ್ದೇನೆ. ಸಮಿತಿಯವರು ಒಂದೇ ಕರ್ನಾಟಕವಾಗಬೇಕೆಂದು ಹೇಳಿದ್ದಾರೆ, ನಮ್ಮ ಪಕ್ಷದ ನಾಯಕರೂ ಸಂಸ್ಥೆಯ ನಾಯಕರೂ ಹೇಳಿಕೆಗಳನ್ನು ಕೊಟ್ಟಿದ್ದಾರೆ. ಇದು ಪ್ರಜಾಪ್ರಭುತ್ವ ನೀತಿಯಲ್ಲ, ನ್ಯಾಯವಲ್ಲ. ನನಗೆ ತಿಳಿದ ವಿಷಯವನ್ನು ಸಭೆಯ ಮುಂದಿಟ್ಟಿದ್ದೇನೆ. ಕೇಂದ್ರದ ಸರ್ಕಾರದವರು ಇನ್ನಾದರೂ ಯೋಚಿಸಿ ಎರಡು ಕರ್ನಾಟಕಗಳನ್ನು ಮಾಡಲಿ, ಆ ಕರ್ನಾಟಕದವರೂ ಅಭಿವೃದ್ಧಿಗೆ ಬಂದು ಭಾರತದ ಪ್ರಜೆಗಳಾಗಿರಲಿ.

ಈಗ ಇಬ್ಬರು ಮಂತ್ರಿಗಳೂ ಒಬ್ಬರು ಸ್ಪೀಕರೂ ಲಿಂಗಾಯಿತರಿದ್ದಾರೆ, ಕರ್ನಾಟಕವಾದರೆ ಐದು ಜನ ಲಿಂಗಾಯಿತರಾಗುತ್ತಾರೆಂದು ಒಬ್ಬರು ಹೇಳಿದರು. ಐದು ಜನರಾದರೆ ಮೂರು ಜನರಿಗಿಂತ ಉತ್ತಮ, ನಮಗೆ ಸಂತೋಷ. ಇದಕ್ಕಾಗಿ ನಮಗೇನೂ ಅಂಜಿಕೆಯಿಲ್ಲ. ಆಗಲೇ ಹೇಳಿದಂತೆ ಶ್ರೀ ಕೆ. ಸಿ. ರೆಡ್ಡಿಯವರೂ, ಶ್ರೀ ಹನುಮಂತಯ್ಯನವರೂ ಮುಖ್ಯಮಂತ್ರಿಗಳಾಗಿ ಒಕ್ಕಲಿಗರಿಗೆ ಏನು ಮಾಡಿದರು ? ಒಂದು ವೇಳೆ ಮಾಡಿದ್ದರೆ ಎರಡು ದಿವಸಕ್ಕೇ ಅವರಿಗೆ 'ಗೇಟ್ ಪಾಸ್'' ಕೊಡುತ್ತಿದ್ದರು. ಒಟ್ಟಿನಲ್ಲಿ ಎರಡು ಕರ್ನಾಟಕವಾದರೆ ಒಳ್ಳೆಯದೆಂದು ನನ್ನ ಅಭಿಪ್ರಾಯ

(ಶ್ರೀಮತಿ ಬಿ. ಎಲ್. ಸುಬ್ಬಮ್ಮ.)

ವೆಂದು ಹೇಳಿ ನನ್ನ ನಾಲ್ಕು ಮಾತನ್ನು ಮುಗಿಸುತ್ತೇನೆ.

ಶ್ರೀ ಪಿ. ಆರ್. ರಾಮಯ್ಯ (ಬಸವನಗುಡಿ).—ಸ್ವಾಮಿ, ಈ ಕರ್ಣಾಟಕ ನಿರ್ಮಾಣ ಪ್ರಶ್ನೆಗೆ ನಮ್ಮ ಸಂಸ್ಥಾನದಲ್ಲಿ ಇಷ್ಟುಮಟ್ಟಿಗೆ ಭಿನ್ನಾಭಿಪ್ರಾಯ ಬಂದಿರುವುದು ಇದೇ ಮೊದಲು ಎಂದು ನಾನು ತಿಳಿಸಬೇಕಾಗಿದೆ. ಕಳೆದ ಮೂವತ್ತೈದು ವರ್ಷಗಳಿಂದಲೂ ಕನ್ನಡ ಮಾತನಾಡುವವರಿಗೆಲ್ಲಾ ಒಂದು ಪ್ರಾಂತವಾಗಬೇಕೆಂಬುದಾಗಿ ಸೂಕ್ಷ್ಮವಾದ ರೇಖಾ ಚಿತ್ರ ನಮ್ಮಲ್ಲಿತ್ತು. ಕ್ರಮ ಕ್ರಮವಾಗಿ ಆ ರೇಖಾಚಿತ್ರ ಪುಷ್ಟಿಹೊಂದಿ ಅದು ನಮ್ಮ ದೇಶದಲ್ಲಿ 1935ನೆಯ ಇಸವಿಯ ಇಂಡಿಯಾ ಸರ್ಕಾರದ ಆಕ್ಟು ಜಾರಿಗೆ ಬಂದ ಕಾಲದಲ್ಲಿ ಕರ್ಣಾಟಕವಾಗಬೇಕೆಂಬ ಒಂದು ಸಮಸ್ಯೆ ಇನ್ನೂ ಹೆಚ್ಚಿನ ಪುಷ್ಟಿಯನ್ನು ಹೊಂದಿತು. ಆಗ ಕಾಂಗ್ರೆಸ್ಸಿನವರು ಆಂಧ್ರಪ್ರಾಂತ ಮತ್ತು ಕರ್ಣಾಟಕ ಪ್ರಾಂತ ಮಾಡಬೇಕೆಂದು ಯೋಚನೆ ಮಾಡಿದರು. ಆ ಸಂದರ್ಭದಲ್ಲಿ ಸಮಸ್ಯೆ ಬಗೆಹರಿಯಲು ಕಾರಣಾಂತರಗಳಿಂದ ಸಾಧ್ಯವಾಗಲಿಲ್ಲ. ಸ್ವಾತಂತ್ರ್ಯ ಬಂದ ತರುಣದಲ್ಲಿ, ದಕ್ಷಿಣ ಭಾರತದಲ್ಲಿ ಉದ್ಭವಿಸಿರುವ ಈ ಸಮಸ್ಯೆಯನ್ನು ಬಗೆಹರಿಸಬೇಕೆಂದು ಕಾಂಗ್ರೆಸ್ ನಾಯಕರೂ ಇಂಡಿಯಾ ಸರ್ಕಾರದವರೂ ಕೆಲವು ಸಮಿತಿಗಳನ್ನು ನೇಮಕ ಮಾಡಿದರು. ಆ ಸಂದರ್ಭದಲ್ಲಿ ನಮ್ಮ ದೇಶದ ಮುಂದೆ ಇದ್ದ ಅಗಾಧವಾದ ಕೆಲವು ಸಮಸ್ಯೆಗಳ ಕಾರಣದಿಂದ ಪ್ರಾಂತವಾರು ಸಮಸ್ಯೆಯನ್ನು ಹತ್ತು ವರ್ಷಕಾಲ ಮುಂದೆ ಹಾಕಬೇಕೆಂದು ಪಂಡಿತ್ ಜವಹರಲಾಲ್ ನೆಹರೂ ಅವರೂ ವಲ್ಲಭಭಾಯಿ ಪಟೇಲರೂ ಹೇಳಿದರು. ಆದರೆ ಆ ಮಾತು ಸ್ಥಿರವಾಗಿ ನಿಲ್ಲಲು ಸಾಧ್ಯವಾಗಲಿಲ್ಲ. ತಮಗೆಲ್ಲ ತಿಳಿದಹಾಗೆ, ಆಂಧ್ರ ಪ್ರಾಂತ ನಿರ್ಮಾಣಕ್ಕಾಗಿ ಪೊಟ್ಟಿ ಶ್ರೀರಾಮುಲು ಅವರು ಪ್ರಾಣವನ್ನು ಕೊಟ್ಟ ಕಾರಣದಿಂದ ಇಂಡಿಯಾ ಸರ್ಕಾರದವರು ತ್ವರಿತವಾಗಿ ತಮ್ಮ ಹಿಂದಿನ ನಿರ್ಧಾರವನ್ನು ಬದಲಾವಣೆ ಮಾಡಿ, ಆಂಧ್ರ ಪ್ರಾಂತಕ್ಕೆ ಒಪ್ಪಿಗೆಯನ್ನು ಕೊಟ್ಟರ . ಕೂಡಲೇ ಕರ್ಣಾಟಕದವರೂ ತಮಗೊಂದು ಪ್ರಾಂತ ನಿರ್ಮಾಣವಾಗಬೇಕೆಂದು ನಮ್ಮ ಕರ್ಣಾಟಕ ಪ್ರಾಂತ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರಾಗಿದ್ದ ಶ್ರೀಮಾನ್ ನಿಜಲಿಂಗಪ್ಪನವರ ನಾಯಕತ್ವದಲ್ಲಿ ಕೇಂದ್ರ ಸರ್ಕಾರಕ್ಕೆ ಅರಿಕೆ ಮಾಡಿಕೊಂಡರು. ಅದರ ಮೇಲೆ ಇಂಡಿಯಾ ಸರ್ಕಾರದವರು ಪ್ರಾಂತ ಪುನರ್ವಿಂಗಡಣಾ ಸಮಸ್ಯೆಯನ್ನು ವಿಶಾಲ ಭಾರತದ ದೃಷ್ಟಿಯಿಂದ ನೋಡಬೇಕೆಂದು ಪ್ರಾಂತ ಪುನರ್ವಿಂಗಡಣಾ ಸಮಿತಿಯನ್ನು ನೇಮಕಮಾಡಿದರು.

ಇದು ಮೊಟ್ಟಮೊದಲು ದಕ್ಷಿಣ ಭಾರತದ ಸಮಸ್ಯೆಯಾಗಿದ್ದು, ಕೊನೆಗೆ ಅಖಿಲ ಭಾರತದ ಸಮಸ್ಯೆಯಾಗಿ ಪರಿಣಮಿಸಿ ಇಂದು ಈ ವರದಿ ನಮ್ಮ ಕಣ್ಣು ಮುಂದೆ ಬಂದಿದೆ. ಆದರೆ, ಈ ವರದಿಯಲ್ಲಿ ಅವರು ಯಾವುದೇ ತತ್ವಗಳನ್ನು ಹಿಡಿದು ಶಿಫಾರಸು ಮಾಡಿಲ್ಲ. ಅಂದ ಮಾತ್ರಕ್ಕೆ ಭಾಷಾವಾರು ತತ್ವಕ್ಕೆ ಹೆಚ್ಚಿಗೆ ಗಮನ ಕೊಟ್ಟಿಲ್ಲವೆಂದು ಹೇಳತಕ್ಕದೂ ನಿಜವಲ್ಲ. ಆದರೂ ಕೂಡ, ಭಾಷಾವಾರು ತತ್ವವೊಂದನ್ನೇ ಮುಖ್ಯವಾಗಿಟ್ಟುಕೊಳ್ಳಬಾರದು, ಇನ್ನೂ ಅನೇಕ ಸಮಸ್ಯೆಗಳನ್ನೂ ವಿಷಯಗಳನ್ನೂ ಆಲೋಚನೆ ಮಾಡಬೇಕೆಂಬುದಾಗಿ ಹೇಳಿ, ನಿರ್ಣಯಮಾಡಿದ್ದಾರೆ. ಅವರು ಹೇಳಿರತಕ್ಕ ಎಲ್ಲ ವಿಷಯಗಳನ್ನೂ ವಿವರಿಸಿ ಉಲ್ಲೇಖಿಸುವುದಕ್ಕೆ ಹೋಗುವುದಕ್ಕೆ ಸಾಧ್ಯವಿಲ್ಲ. ಮುಖ್ಯವಾಗಿ ಆಡಳಿತ ಸೌಕರ್ಯ ದೃಷ್ಟಿಯಿಂದ, ಭಾಷಾ ಸಮಂಜಸತೆಯ ದೃಷ್ಟಿಯಿಂದ ಮತ್ತು ಇತರ ಕೆಲವು ಸಮಸ್ಯೆಗಳ ಪರಿಪೂರ್ಣತೆಯ ದೃಷ್ಟಿಯಿಂದ ಅವರು ಶಿಫಾರಸ್ಸು ಮಾಡಿದ್ದಾರೆಂದು ಗೊತ್ತಾಗುತ್ತದೆ. ಇದರ ಸಂಬಂಧದಲ್ಲಿ ಅವರು ದೇಶವನ್ನೆಲ್ಲಾ ಸುತ್ತಿದ್ದಾರೆ. ಒಂದುಲಕ್ಷದ ಮೂವತ್ತೆರಡುಸಾವಿರ document ಗಳನ್ನು ಅವರು ಗಮನಕ್ಕೆ ತೆಗೆದುಕೊಂಡಿದ್ದಾರೆ. ಎರಡು ಸಾವಿರ ಮೆಮೊರಾಂಡಂಗಳನ್ನು ಪರಿಶೀಲನೆ ಮಾಡಿದ್ದಾರೆ. 38,000 ಮೈಲಿಗಳಷ್ಟು ಸುತ್ತಿ 9,000 ಜನರನ್ನು ಭೇಟಿಮಾಡಿದ್ದಾರೆ. ಬೆಂಗಳೂರಿಗೆ ಕೂಡ ಬಂದಿದ್ದರು. ಆ ಸಂದರ್ಭದಲ್ಲಿ ಅನೇಕರು ತಮ್ಮ ಅಭಿಪ್ರಾಯಗಳನ್ನು ತಿಳಿಸಿದ್ದಾರೆ. ಆದರೆ, ಆ ಸಂದರ್ಭದಲ್ಲಿ ನಮ್ಮ ಕಾಂಗ್ರೆಸ್ ಪಕ್ಷದವರು ಸದಸ್ಯರ ಮೇಲೆ ಹಾಕಿದ್ದ ನಿರ್ಬಂಧದ ಕಾರಣ, ಕೆಲವು ಸದಸ್ಯರು ತಮ್ಮ ಅಭಿಪ್ರಾಯವನ್ನು ತಿಳಿಸಲಾಗಲಿಲ್ಲವೆಂದು ಹೇಳಿದರು. ವಾಸ್ತವವಾಗಿ, ಹಾಗೆ ನಿರ್ಬಂಧ ಹಾಕಿದ್ದರಿಂದಲೇ ನಮಗೆ ಬಹಳ ಮಟ್ಟಿಗೆ ತೊಂದರೆಯಾಯಿತೆನ್ನಬೇಕು. ಏಕೆಂದರೆ, ಈ ಸಮಸ್ಯೆ ಮೊಟ್ಟಮೊದಲು ಈ ರೀತಿ ತೀವ್ರ ರೂಪವನ್ನು ತಾಳಿದ್ದು ಮೈಸೂರು ಸಂಸ್ಥಾನಕ್ಕೆ ಫಜಲಾಲಿ ಕಮಿಷನ್ನಿನವರು ಬಂದಾಗ್ಗೆ. ಅದಕ್ಕೆ ಮುಂಚೆ ಎಷ್ಟೋ ಸಾರಿ ಕಾನ್ಸಿಟ್ಯುಯಂಟ್ ಅಸೆಂಬ್ಲಿಯಲ್ಲಿಯೂ ಮತ್ತಿತರ ಸಭೆಗಳಲ್ಲಿಯೂ ಒಂದಲ್ಲೊಂದು ರೀತಿಯಲ್ಲಿ ತೀರ್ಮಾನವಾಗಿತ್ತು. ಏನಿದ್ದರೂ ಅವರ ವ್ಯಾಪ್ತಿ ಇಷ್ಟೇ ಇರಬೇಕೆಂದು ಹೇಳಿರಲಿಲ್ಲ, ನಿಜ. ಫಜಲಾಲಿ ಕಮಿಷನ್ನಿನವರು ಬಂದ ಕಾಲದಲ್ಲಿ ಒಂದು ಪಂಗಡದವರು ಅವರ ಮುಂದೆ ಹೋಗಿ ತಮಗೆ ಇದರಿಂದ ಒಂದು ಅಭಿಪ್ರಾಯವನ್ನು ಸೂಚಿಸಲು ಮೊದಲು ಮಾಡಿದರು. ಆಗಲೂ ಕೂಡ, ಎರಡು ಕರ್ಣಾಟಕಗಳಾಗಬಹುದೆಂದು ಸೂಕ್ಷ್ಮವಾಗಿ ಯಾರೋ ಕೆಲವರು ಹೇಳಿದರೇ ವಿನಾ, ಪರಿಪೋಷಕವಾಗಿ, ಅಂಕಿಅಂಶಗಳನ್ನು ಸೇರಿಸಿ ಕಮಿಷನ್ನಿನವರ ಮುಂದಿಡಲು ಅವರಿಗೂ ಸಾಧ್ಯವಾಗಿಲ್ಲ. ಇದರಿಂದಾಗಿ ಕರ್ಣಾಟಕ ಬೇಕೆನ್ನುವವರಿಗೆ ಬಹಳಕಾಲದಿಂದಲೂ ಇದೇ ವಿಷಯವನ್ನು ಪರ್ಯಾಲೋಚನೆಮಾಡಿ ಬೇಕಾದಷ್ಟು ಮೆಮೊರಾಂಡಂ ಸಿದ್ಧಗೊಳಿಸಿ, ವಿಷಯಗಳನ್ನು ಸರಿಯಾದ ರೀತಿಯಲ್ಲಿ ಸಮಿತಿಯ ಮುಂದಿಟ್ಟು ಕರ್ಣಾಟಕ ಪ್ರಾಂತರಚನೆ ಮಾಡಲು ಒತ್ತಾಯಮಾಡುವುದಕ್ಕೆ ಸಹಾಯವಾಯಿತು. ಈ ಪ್ರಕಾರ ಮೈಸೂರಿನಲ್ಲಿ ಎರಡು ಕರ್ಣಾಟಕವಾಗಬೇಕೆಂಬ ವಿಷಯ ಪರ್ಯಾಲೋಚನೆಗೆ ಶುರುವಾದುದು ಈಚಿನ ಎರಡು ವರ್ಷಗಳಿಂದ ಮಾತ್ರ ಎಂದು ಹೇಳಬಹುದು.

ಶ್ರೀ ಡಿ. ದೇವರಾಜ ಅರಸ್.—ಮೈಸೂರನ್ನು ಬಿಟ್ಟು ಬೇರೆಯ ಕರ್ಣಾಟಕವಾಗಬೇಕೆಂದು ಸ್ವರಾಜ್ಯ ಬರುವುದಕ್ಕೆ ಮುಂಚೆನಿಂದಲೂ, ಪ್ರಜಾ ಸರ್ಕಾರ ಬರುವುದಕ್ಕೆ ಮುಂಚೆನಿಂದಲೂ ಒತ್ತಾಯಪಡಿಸುತ್ತಾ, ಬ್ರಿಟಿಷ್ ಸರ್ಕಾರದವರಿಗೆ ಸಾಕಷ್ಟು ಅಂಕಿಅಂಶಗಳನ್ನು ಒದಗಿಸಿಕೊಟ್ಟಿರುವುದು ಮಾನ್ಯ ಸದಸ್ಯರಿಗೂ ಗೊತ್ತಿರಬಹುದು. ಕಾರಂತ್‌ರವರು ಬರೆದಿರುವುದನ್ನು ಮಾನ್ಯ ಸದಸ್ಯರೂ ಓದಿರಬಹುದು. ನಾನು ಹಿಂದೆ ಫ್ಯಾಕ್ಟ್ ಫೈಂಡಿಂಗ್ ಕಮಿಟಿಯ ಮೇಲೆ ಮಾತನಾಡಿದಾಗಲೂ ಕಾರಂತರವರು ಏನು ಹೇಳಿದ್ದರೆಂಬುದನ್ನು ತಿಳಿಸಿದ್ದೇನೆ.

ಶ್ರೀ ಪಿ. ಆರ್. ರಾಮಯ್ಯ.—ಆಗ್ಗೆ ಶ್ರೀಮಾನ್ ಕಾರಂತರವರು ಬೇರೆ ಕರ್ಣಾಟಕವಾಗಬೇಕೆಂದು ಪ್ರಚಾರ ಮಾಡಿದ್ದಿರಬಹುದು. ಆದರೆ ಈಚೆಗೆ ನನಗೆ ತಿಳಿದಮಟ್ಟಿಗೆ ಕಾರಂತರವರೂ ಮತ್ತು ಇತರರೂ ಮೈಸೂರಿಗೆ ಜವಾಬ್ದಾರಿ ಸರ್ಕಾರ ಬಂದಮೇಲೆ

ಮೈಸೂರು ಸೇರಿದ ಕರ್ಣಾಟಕವಾಗಬೇಕೆಂದು ಬೇಕಾದಷ್ಟು ಚರ್ಚೆ ಮಾಡಿದ್ದಾರೆ. ನನ್ನ ಜ್ಞಾಪಕದಲ್ಲಿರುವಷ್ಟುಮಟ್ಟಿಗೆ ಹೇಳುವುದಾದರೆ, ಯಾವಾಗಲೂ ಕೂಡ ಮೈಸೂರಿನ ಹೊರಗಿರತಕ್ಕ ಕರ್ಣಾಟಕದವರು ಮೈಸೂರನ್ನು ಬಿಟ್ಟು ಕರ್ಣಾಟಕವಾಗಬೇಕೆಂದು ಹೇಳಿದಹಾಗೆ ಗೊತ್ತಿಲ್ಲ. ಅಲ್ಲದೆ ಮೈಸೂರಿನಲ್ಲಿಯೂ ಕೂಡ ಫಜಲಾಲಿ ಕಮಿಷನ್ ಬಂದಮೇಲೆ ಈಚೆಗೆ ತಾನೆ ಎರಡು ಕರ್ಣಾಟಕವಾಗಬೇಕೆಂದು ಒಂದು ಘನೀಭೂತವಾದ ರೀತಿಯಲ್ಲಿ ಸೂಚನೆಗಳು ಬರುತ್ತಿವೆ ಅಷ್ಟೆ. ಅವರೂ ಕೂಡ ನನಗೆ ತಿಳಿದ ಮಟ್ಟಿಗೆ ಸರಿಯಾಗಿ ವಿಚಾರಗಳನ್ನು ತಿಳಿದುಕೊಂಡು ಅಂಕಿಅಂಶಗಳನ್ನು ಪರಿಶೀಲನೆಮಾಡಿ ಒಂದು ನಿರ್ಧಾರಕ್ಕೆ ಬಂದಿದ್ದಾರೆಂದು ನನಗೆ ತೋರುತ್ತಿಲ್ಲ. ಅಲ್ಲದೆ, ಕರ್ಣಾಟಕದ ಪ್ರಾಂತ ನಿರ್ಮಾಣದ ಸಂಬಂಧದಲ್ಲಿ ಮೈಸೂರಿನ ಅನೇಕ ಮಾನ್ಯ ಮುಖಂಡರುಗಳು ಕರ್ಣಾಟಕದ ಎಲ್ಲಾ ಕಡೆಗಳಲ್ಲೂ ಸಂಚಾರಮಾಡಿ ನೋಡಿದ್ದಾರೆ. ಈ ಸಭೆಯಲ್ಲಿರುವ ಶ್ರೀ ಸಿದ್ದಲಿಂಗಯ್ಯನವರೂ ಅನೇಕಸಾರಿ ಸಂಚಾರಮಾಡಿ ಬಂದಿದ್ದಾರೆ. ಅತ್ತಕಡೆಯ ಜನರಿಗೆ ಮೈಸೂರನ್ನೊಳಗೊಂಡ ಕರ್ಣಾಟಕವಾಗಬೇಕೆಂಬ ಆಕಾಂಕ್ಷೆ ಎಷ್ಟರಮಟ್ಟಿಗೆಯಿದೆಯೆಂಬುದನ್ನು ನಮ್ಮ ಮುಂದಿಟ್ಟಿದ್ದಾರೆ. ಈಗೇನಿದ್ದರೂ ಮೈಸೂರಿನವರಿಗೂ, ಮೈಸೂರಿನ ಹೊರಗಿರತಕ್ಕ ಕರ್ಣಾಟಕ ದೇಶದವರಿಗೂ ವಿಶೇಷವಾಗಿ ಮಿಳನ ಹಾಗೂ ಪರಸ್ಪರ ಪರಿಚಯವುಂಟಾಗಿಲ್ಲದಿರುವ ಕಾರಣದಿಂದ ಅವರು ಹೊರಗಿನವರೆಂಬ ಭಾವನೆಯುಂಟಾಗಿದೆ ಅಷ್ಟೆ. ಆ ರೀತಿಯ ಭಾವನೆಗೆ ಕಾರಣವಿಲ್ಲ. ನನಗೆ ಗೊತ್ತಿರುವ ಹಾಗೆ ಧಾರವಾಡ, ಬೆಳಗಾಂ, ಬಿಜಾಪುರ, ಉತ್ತರ ಕೆನರ ಈ ಜಿಲ್ಲೆಗಳವರು ಮೈಸೂರಿನವರ ವಿಷಯ ದಲ್ಲಿ ಹೆಚ್ಚಿನ ಪ್ರೇಮ ಹೊಂದಿದ್ದಾರೆ. ಅಲ್ಲದೆ ಅಲ್ಲಿನ ಜನರ ರಾಜಕೀಯ ಪ್ರಗತಿ, ಆರ್ಥಿಕ ಪ್ರಗತಿ ಜೊತೆಗೆ ವಿದ್ಯಾ ಪ್ರಗತಿ, ಸಂಘಟನಾ ಶಕ್ತಿ ನಮ್ಮವರಿಗಿಂತಲೂ ಮಿಗಿಲಾಗಿದೆ. ವಿದ್ಯಾಶಾಲೆಗಳನ್ನು ನೋಡುವುದಾದರೆ, ವಿದ್ಯೆಯನ್ನು ಮುಂದುವರಿಸುವುದಕ್ಕಾಗಿ ಅಲ್ಲಿ ಸಾರ್ವಜನಿಕ ಪ್ರಯತ್ನ ನಡೆದಿರುವಷ್ಟುಮಟ್ಟಿಗೆ ಮೈಸೂರಿನಲ್ಲಿ ನಡೆದಿಲ್ಲವೆಂದು ಹೇಳಬಹುದು. ಸಾರ್ವಜನಿಕರಿಂದ ಸ್ಥಾಪಿತವಾದ ಕಾಲೇಜುಗಳೇ ಅಲ್ಲಿ ಬೇಕಾದಷ್ಟಿವೆ. ಹಾಗೆಯೇ ಬೇಕಾದಷ್ಟು ಕೆಲಸಗಳು ಸಾರ್ವಜನಿಕರಿಂದಲೇ ನಡೆದಿವೆ. ಅನೇಕ ಪ್ರಭಾವಶಾಲಿಗಳಾದ ಮುಖಂಡರುಗಳೂ ಅಲ್ಲಿದ್ದಾರೆ. ಸಂಗೀತ, ಕಲೆ, ವ್ಯಾಪಾರ, ಇಂಜಿನಿಯರಿಂಗ್ ವಿದ್ಯೆ, ಶಿಲ್ಪಕಲೆಗಳಲ್ಲಿ ಅನೇಕ ನಿಷ್ಣಾತರಿದ್ದಾರೆ. ನಮ್ಮ ಸಂಸ್ಕೃತಿಯೆಷ್ಟರಮಟ್ಟಿಗಿದೆಯೋ ಅಷ್ಟೇ ಮಟ್ಟಿಗೆ ಅವರ ಸಂಸ್ಕೃತಿಯೂ ಇದೆ. ಜೊತೆಗೆ ಅವರಲ್ಲಿ ಇನ್ನೊಂದು ವೈಶಿಷ್ಟ್ಯವೆಂದರೆ ಅವರು ಮಹಾರಾಷ್ಟ್ರದವರ ಸಂಪರ್ಕ ಹೊಂದಿ, ತಿಲಕ್ ಮುಂತಾದವರ ಪರಿಚಯ ಹೊಂದಿದವರಾಗಿ ಹೆಚ್ಚಿನ ರಾಜಕೀಯ ಪರಿಶ್ರಮ ಹೊಂದಿದವರಾಗಿದ್ದಾರೆ. ಸ್ವಾತಂತ್ರ್ಯ ಚಳವಳಿಯಲ್ಲಿ ಮೈಸೂರಿನವರು ಎಷ್ಟುಮಟ್ಟಿಗೆ ಕೆಲಸ ನಡೆಸಿದ್ದಾರೋ ಅದಕ್ಕಿಂತ ಹೆಚ್ಚಾಗಿ ಅವರು ಕೆಲಸ ನಡೆಸಿದ್ದಾರೆ. ಆದ್ದರಿಂದ ಅವರು ನಮಗಿಂತ ಯಾವ ವಿಧದಲ್ಲಿಯೂ ಹಿಂದುಳಿದಿಲ್ಲ. ಅಲ್ಲಿ ಎಂಥ ಪ್ರಭಾವಶಾಲಿಗಳಿದ್ದಾರೆಂಬುದನ್ನು ಆಲೂರ್ ವೆಂಕಟರಾವ್ ಅವರು ಬರೆದಿರುವ 'ಕರ್ಣಾಟಕ ಗತ ವೈಭವ' ಎಂಬ ಪುಸ್ತಕವನ್ನು ನೋಡಿದರೆ ಗೊತ್ತಾಗುತ್ತದೆ. ಆ ಪುಸ್ತಕದಲ್ಲಿ ಕರ್ಣಾಟಕ ಯಾವ ರೀತಿಯಿತ್ತು, ಮುಂದೆ ಯಾವ ರೀತಿಯಿರಬೇಕೆಂದು ಒಂದು ಆದರ್ಶವನ್ನು ನಮ್ಮ ಮುಂದಿಟ್ಟಿದ್ದಾರೆ. ಯಾವಾಗ ಭಾಷಾವಾರು ಪ್ರಾಂತ ನಿರ್ಮಾಣವಾಗಬೇಕೆಂದು ಕಾಂಗ್ರೆಸ್ ನಿರ್ಣಯ ಮಾಡಿತೋ ಆಗಿನಿಂದಲೂ ಮುದುವೀಡ ಕೃಷ್ಣರಾವ್ ಕಡಪ ರಾಘವೇಂದ್ರರಾವ್‌ರವರೇ ಮುಂತಾದವರು ಅನೇಕ ಸಾರಿ ಮೈಸೂರು ಭಾಗಗಳನ್ನು ನೋಡಿ ಇಲ್ಲಿನ ಸಂಸ್ಕೃತಿಯ ಮಟ್ಟವನ್ನು ನೋಡಿ ಕೊಂಡಾಡಿದ್ದಾರೆ. 1924ರಲ್ಲಿ ಬೆಳಗಾಂನಲ್ಲಿ ಕಾಂಗ್ರೆಸ್ ಅಧಿವೇಶನ ನಡೆದ ಕಾಲದಲ್ಲಿ ಮಹಾತ್ಮಾ ಗಾಂಧಿಯವರೇ ಅಧ್ಯಕ್ಷರಾಗಿದ್ದಾಗ ಕರ್ಣಾಟಕವಾಗಬೇಕೆಂದು ಎಷ್ಟೋ ಭಾಷಣಗಳಾದುದು ಮಾನ್ಯ ಸದಸ್ಯರಿಗೆ ಜ್ಞಾಪಕವಿರಬಹುದು. ಆ ಸಂದರ್ಭದಲ್ಲಿ ಅಲ್ಲಿ ನಡೆದ ಕೈಗಾರಿಕಾ ಪ್ರದರ್ಶನದಲ್ಲಿ, ಕಲಾ ಪ್ರದರ್ಶನದಲ್ಲಿ ಮೈಸೂರಿನವರು ಭಾಗವಹಿಸಿದ್ದರು. ಆದ್ದರಿಂದ ಒಂದು ರೀತಿಯಲ್ಲಿ ಸಾಂಸ್ಕೃತಿಕವಾಗಿ ಹಾಗೂ ಭಾಷಾ ರೀತಿಯಲ್ಲಿ ನಮಗೂ ಅವರಿಗೂ ಮಿಳನಗಳು ಉಂಟಾಗಿವೆ. ಈ ಕಾರಣ ಅವರು ಬೇರೆ ನಾವು ಬೇರೆ ಎಂದು ತಿಳಿದುಕೊಳ್ಳಬೇಕಾಗಿಲ್ಲ. ಈಗೇನಿದ್ದರೂ ಮೈಸೂರು ಪ್ರತ್ಯೇಕವಾಗಬೇಕೆಂಬ ಭಾವನೆ ಬಂದಿರುವುದು ಸ್ವಲ್ಪ ಮಟ್ಟಿಗೆ ಸಂಶಯದಿಂದ. ಆದರೆ ವಾಸ್ತವವಾಗಿ ನಾವೂ ಅವರೂ ಸೇರಿ ಕರ್ಣಾಟಕ ಪ್ರಾಂತ್ಯವಾದರೆ, ಕರ್ಣಾಟಕ ಪ್ರಾಂತ್ಯ ಭಾರತದ ಇತರ ಪ್ರಾಂತ್ಯಗಳಂತೆ ಅಗ್ರಗಣ್ಯವಾದ ಸ್ಥಾನವನ್ನು ಪಡೆಯುತ್ತದೆಂದು ಹೇಳಬಲ್ಲೆ. ವಿದ್ಯೆಯ ವಿಷಯದಲ್ಲೂ, ಕೈಗಾರಿಕೆಯ ವಿಷಯದಲ್ಲೂ, ವೈದ್ಯ ವಿದ್ಯೆಯ ವಿಷಯದಲ್ಲೂ, ಹಾಗೂ ಉದ್ಯೋಗ, ಸಂಸ್ಕೃತಿಗಳ ವಿಷಯದಲ್ಲೂ ಕರ್ಣಾಟಕದವರು ಮತ್ತು ಮೈಸೂರಿನವರು ಸೇರಿದರೆ ಹೆಚ್ಚಿನ ಪ್ರಗತಿ ಸಾಧನೆಯಾಗುತ್ತದೆಂದು ಹೇಳುತ್ತೇನೆ. ಈಗ ಮೈಸೂರಿನಲ್ಲಿ ಇಷ್ಟುಮಟ್ಟಿನ ಪ್ರಗತಿಯುಂಟಾಗಿರುವುದು, ಇಲ್ಲಿ ಒಳ್ಳೆಯ ಆದರ್ಶನೀಯರಾದ, ಸಮರ್ಥರಾದ ದಿವಾನರುಗಳಿದ್ದುದರಿಂದ. ಅದೂ ಕೂಡ ಒಂದು ಪ್ರಾಂತ್ಯವಾಗಿದ್ದರೆ ಮೈಸೂರಿಗೆ ಸರಿಸಮಾನವಾಗುತ್ತಿತ್ತು. ದುರ್ದೈವದಿಂದ ಬೊಂಬಾಯಿ ಪ್ರಾಂತ್ಯದಲ್ಲಿದ್ದು ಅವರು ಹೆಚ್ಚಿನ ಮುಂದಕ್ಕೆ ಬರಲು ಅವಕಾಶವಾಗಲಿಲ್ಲ. ನಮ್ಮಷ್ಟು ಮುಂದುವರಿಯಲು ಅವರಿಗೆ ಅವಕಾಶವಿರಲಿಲ್ಲ. ಅಂಥದರಲ್ಲೂ ಶೇಷಾದ್ರಿ ಸಮಿತಿಯವರುಹೇಳಿದ ಹಾಗೆ ಎಷ್ಟೋ ವಿಷಯಗಳಲ್ಲಿ ಅವರು ನಮಗೆ ಸರಿಸಮನಾಗಿದ್ದಾರೆ. ಆದ್ದರಿಂದ ನಾವೇ ಬೇರೆ ಜನ ಅವರೇ ಬೇರೆ ಜನ ಎಂಬ ಭಾವನೆ ಬೇಕಿಲ್ಲ.

ಮುಖ್ಯವಾಗಿ ಈ ವರದಿಯನ್ನು ಯಾವ ದೃಷ್ಟಿಯಲ್ಲಿ ನೋಡಬೇಕೆಂದರೆ, ಅಖಂಡ ಭಾರತದ ದೃಷ್ಟಿಯಿಂದ. ಸ್ವಾತಂತ್ರ್ಯ ಬಂದಮೇಲೆ ಹಿಂದೂಸ್ಥಾನದ ಇತಿಹಾಸದಲ್ಲಿ ಒಂದು ದೊಡ್ಡ ಕೆಲಸವನ್ನು ಮಾಡಿದ್ದಾರೆನ್ನಬಹುದು. ಈ ಸಂದರ್ಭದಲ್ಲಿ ಅಮೆರಿಕಾದ ವಿಷಯವನ್ನು ಮಾನ್ಯ ಸದಸ್ಯರು ಹೇಳಿದರು, 48 ಸಂಸ್ಥಾನಗಳು ಅಲ್ಲಿವೆಯೆಂಬುದನ್ನು ಉದಾಹರಿಸಿದರು. ಅಮೆರಿಕಾ ದೇಶದ ಇತಿಹಾಸವನ್ನು ನೋಡುವುದಾದರೆ, ಅಲ್ಲಿ ಯಾವ ರೀತಿಯಲ್ಲಿ ಸಂಸ್ಥಾನಗಳು ನಿರ್ಮಾಣವಾದುವೆಂಬ ಚರಿತ್ರೆಯನ್ನು ನೋಡುವುದಾದರೆ, ಅಲ್ಲಿ ಯಾರೋ ಬಂದು ಗೆರೆಗಳನ್ನು ಹಾಕಿ ವಿಂಗಡಿಸಿದರೆನ್ನುವುದು ನಿಜವಲ್ಲ. ಅಲ್ಲಿ ಇಂಗ್ಲೀಷರು ಫ್ರೆಂಚರು ಹೋಗಿ ಕಾಲೊನೈಸೇಷನ್ ಮಾಡಿಕೊಂಡಮೇಲೆ ಮೂಲ ರಾಜ್ಯ ನಿವಾಸಿಗಳನ್ನೋಡಿಸಿ ಬೇರೆ ಬೇರೆ ಸಂಸ್ಥಾನಗಳೆಂದು ಮಾಡಿಕೊಂಡರು. ಕಡೆಗೆ ಒಂದು convention ಆಗಿ federal unit ಆಯಿತು. ಅಷ್ಟೇ ಹೊರತು ಯಾರೂ ಒಂದು ಗೀಟು ಹಾಕಲಿಲ್ಲ. ತಾವು ತಾವೇ ಸೇರಿಕೊಂಡರು ಅಷ್ಟೆ. ಆದರೆ ಈಗ

(ಶ್ರೀ ಪಿ. ಆರ್. ರಾಮಯ್ಯ.)

ಲಾದರೋ ಪ್ರಪಂಚದ ಇತಿಹಾಸದಲ್ಲಿ ಕಾಣದಿರುವ ದೊಡ್ಡ ಕೆಲಸವನ್ನು ಮಾಡಲಿಕ್ಕೆ ಈ ಕಮಿಷನ್ನಿನವರು ಕೈಹಾಕಿದ್ದಾರೆ. ಇಂಡಿಯಾ ದೇಶಕ್ಕೆ ಸ್ವತಂತ್ರವಾದ ಮೇಲೆ ಒದಗಿದಂಥ ಅನೇಕ ಸಮಸ್ಯೆಗಳಲ್ಲಿ ಪ್ರಾಂತ್ಯ ನಿರ್ಮಾಣ ಸಮಸ್ಯೆ ಬಹಳ ದೊಡ್ಡದು. ಪ್ರಾಂತ್ಯ ನಿರ್ಮಾಣವನ್ನು ಯಾವ ರೀತಿ ಮಾಡಬೇಕೆಂಬುದು ಮೊದಲಿನಿಂದಲೂ ಇತ್ತು. ಇಂಗ್ಲೀಷರೂ ಕೂಡ ಪ್ರಾಂತನಿರ್ಮಾಣಮಾಡಬೇಕೆಂದಿದ್ದರು. ಸ್ವಲ್ಪಮಟ್ಟಿಗೆ ಮಾಡಿಯೂ ಮಾಡಿದರು. ಈಗ ಸ್ವಾತಂತ್ರ್ಯ ಬಂದ ಮೇಲೆ ಈ ಕಷ್ಟಕರವಾದ ಸಮಸ್ಯೆಯನ್ನು ಪರಿಹರಿಸುವುದಕ್ಕೆ ಇಂಡಿಯಾ ಸರ್ಕಾರದವರು ಈ ಕಮಿಷನ್ನಿನವರನ್ನು ನೇಮಿಸಿದ್ದಾರೆ. ಆದರೆ ಇದನ್ನು ನೇಮಕ ಮಾಡಿದವರು ಇಂಡಿಯಾ ಸರ್ಕಾರದವರು. ಇದನ್ನು ಅವರು ಯಾರೊಬ್ಬರ ಹಿತ ವಿರೋಧಕ್ಕೂ ಮಾಡಿದ್ದಲ್ಲ. ನಾವಾಗಿಯೇ ನಮಗೊಬ್ಬರಿಗೇ ಈ ಕಮಿಷನ್ ನೇಮಕಮಾಡಿ ಎಂದು ನಾವೇನೂ ಅವರಿಗೆ ಹೇಳಿರಲಿಲ್ಲ. ಹೀಗೆ ಪ್ರಾಂತ್ಯಗಳನ್ನು ಪುನರ್ವಿಂಗಡಣೆಮಾಡುವಂಥ ಆ ಅಧಿಕಾರ ಆ ಕೇಂದ್ರ ಸರ್ಕಾರಕ್ಕೆ ಮಾತ್ರವಿದೆ. ಆದುದರಿಂದ ಅವರು ಮಾತ್ರ ಈ ಅಧಿಕಾರವನ್ನು ಯಾರೊಬ್ಬರಿಗಾದರೂ ವಹಿಸಬಹುದು. ನಮ್ಮ ಭಾರತದ ಪ್ರಜೆಗಳೆಲ್ಲಾ ಒಟ್ಟುಗೂಡಿ ಕೇಂದ್ರ ಸರ್ಕಾರ ಎಂದು ಒಂದನ್ನು ನಿರ್ಮಾಣಮಾಡಿ ಅದಕ್ಕೆ ವಿಶೇಷ ಅಧಿಕಾರಗಳನ್ನು ಕೊಟ್ಟಿದ್ದಾರೆ. ಮುಂದೆ ದೇಶದಲ್ಲಿ ಏನಾದರೂ ತೊಂದರೆಗಳುಂಟಾದರೆ ಅವುಗಳನ್ನು ನಿಗ್ರಹಿಸತಕ್ಕ ಬಗ್ಗೆ ಅವರಿಗೆ ಸಂಪೂರ್ಣಾಧಿಕಾರವನ್ನು ಕೊಡಲಾಗಿದೆ. ಪ್ರಾಂತ್ಯ ಸರ್ಕಾರದ ಶಾಸನ ಸಭೆಗಳಿಗೆ ಅಂಥ ಅಧಿಕಾರವಿಲ್ಲ. 9ನೆಯ ಪೇಜಿನಲ್ಲಿ ಅವರು ಹೀಗೆ ತಿಳಿಸಿದ್ದಾರೆ :—

"Accordingly, the Constituent Assembly of India, deriving its power from the sovereign people was entirely unfettered by any previous commitment in evolving a constitutional pattern suitable to the genius and requirements of the Indian people as a whole. Consequently, unlike most other federal legislatures, Parliament, representing the people of India as a whole, has been vested with the exclusive power of admitting or establishing new States, increasing or diminishing the area of an existing State or altering its boundaries, the legislature or legislatures of the States concerned having only the right to an expression of views on the proposals. It is significant that for making such territorial adjustments it is not necessary even to invoke the provisions governing constitutional amendments. Unlike the United States of America, therefore, the Indian Union is not an 'indestructible Union composed of the indestructible States' in that the Union alone is indestructible but the individual States are not."

ಆದುದರಿಂದ ಪ್ರಾಂತ್ಯಗಳಿಗೆ ಸಾವೆರಿನ್ ಅಧಿಕಾರವಿಲ್ಲ. ಆದುದರಿಂದಲೇ ಈಗ ಇಂಡಿಯಾ ಸರ್ಕಾರದವರು ತಮ್ಮ ಅಧಿಕಾರ ಬಲದಮೇಲೆ ಆ ಒಂದು ಕಮಿಷನ್ನನ್ನು ನೇಮಕಮಾಡಿ ಈ ವಿಷಯವಾಗಿ ಎಲ್ಲಾ ಅಂಶಗಳನ್ನೂ ಪರ್ಯಾಲೋಚನೆ ಮಾಡಿ ಒಂದು ವರದಿಯನ್ನೊಪ್ಪಿಸಲು ಆಜ್ಞೆ ಮಾಡಿದ್ದರು. ಆ ಪ್ರಕಾರವೇ ಈಗ ಆ ಸಮಿತಿಯವರು ಅನೇಕ ಪ್ರಾಮುಖ್ಯವಾದ ವಿಷಯಗಳನ್ನು ಗಣನೆಗೆ ತೆಗೆದುಕೊಂಡು ಈ ವರದಿ ನ್ನೊಪ್ಪಿಸಿದ್ದಾರೆ. ಆಡಳಿತ ಸೌಕರ್ಯದ ದೃಷ್ಟಿಯಿಂದಲೂ ಯಾವ ರೀತಿ ವಿಭಾಗ ಮಾಡಿದರೆ ಅನುಕೂಲವಾಗುತ್ತದೆ ಎನ್ನುವುದನ್ನೂ ಸಹ ಪರಿಶೀಲನೆ ಮಾಡಿದ್ದೇವೆ ಎನ್ನುವುದನ್ನು ಅವರು ಈ ವರದಿಯಲ್ಲೇ ಹೇಳಿದ್ದಾರೆ. ಆದರೆ ಈಗ ಕೆಲವು ಮಾನ್ಯ ಸದಸ್ಯರು ಇಲ್ಲಿ ಅಡ್ಮಿನಿಸ್ಟ್ರೇಟೀವ್ ಕನ್‌ವೀನಿಯನ್ಸ್ ವಿಚಾರ ಸರಿಯಾಗಿದೆಯೇ ಇಲ್ಲವೇ ಎನ್ನುವುದನ್ನು ಗಣನೆಗೆ ತೆಗೆದುಕೊಳ್ಳದೆ ಕೇವಲ ಆ ಭಾಷೆಯೊಂದರ ವಿಚಾರವನ್ನೇ ತೆಗೆದುಕೊಂಡು ಬಹಳ ಗಾಬರಿಯಾಗಿದ್ದಾರೆ. ಆದರೆ ಈ ಪ್ರಜಾಪ್ರಭುತ್ವ ಯುಗದಲ್ಲಿ ಒಂದು ಪ್ರಾಂತ್ಯದ ಆಡಳಿತವು ಚೆನ್ನಾಗಿ ದಕ್ಷತೆಯಿಂದ ನಡೆಯಬೇಕಾಗಿದ್ದರೆ ಈ ಭಾಷೆ ಅನ್ನುವುದಕ್ಕೂ ಒಂದು ಪ್ರಾಮುಖ್ಯತೆಯಿದೆ. ಇದು ಅತ್ಯಾವಶ್ಯಕ, ಹಾಗೂ ಬಹಳ ಪ್ರಾಮುಖ್ಯವಾದದ್ದಾಗಿದೆ. ಇಂಥ ಒಂದು ಬಹಳ ಪ್ರಾಮುಖ್ಯವಾದ ವಿಷಯವನ್ನು—ಭೂತ, ಪಿಶಾಚಿ ಎಂದು ಹೇಳಿರುವುದು ಅತ್ಯಂತ ವಿಷಾದಕರವಾದ ವಿಷಯ. ಇದು ಯಾವ ಅಂಥ ಭೂತವೂ ಅಲ್ಲ, ಪೀಡೆಯೂ ಅಲ್ಲ, ಪಿಶಾಚಿಯೂ ಅಲ್ಲ. ಇದು ನಮ್ಮೆಲ್ಲರಿಗೂ ಅತ್ಯಗತ್ಯವಾಗಿ ಬೇಕಾಗಿರುವಂಥಾದ್ದೇ ಆಗಿದೆ. ಒಂದು ಪ್ರಾಂತ್ಯದ ರಾಜ್ಯಭಾರವನ್ನು ಸುಗಮವಾಗಿ ನಡೆಸಬೇಕಾಗಿದ್ದರೆ ಆ ಪ್ರಾಂತ್ಯದ ಆಡಳಿತಕ್ಕೆ ಸಂಬಂಧಪಟ್ಟಂಥ ಎಲ್ಲ ವಿಷಯಗಳನ್ನೂ ಆ ಪ್ರದೇಶದ ಜನರಿಗೆ ಚೆನ್ನಾಗಿ ತಿಳಿವಳಿಕೆ ಮಾಡಿಕೊಡಬೇಕು. ಈ ದಿವಸ ಇಂಡಿಯಾ ದೇಶದಲ್ಲಿ ಒಂದೊಂದು ಭಾಗದಲ್ಲಿ ಒಂದೊಂದು ಭಾಷೆಯಿದೆ. ಒಂದು ಕಡೆ ತೆಲುಗು ಭಾಷೆಯಿದ್ದರೆ ಇನ್ನೊಂದು ಭಾಗದಲ್ಲಿ ತಮಿಳು ಭಾಷೆಯಿದೆ. ಮತ್ತೊಂದು ಕಡೆಯಲ್ಲಿ ಕನ್ನಡ. ಹೀಗೆ ಒಂದೊಂದು ಕಡೆ ಒಂದೊಂದು ಭಾಷೆಯಿದೆ. ಒಂದು ದೇಶಕ್ಕೆ ಒಂದು ಭಾಷೆಯಿರಬೇಕು. ಆ ದೇಶಭಾಷೆಯಲ್ಲಿಯೇ ಅಲ್ಲಿಯ ರಾಜ್ಯಭಾರದ ಕಾರ್ಯಕ್ರಮಗಳು ನಡೆಯಬೇಕಾದುದು ಬಹಳ ಅವಶ್ಯಕ. 66ನೆಯ ಪೇಜಿನಲ್ಲಿ ಅವರು ಹೀಗೆ ಹೇಳಿದ್ದಾರೆ :—Linguistic homogeneity ಅಂದರೆ ಭಾಷೆಗಳ ಸಾಮರಸ್ಯತೆ ; geographical compactness, ಅಂದರೆ ಪ್ರಾಂತ್ಯಗಳು ಅಡಕವಾಗಿರುವುದು ಮತ್ತು alignment of communications ensuring easy accessibility from one area to another; ಅಂದರೆ ಪ್ರಾಂತ್ಯದಲ್ಲಿ ಒಂದು ಕಡೆಯಿಂದ ಮತ್ತೊಂದು ಕಡೆಗೆ ಜನರು ಅಡ್ಡಿ ಆತಂಕಗಳಿಲ್ಲದೆ ಧಾರಾಳವಾಗಿ ಓಡಾಡುವುದಕ್ಕೆ ಅವಕಾಶಗಳು ಇರುವುದು; and the elimination of the multiplicity of jurisdictions in areas; ಅಂದರೆ ಒಂದೇ ಪ್ರದೇಶದಲ್ಲಿ ಬೇರೆ ಬೇರೆ ಅಧಿಕಾರವರ್ಗದವರ ಅಧಿಕಾರ ವ್ಯಾಪ್ತಿಯಿಲ್ಲದಂತಿರಬೇಕು ; which administratively and economically constitute

integrated units and some of the objectives which have to be borne in mind from the point of view of administrative convenience. ಹೀಗೆ ಈ ಒಂದು ಭಾಷೆಯನ್ನೇ ಹೆಚ್ಚು ಪ್ರಾಮುಖ್ಯತೆಗೆ ಇಟ್ಟುಕೊಳ್ಳದೆ ಇದರಲ್ಲೇ ಎಲ್ಲಾ ಅಂಶಗಳನ್ನೂ ಸಹ ಅಡಕ ಮಾಡಿದ್ದಾರೆ. ಇಂಥ ತತ್ವಗಳೆಲ್ಲಾ ಈ ಕರ್ಣಾಟಕ ಪ್ರಾಂತ್ಯ ನಿರ್ಮಾಣಕ್ಕೆ ಅನ್ವಯಿಸುತ್ತವೆಯೋ ಅಂದರೆ ಇವುಗಳೆಲ್ಲಾ ಅನುಕೂಲವಾಗಿಯೇ ಇರುತ್ತವೆ. ಅಂದರೆ—

"Linguistic homogeneity, geographical compactness, alignment of communications ensuring easy accessibility from one area to another and the elimination of multiplicity of jurisdictions in areas."

ಇವುಗಳೆಲ್ಲಾ ಸೇರಿರುತ್ತವೆ. ಈ ರೀತಿ ಪ್ರಾಂತ್ಯಗಳನ್ನು ಮಾಡುವುದರಿಂದ ಹಣಕಾಸಿಗೆ ತೊಂದರೆ ಬರುತ್ತದೆ, ಹಣಕಾಸಿನ ತೂಕ ಸರಿಹೋಗುವುದಿಲ್ಲ ಎಂದು ವಾದ ಮಾಡಿದ್ದಾರೆ. ಆ ಸಮಿತಿಯವರು ಈ ಅಂಶವನ್ನೂ ಸಹ ಅವರವರ ವರದಿಯಲ್ಲೇ ವಿವರಿಸಿದ್ದಾರೆ. ಹಣಕಾಸಿನ ವಿಚಾರದಲ್ಲಿ ಅಂದರೆ balance of finance ವಿಚಾರ ಪ್ರಸ್ತಾಪಮಾಡುತ್ತ ಇಲ್ಲಿ ಸದ್ಯಕ್ಕೆ ಹಣಕಾಸಿನ ತೂಕ ಸರಿಯಾಗಿರುವುದಿಲ್ಲ ಎಂದು ಹೀಗೆ ಪ್ರಾಂತ್ಯಗಳ ಪುನರ್ವಿಂಗಡಣೆಯ ಕಾರ್ಯವನ್ನು ಮಾಡದೆ ಇರಬಾರದೆಂದು ತಿಳಿಸಿದ್ದಾರೆ. ಈ ವ್ಯತ್ಯಾಸವನ್ನು ಸರಿದೂಗಿಸಲು ಕೇಂದ್ರ ಸರ್ಕಾರದ ಧನ ಸಹಾಯ ದೊರೆಯಬೇಕೆಂದು ಹೇಳಿದ್ದಾರೆ. ಆದ ಕಾರಣ ನಾವೀದಿವಸ ಈ ನಮ್ಮ ಹಣಕಾಸಿನ ಬಗ್ಗೆ ತೊಂದರೆಯುಂಟಾಗುತ್ತದೆಂದು ನಾವಿದನ್ನು ಅಷ್ಟು ದೊಡ್ಡದನ್ನಾಗಿ ಮಾಡಬೇಕಾದುದಿಲ್ಲ. ಈಗ ಕರ್ಣಾಟಕ ಪ್ರಾಂತ್ಯನಿರ್ಮಾಣ ಮಾಡುವುದರಿಂದ ನಮಗೆ ಒಂದೂವರೆ ಅಥವಾ ಎರಡು ಕೋಟಿ ರೂಪಾಯಿಗಳ ಅಧಿಕ ವೆಚ್ಚಕ್ಕೆ ಅವಕಾಶವಾಗಬಹುದು ಎಂದು ಒಂದು ಅಂದಾಜುಮಾಡಲಾಗಿದೆ. ಆದರೆ ಕೆಲಸವಿನ್ನೂ ಪೂರ್ತಿಯಾಗಿ ಆಗಿಲ್ಲ. ಈ ಸಂಬಂಧವಾಗಿ ಇನ್ನೂ ಮುಂದೆ ಒಂದು ಪ್ರತ್ಯೇಕ ಫೈನಾನ್ಷಿಯಲ್ ಸಮಿತಿ ನೇಮಕವಾಗುವುದಿದೆ. ಆದಕಾರಣ ಈಗ ಸುಮ್ಮನೆ ನಮಗೆ ತಿಳಿದಂತೆ ನಾವು ಅಂದಾಜ ಮಾಡುತ್ತ ಹೋಗುವುದರಿಂದ ಯಾವ ಪ್ರಯೋಜನವೂ ಆಗುವುದಿಲ್ಲ. ಈ ದಿವಸ ಹೊಸದಾಗಿ ಅನೇಕ ಪ್ರಾಂತ್ಯಗಳನ್ನು ನಿರ್ಮಾಣಮಾಡಬೇಕಾಗಿದೆ. ಈಗ ನಾವಿಲ್ಲಿ ನಮಗೇನು ಒಂದು ತೊಂದರೆಯಿದೆಯೆಂದು ಹೇಳುತ್ತಿದ್ದೇವೋ ಆ ತೊಂದರೆ ಎಲ್ಲ ಪ್ರಾಂತಗಳವರಿಗೂ ಇದ್ದೇ ಇದೆ. ಆದರೆ ಒಟ್ಟಿನಲ್ಲಿ ಹೇಳುವುದಾದರೆ ಈ ಎಲ್ಲ ದೇಶಗಳ ಅಭಿವೃದ್ಧಿಯ ವಿಷಯವೂ—ಈಗಾಗಲೇ ಅನೇಕ ಮಾನ್ಯ ಸದಸ್ಯರು ತಿಳಿಸಿರುವಂತೆ—ಕೇಂದ್ರ ಸರ್ಕಾರದ ಮೇಲೂ ಮತ್ತು ಪ್ರಾಂತೀಯ ಸರ್ಕಾರಗಳಮೇಲೂ ಬಿದ್ದಿರತಕ್ಕಂಥ ವಿಷಯವಾಗಿದೆ. ಮುಖ್ಯವಾಗಿ ಕೇಂದ್ರದವರ ಹೊಣೆ ಹೆಚ್ಚಾಗಿದೆ. ಅದಕ್ಕಾಗಿಯೇ ಈಗ ಅವರು ಈ ದ್ವಿತೀಯ ಪಾಂಚವಾರ್ಷಿಕ ಯೋಜನೆಯಲ್ಲಿ ಸೂಕ್ತ ಕಾರ್ಯಕ್ರಮಗಳನ್ನು ಕೈಗೊಳ್ಳುವಂತೆ ಪ್ಲಾನಿಂಗ್ ಸಮಿತಿಯವರಿಗೆ ಸೂಚನೆಗಳನ್ನು ಕೊಟ್ಟಿದ್ದಾರೆ. ಅವರು ಬಹಳ ಶ್ರದ್ಧೆ ವಹಿಸಿ ಈ ಕಾರ್ಯಗಳನ್ನು ನಿರ್ವಹಿಸುತ್ತಿದ್ದಾರೆ. ಹೀಗಿರುವಾಗ ನಾವು ಇಂಥಾದ್ದೇ ಪ್ರಾಂತ್ಯ ಸರ್ಕಾರದ ಜವಾಬ್ದಾರಿಯೆಂದೂ—ಇನ್ನುಳಿದದ್ದು ಕೇಂದ್ರ ಸರ್ಕಾರದ ಜವಾಬ್ದಾರಿಯೆಂದೂ ಹೇಳಿ ಒಂದು ಖಚಿತವಾದ ಗೀಟನ್ನು ಹಾಕುವುದಕ್ಕಾಗುವುದಿಲ್ಲ. ಈ ಹಣಕಾಸಿನ ವಿಚಾರ ಕೇಂದ್ರ ಸರ್ಕಾರ ಮತ್ತು ಪ್ರಾಂತ ಸರ್ಕಾರಗಳು—ಎರಡೂ ಸೇರಿ ಪರಿಶೀಲನೆ ಮಾಡಬೇಕಾಗಿರುವಂಥ ವಿಷಯವಾಗಿದೆ. ಹೀಗಿರುವಾಗ ಕೇವಲ ಹಣಕಾಸಿದ ವಿಚಾರವೊಂದನ್ನೇ ಗಣನೆಗೆತೆಗೆದುಕೊಂಡು ನಮ್ಮ ಮೈಸೂರು ಈಗಿರುವಂತೆಯೇ ಇರಲಿ ಎಂದು ಹೇಳುವುದು ಸರಿಯಲ್ಲ. ಪ್ರಾಂತ್ಯಗಳು ನಿರ್ಮಾಣವಾಗುವುದರಿಂದ ಶಾಸನಸಭೆಗಳೂ ದೊಡ್ಡದಾಗುತ್ತವೆ. ಆಗ ಈ ಸಭೆ ಒಂದು ಅಡಕವಾದ ಸಭೆಯಾಗುವುದಿಲ್ಲ ಎನ್ನತಕ್ಕ ಮತ್ತೊಂದು ವಾದವನ್ನೆತ್ತಿದ್ದಾರೆ. ಆದರೆ ನನಗೆ ತಿಳಿದಿರುವವುಟ್ಟಿಗೆ ಕೊಂಚ ಜಾಸ್ತಿಯಾಗಿ 200 ಜನ ಸದಸ್ಯರಾಗಬಹುದು. ಆದರೆ ಇದೇನೂ ಅಂಥ ಒಂದು ದೊಡ್ಡ ಸಂಖ್ಯೆಯಾಗುವುದಿಲ್ಲ. ಆದರೆ ರಾಜ್ಯ ಚಿಕ್ಕದಾದರೆ ಈ ರಾಜ್ಯಾಡಳಿತದಲ್ಲಿ ಅನೇಕ ತೊಂದರೆಗಳುಂಟಾಗುತ್ತವೆ. ಈ ರಾಜ್ಯ ರಥ ಸರಿಯಾಗಿ ಹೋಗುವುದಿಲ್ಲ. ರಾಜ್ಯ ದೊಡ್ಡದಾದರೆ ದಾರಿಯೂ ದೊಡ್ಡದಾಗಿ ಈ ರಾಜ್ಯ ರಥ ಹೋಗುವುದಕ್ಕೆ ದಾರಿ ವಿಶಾಲವಾಗುತ್ತದೆ ; ಒಂದು ವಿಶಾಲ ದೃಷ್ಟಿಗೆ ಅವಕಾಶ ಉಂಟಾಗುತ್ತದೆ. ಹೀಗೆ 200-250 ಜನ ಸದಸ್ಯರು ನಮ್ಮ ಶಾಸನಸಭೆಗೆ ಅದರಲ್ಲೂ ಒಂದು ಭಾಷೆ, ಒಂದು ಸಂಸ್ಕೃತಿ, ಒಂದೇ ಭೌಗೋಳಿಕ ಅನುಕೂಲತೆಯಿರತಕ್ಕವರು ಸೇರಿದರೆ ಬಹಳ ಅನುಕೂಲವಿದೆ. ಅದಕ್ಕಾಗಿ ಈಗ ನಮ್ಮಲ್ಲಿ ಈ ಸಣ್ಣ ಮನೋಭಾವನೆಗಳು ಹೋಗಬೇಕು ; ದೊಡ್ಡ ಭಾವನೆಗಳು ಬೆಳೆಯಬೇಕು. ಈಗ ಆ ಬಳ್ಳಾರಿಯೂ ಸೇರಿಕೊಂಡು ನಮ್ಮ ಪ್ರಜಾಸಂಖ್ಯೆ ಕೇವಲ ಒಂದು ಕೋಟಿಯಿದೆ. ಮುಂದೆ ಕರ್ಣಾಟಕವಾದರೆ ಆಗ ಒಂದು ಕೋಟಿ ತೊಂಬತ್ತು ಲಕ್ಷಕ್ಕೆ ಈ ಜನಸಂಖ್ಯೆ ಏರಬಹುದು. ಇದರಿಂದ ಮುಂದೆ ವಿಶೇಷ ಅನುಕೂಲವಿದೆ ಎಂದು ಆ ಫಜ್ಲಾಲಿ ಸಮಿತಿಯವರೇ ತಮ್ಮ ವರದಿಯಲ್ಲಿ ಹೇಳಿದ್ದಾರೆ—ಮುಖ್ಯವಾಗಿ ಈ ಸಮಸ್ಯೆಯನ್ನು ಅಂತಹ ದೃಷ್ಟಿಯಿಂದ ನೋಡಬೇಕು. ಶಿಫಾರ್ಸು ಪ್ರಕಾರ ಒಂದು ದಿವಸ ರಾಜ್ಯಗಳ ನಿರ್ಮಾಣವಾಗುತ್ತದೆ. ಮುಖ್ಯವಾಗಿ ಬೊಂಬಾಯಿ, ಗುಜರಾತು, ಮತ್ತು ಮಹಾರಾಷ್ಟ್ರ, ಇವೂ ಸೇರಿ ಒಂದು bilingual ಪ್ರಾವಿನ್ಸ್ ಆಗಬಹುದು, ವಿದರ್ಭ ಆಗಬಹುದು, ಹೈದರಾಬಾದ್ ತೆಲಂಗಾಣ ಆಗಬಹುದು ಎಂದು ಮಾಡಿದರು. ಆದರೆ ಈಗ ಪುನಃ ಆ ವಿಷಯವನ್ನು ಸಮಾಲೋಚನೆ ಮಾಡಿ ಸಂಯುಕ್ತ ಮಹಾರಾಷ್ಟ್ರ ಆಗಬೇಕು, ವಿದರ್ಭ ಇರಬಾರದು, 70 ಲಕ್ಷ ಪ್ರಜೆಗಳು ಇರುವ ರಾಜ್ಯವನ್ನು ಮಹಾರಾಷ್ಟ್ರಕ್ಕೆ ಸೇರಿಸಬೇಕು. ಬೊಂಬಾಯಿ ಸ್ಟೇಟ್ ಮಾತ್ರ ಪ್ರತ್ಯೇಕವಾಗಿ ಇರಬೇಕು. ಗುಜರಾತ್ ಸೌರಾಷ್ಟ್ರ ಸೇರಬೇಕಾಗಿದೆ. ಅದು 222 ದೇಶೀಯ ಸಂಸ್ಥಾನಗಳನ್ನು ಸೇರಿಸಿಕೊಂಡಿದೆ. ಅಲ್ಲಿ 60 ಜನ ಇರತಕ್ಕ ಶಾಸನಸಭೆ ಇದೆ. ಸೌರಾಷ್ಟ್ರವೂ ಕೂಡ ಸೇರುವುದಾಗಿದೆ. ವಿದರ್ಭ ಸೇರಿಕೊಂಡು ಸಂಯುಕ್ತ ಮಹಾರಾಷ್ಟ್ರ ಆಗಿ ಬೊಂಬಾಯಿ ಸ್ಟೇಟ್ ಬೇರೆ ಆಗಬೇಕೆಂದು ಬೊಂಬಾಯಿ ಶಾಸನ ಸಭೆಯ ಮುಂದೆ ಶ್ರೀ ಮೊರಾರ್ಜಿ ದೇಶಾಯಿಯವರು ಸಲಹೆಯನ್ನು ಇಟ್ಟಿದ್ದಾರೆ. ತೆಲಂಗಾಣ ಹೈದರಾಬಾದ್ ಎಂದು ಬೇರೆ ಆಗಬೇಕೆಂದು ಮಾಡಿದ್ದರು. ಒಂದೇ ಆಂಧ್ರವಾಗಬೇಕು, ವಿಶಾಲ ಆಂಧ್ರವಾಗಬೇಕು, ತೆಲಂಗಾಣ ಬೇಡ, ಎಲ್ಲವೂ ಸೇರಿ ಒಂದು ಪ್ರಾಂತವಾಗಬೇಕು ಎಂದು ಹೇಳಿದ್ದಾರೆ. ಇವತ್ತಿನ ದಿವಸ ಈ ಕಮಿಟಿಯಲ್ಲಿ ಹೇಳಿರುವುದನ್ನು ಮೀರಿ ಇನ್ನೂ ಒಂದು

(ಶ್ರೀ ಪಿ. ಆರ್. ರಾಮಯ್ಯ.)

ಹೆಜ್ಜೆ ಮುಂದೆ ಹೋಗಿರುವ ಕಾಲದಲ್ಲಿ ಈ ಸಮಿತಿಯಲ್ಲಿ ಕರ್ಣಾಟಕ ಪ್ರಾಂತವಾಗಬೇಕು ಎಂಬ ಸಲಹೆಯಿಂದ ಹಿಂದಕ್ಕೆ ಹೋಗಿ ಬೇರೆಯಾಗಬೇಕು ಎಂದು ಹೇಳುವುದು ಅಷ್ಟು ಉಚಿತವಲ್ಲ.

ಕೋಮುವಾರು ವಿಚಾರವನ್ನು ವರದಿಯಲ್ಲಿ ಹೇಳಿದ್ದಾರೆ. ಆ ಕೋಮುವಾರು ವಿಷಯದಲ್ಲಿ ಮಾತನಾಡುವುದಕ್ಕೆ ಹಿಂಜರಿಯುತ್ತೇನೆ. ಯಾವ ಕೋಮೇ ಆಗಲಿ, ಇತರ ಕೋಮಿನವರನ್ನು ಬಹಳ ಕಾಲ ತುಳಿಯುವುದಕ್ಕೆ ಆಗುವುದಿಲ್ಲ. ಎಷ್ಟೇ majority ಆಗಿದ್ದರೂ ಕೂಡ ಇವತ್ತಿನ ದಿವಸ ಮೆಜಾರಿಟಿ ಕಮ್ಯೂನಿಟಿಗಳು ಮೈನಾರಿಟಿ ಕಮ್ಯೂನಿಟಿ ಆಗುತ್ತಾರೆ ಎಂಬುದನ್ನು ಒಪ್ಪಿಕೊಳ್ಳಲೇಬೇಕು. ದೊಡ್ಡ ದೊಡ್ಡ ಕಮ್ಯೂನಿಟಿಗಳಾಗಿರುವವರು ಹೆದರಿಕೊಳ್ಳುವುದಕ್ಕೆ ಕಾರಣವಿಲ್ಲ. ಮೈನಾರಿಟಿ ಕಮ್ಯೂನಿಟಿಗಳು ಹೆದರಿಕೊಳ್ಳಬೇಕು. ಲಿಂಗಾಯಿತರು, ಒಕ್ಕಲಿಗರು, ಎಷ್ಟು ಜನ ಇದ್ದಾರೆ ಎಂಬ ಬಗ್ಗೆ ವಿಚಾರಮಾಡೋಣ. ಶೇಕಡ 40 ಭಾಗ ಲಿಂಗಾಯಿತರಿಗೆ ರಾಜ್ಯ ಕೊಟ್ಟು ಬಾಕಿಯುವರು ಬಾಳಬೇಕು ಎಂದರೆ ಅದು ನ್ಯಾಯವೇ? ಆ ಸಂಖ್ಯೆಯನ್ನು ಕಡಿಮೆಮಾಡಿ ಶೇಕಡ 20 ಭಾಗಕ್ಕೆ ಇಳಿಸಿ ಕರ್ಣಾಟಕವಾಗಬೇಕು ಬಂದು ಹೇಳುತ್ತಾ ಇರುವುದು. ಶೇಕಡ 40 ಭಾಗದಷ್ಟು ಲಿಂಗಾಯಿತರ ರಾಜ್ಯ ಕಟ್ಟಬೇಕೆಂದು ಹೇಳುವುದನ್ನು ನಾನು ಒಪ್ಪುವುದಿಲ್ಲ. ಕೋಮುವಾರು ಭಾವನೆ ಹೋಗಬೇಕಾದರೆ ಇವತ್ತಿನ ದಿವಸ ಅವರ ಸಂಖ್ಯೆಯನ್ನು ಶೇಕಡ 20 ಭಾಗಕ್ಕೆ ಇಳಿಸಿ. ಇಂತಹ ಕರ್ಣಾಟಕ ರಾಷ್ಟ್ರವಾಗಬೇಕಾದುದು ಅತ್ಯಗತ್ಯ. ಆದ್ದರಿಂದ ಯಾವ ಜಗಳಕ್ಕೂ ಕಾರಣವಿಲ್ಲ. ನಮ್ಮ ಆದರ್ಶ ಮತ್ತು ಗುರಿ, ಜಾತಿ ಹೋಗಬೇಕು, ಪಂಗಡ ಹೋಗಬೇಕು ಎಂಬುದು. ಅದು ಆಗಿಯೇ ಆಗುತ್ತದೆ. ಕೋಮುವಾರು ವಾದ ಸಾಮಾನ್ಯವಾಗಿ ಈ ಸಭೆಯೊಳಗೆ ಬರಲೇ ಬಾರದು. ಅದರಮೇಲೆ ಮಾತನಾಡುತ್ತಾ ಹೋದರೆ ಅದು ಹೆಚ್ಚಾಗುತ್ತದೆ. ಈ ರೀತಿ ಆಗಬಾರದೆಂದು ರಿಪೋರ್ಟಿನಲ್ಲಿ ಸಲಹೆ ಮಾಡಿರುವುದು. ಮುಖ್ಯವಾಗಿ ಇವತ್ತಿನ ದಿವಸ ಕೋಮುವಾರು ತತ್ವವನ್ನು ಹೆಚ್ಚಾಗಿ ಬೆಳಸಬಾರದು. ಯಾವುದೇ ಆಗಲಿ, ಜಾತಿ ಹೋಗಬೇಕು ; ಅದು ಹೋಗಿ ಎಲ್ಲರೂ ಸುಖವಾಗಿರಬೇಕು, socialist pattern of society ಕಟ್ಟಬೇಕು ಎಂದು ಇರುವ ಕಾಲದೊಳಗೆ, ಹಿಂದುಳಿದಿರುವವರನ್ನು ಮೇಲಕ್ಕೆ ತರಬೇಕೆನ್ನುವ ಗುರಿ ಇರುವ ಕಾಲದೊಳಗೆ, ಇಂಡಿಯಾ ದೇಶದಲ್ಲಿ ಪ್ರತಿಯೊಬ್ಬನಿಗೂ ಸ್ಥಾನಮಾನವಿರಬೇಕು.

ಶ್ರೀ ಮುಲ್ಕ ಗೋವಿಂದರೆಡ್ಡಿ (ಚಿತ್ರದುರ್ಗ).—ತಮ್ಮ ಪ್ರೆಸ್ಸಿನಲ್ಲಿ ಕೆಲಸಮಾಡುವ workersನ್ನು ಮೊದಲು ಮೇಲಕ್ಕೆ ತನ್ನಿ.

ಶ್ರೀ ಪಿ. ಆರ್. ರಾಮಯ್ಯ.—ತಿಳಿಯದೆ ಮಾತನಾಡುತ್ತೀರಿ. ಪ್ರೆಸ್ ಇಟ್ಟು ಕೆಲಸಮಾಡಿ, ಗೊತ್ತಾಗುತ್ತದೆ.

ಶ್ರೀ ಮುಲ್ಕ ಗೋವಿಂದರೆಡ್ಡಿ.—ಅವರ ಪ್ರೆಸ್ಸಿನಲ್ಲಿ ಇರುವವರಿಗೆ ಬಹಳ ತೊಂದರೆ ಇದೆ. ಮೈಸೂರಿನಲ್ಲಿ ಎಲ್ಲಿಯೂ ಇಷ್ಟು ಕಡಿಮೆ ಕೂಲಿ ಕೊಡುತ್ತಾ ಇಲ್ಲ. ಅದಕ್ಕಾಗಿ ಹೇಳಿದೆ.

ಶ್ರೀ ಪಿ. ಆರ್. ರಾಮಯ್ಯ.—ಆ ವಿಷಯ ಬೇಡ. ಕೂಲಿಗಾರರಾಗಿರತಕ್ಕಂಥವರನ್ನು ಮೇಲಕ್ಕೆ ತರಬೇಕು. ಶ್ರೀ ಮುಲ್ಕ ಗೋವಿಂದರೆಡ್ಡಿಯವರು ಅದಕ್ಕೆ ಸಹಾಯಮಾಡಲಿ. ಇದನ್ನು ಸಂಕುಚಿತ ದೃಷ್ಟಿಯಿಂದ ನೋಡಬಾರದು. ಕರ್ಣಾಟಕ ಪ್ರಾಂತವಾಗಬೇಕು ಎಂದು ಬಹಳ ದಿವಸಗಳಿಂದ ನಿರೀಕ್ಷೆ ಮಾಡುತ್ತಿದ್ದೇವೆ. ಇದು ಆಗಲೇಬೇಕು. ಈ ಸಭೆಯಲ್ಲಿ ಕೆಲವು ಭಾಷಣಗಳನ್ನು ಕೇಳಿ ನನಗೆ ವ್ಯಸನವಾಯಿತು. ಅದರಲ್ಲೂ ಶ್ರೀ ಕರೀಗೌಡರ ಭಾಷಣದಿಂದ ನನಗೆ ನಿದ್ರೆಯೇ ಬರಲಿಲ್ಲ. ಶ್ರೀ ಶಿವನಂಜೇಗೌಡರ ಭಾಷಣ ಕೇಳಿ ಊಟವೇ ಸೇರಲಿಲ್ಲ.

ಅಧ್ಯಕ್ಷರು.—ಹಾಗಾದರೆ ಶ್ರೀ ಶಿವನಂಜೇಗೌಡರು ಊಟ ಹಾಕಿಸಬೇಕು.

ಶ್ರೀ ಪಿ. ಆರ್. ರಾಮಯ್ಯ.—ನನ್ನ ಸ್ನೇಹಿತರಾಗಿರುವವರು ಈ ಸಭೆಯೊಳಗೆ ಪ್ರಾಣ ಕೊಡುತ್ತೇವೆ, ಆಮರಣಾಂತ ಉಪವಾಸ ಮಾಡುತ್ತೇವೆ ಎಂದು ಹೇಳಿದರು. ಅಂತಹ ಆಪತ್ತು ಏನು ಬಂದಿದೆ ? ನಿಜವಾಗಿಯೂ ನಾವು ಅಂತಹ ಕಷ್ಟಪಡುತ್ತಾ ಇಲ್ಲ. ಇಂಡಿಯಾ ದೇಶವೆಲ್ಲಾ ಒಗ್ಗಟ್ಟಾಗಿ ಇರಬೇಕು. ಅವರೆಲ್ಲರೂ ಒಗ್ಗಟ್ಟಾಗಿ ಸೇರಬೇಕು.

ಶ್ರೀ ಶಿವನಂಜೇಗೌಡ (ಮೈಸೂರು ತಾಲ್ಲೂಕು).—ದೇಶದ ಚರಿತ್ರೆ ನೋಡಿದರೆ ಈ ವಿಚಾರಗಳು ಗೊತ್ತಾಗುತ್ತವೆ.

ಶ್ರೀ ಪಿ. ಆರ್. ರಾಮಯ್ಯ.—ದೇಶ ವಿಶಾಲವಾಗಬೇಕು. ಕರ್ಣಾಟಕವಾಗಬೇಕೆಂದು, ನಾವು ದೊಡ್ಡವರಾಗಬೇಕು ಎಂದು ಹೇಳುತ್ತಿದ್ದೇವೆ. ನಾನು ಹಳ್ಳಿಯಲ್ಲಿ ಹುಟ್ಟಿದ್ದು. ನಮ್ಮ ಪೂರ್ವಿಕರು ಹುಣಸೂರು ತಾಲ್ಲೂಕು ಕಟ್ಟೆಮಳಲವಾಡಿಯಲ್ಲಿ ಲಕ್ಷ್ಮಣ ತೀರ್ಥ ನದಿಯತೀರದಲ್ಲಿ ವಾಸವಾಗಿದ್ದರು. ಇನ್ನೂರು ಮುನ್ನೂರು ವರ್ಷಗಳ ಹಿಂದೆ ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ನಮ್ಮವರು ಮೈಸೂರು ನಗರಕ್ಕೆ ಬಂದರು. ನಾನು ಶ್ರೀರಂಗಪಟ್ಟಣದಲ್ಲಿ ಹುಟ್ಟಿದೆ. ಜೀವನಕ್ಕೋಸ್ಕರ ನಾನು ಬೆಂಗಳೂರನ್ನು ಸೇರಿಕೊಂಡೆ. ಸಾಮಾನ್ಯವಾಗಿ ನನ್ನಂಥ ಪ್ರಜೆಗೆ ಭೂಮಿಯಿಲ್ಲ, ಕಾಣಿಯಿಲ್ಲ. ರಾಜ್ಯವಿಸ್ತಾರವಾದರೆ, ಎಲ್ಲಿ ಜೀವನ ಸರಿಹೋಗುತ್ತದೋ ಅಲ್ಲಿಗೆ ಹೋಗುತ್ತೇನೆ. ಆದ್ದರಿಂದ ಸಾಮಾನ್ಯ ಜನರ ದೃಷ್ಟಿಯಿಂದ, ಕೆಲಸಗಾರರ ದೃಷ್ಟಿಯಿಂದ, ಸಾಮಾಜಿಕ ದೃಷ್ಟಿಯಿಂದ, ವ್ಯಾಪಾರಗಾರರ ದೃಷ್ಟಿಯಿಂದ, ಕೈಗಾರಿಕಾ ದೃಷ್ಟಿಯಿಂದ ದೇಶ ವಿಶಾಲವಾದರೆ ಒಳ್ಳೆಯದು. ಅದಕ್ಕೆ ಏನೂ ತೊಂದರೆಯಾಗುವುದಿಲ್ಲ. ಇವತ್ತಿನ ದಿವಸ ಶಾಸನ ಸಭೆಯಲ್ಲಿ ಮೆಜಾರಿಟಿ, ಮೈನಾರಿಟಿ ಎಂಬುದಾಗಿ ಯೋಚನೆ ಮಾಡಿದಹಾಗೆ ಕಾಣುತ್ತದೆ. ಶ್ರೀಮತಿ ಬಳ್ಳಾರಿ ಸಿದ್ದಮ್ಮನವರು ತಮ್ಮ ಕೋಮಿನ ವಿಷಯ ಹೇಳಿದರು. ನಮಗೆ ಎಲ್ಲರ ವಿಶ್ವಾಸಬೇಕು. ಹರಿಜನರು, ಲಿಂಗಾಯಿತರು, ಒಕ್ಕಲಿಗರು, ಎಲ್ಲರೂ ನಮಗೆ ಬೇಕು. ಈ ರೀತಿಯಾಗಿ ನಾವು ಸೇವೆ ಮಾಡಬೇಕು. ಎಲ್ಲಾ ಜನರ ವಿಶ್ವಾಸವನ್ನೂ ಸಂಪಾದನೆ ಮಾಡಬೇಕು. ಈ ರೀತಿ ದೇಶವನ್ನು ಬೆಳೆಸಬೇಕು. ಎಲ್ಲಾ ಕೋಮುಗಳಿಂದ ಆರಿಸಲ್ಪಟ್ಟು ಇಲ್ಲಿಗೆ ಬಂದಿದ್ದೇವೆ. ಶಾಸನ ಸಭೆಯವರು ಎಲ್ಲಾ ಕೋಮುಗಳು ಮುಂದಕ್ಕೆ ಬರಬೇಕು ಎನ್ನುವ ತತ್ವ ಇಟ್ಟುಕೊಳ್ಳಬೇಕು. ಇವತ್ತಿನ ದಿವಸ ಹರಿಜನರ ವಿಚಾರದಲ್ಲಿ ನನ್ನ ಪ್ರೀತಿ ಇದೆ. ಅವರು ಮುಂದೆ ಬರುವುದಕ್ಕೆ ಬೇಕಾದಷ್ಟು ಅವಕಾಶವಿದೆ. ಶ್ರೀ ಪಂಡಿತ ನೆಹರೂ ಅವರು ಇರತಕ್ಕ ರಾಜ್ಯದಲ್ಲಿ ಎಲ್ಲಾ ಅವಕಾಶವೂ ಇದೆ. ಆದುದರಿಂದ ಈ ಹೊತ್ತು ಕರ್ಣಾಟಕದ ವಿಷಯದಲ್ಲಿ ನಾವು ಈ ರೀತಿ ಪ್ರಾಣಬಿಡಬೇಕು, ಆತ್ಮಾರ್ಪಣೆ ಮಾಡಬೇಕು ಎಂದು ಹೇಳುವುದಕ್ಕೆ ಅವಕಾಶವಿಲ್ಲ, ಅವಶ್ಯಕತೆಯೂ ಇಲ್ಲ. ಅಂಥ ಕಷ್ಟಕಾಲ ನಮಗೆ ಬಂದಿಲ್ಲದಿರುವಾಗ ಇಂಥ ಮಾತನ್ನು ಏಕೆ ಆಡಬೇಕು ! ನನ್ನ ಸ್ನೇಹಿತರನ್ನು ಒಲಿಸಿಕೊಳ್ಳುವುದಕ್ಕೆ ನನ್ನ ಕೈಯಲ್ಲಾಗುತ್ತಿಲ್ಲವೆಂಬ ವ್ಯಥೆ ನನಗಾಗಿದೆ. ನಾನು

ಉಪವಾಸ ಮಾಡಬೇಕೆಂದರೂ ಮಾಡುತ್ತೇನೆ, ಅದರಿಂದ ಪ್ರಯೋಜನವಿಲ್ಲ. ಆದರೆ ಒಲಿಸಿಕೊಳ್ಳುವುದಕ್ಕೆ ನನಗೆ ಶಕ್ತಿ ಇಲ್ಲ. ಲಿಂಗಾಯಿತರ ಸೇವೆ, ಒಕ್ಕಲಿಗರ ಸೇವೆ, ಹರಿಜನರ ಸೇವೆ ಮಾಡೋಣ, ಜನರನ್ನು ಒಲಿಸಿಕೊಂಡು ರಾಜ್ಯವನ್ನು ಕಟ್ಟೋಣ. ಕರ್ಣಾಟಕ ರಾಜ್ಯ ಬಹಳ ಒಳ್ಳೆಯ ರಾಜ್ಯ. ಆದಕ್ಕೆ ದೈವಬಲವಿದೆ ಎಂದು ನನಗೆ ತೋರುತ್ತದೆ. ಕರ್ಣಾಟಕ ಸಾಮಾನ್ಯವಲ್ಲ ನಮ್ಮ ದಕ್ಷಿಣ ದೇಶದಲ್ಲಿ ಆಂಧ್ರರೂ, ಕರ್ಣಾಟಕರೂ ಸೇರಿ ನಮ್ಮ ಸಂಸ್ಕೃತಿಯನ್ನು ಉದ್ಧಾರ ಮಾಡಿದ್ದಾರೆ. ವಿಜಯನಗರವೆಂದರೆ ಬರೀ ಆಂಧ್ರವಲ್ಲ, ಬರೀ ಕರ್ಣಾಟಕವೂ ಅಲ್ಲ; ಎಲ್ಲರೂ ಸೇರಿ ದೇಶವನ್ನು ಮುಂದೆ ತಂದಿದ್ದಾರೆ. ಬಂಗಾಳದವರೂ, ಮಹಾರಾಷ್ಟ್ರರೂ ದೇಶವನ್ನು ಮುಂದೆ ತಂದಿದ್ದಾರೆ. ಈಚೆಗೆ ಬಸವಣ್ಣನವರ ವಚನಗಳನ್ನು ಓದಿದೆ. ಎಷ್ಟು ಚೆನ್ನಾಗಿ ಬರೆದಿದ್ದಾರೆ! ಕನ್ನಡದಲ್ಲಿ ಇಂಥ ಒಳ್ಳೆಯ ಅಭಿಪ್ರಾಯಗಳನ್ನು ಇಷ್ಟು ಚೆನ್ನಾಗಿ ಹೇಳಬಹುದೆಂದು ಆಗ ಗೊತ್ತಾಯಿತು. ಕನ್ನಡ ಸುಂದರವಾದ ಭಾಷೆ. ಇದು ಈ ಹೊತ್ತು ತಮಿಳಿಗೂ ತೆಲುಗಿಗೂ ಮಧ್ಯದಲ್ಲಿದೆ. ತಮಿಳರೂ, ತೆಲುಗರೂ ಒಟ್ಟಿಗೆ ಸೇರಬೇಕಾದರೆ, ಮೈಸೂರಿನಲ್ಲಿ. ಇದರ ಆಚೆ ಈಚೆ ಪಕ್ಕಗಳಲ್ಲಿ ಬೊಂಬಾಯಿ ಮದರಾಸು ಹೀಗಿರುವುದರಿಂದ ಕರ್ಣಾಟಕ ಒಳ್ಳೆಯ ರಾಜ್ಯವಾಗುತ್ತದೆ. ಹೆಚ್ಚು ಜನ ಒಟ್ಟಾಗಿ ಸೇರಿದರೆ ಚೆನ್ನಾಗಿರುತ್ತದೆ. ಅಲ್ಲಿಯೂ ಬುದ್ಧಿವಂತರೂ ವಿನಯಶಾಲಿಗಳೂ ಇದ್ದಾರೆ. ಆದುದರಿಂದ ಕರ್ಣಾಟಕದ ವಿಷಯದಲ್ಲಿ ಒಳ್ಳೆಯ ಭಾವನೆಯನ್ನು ತೋರಿಸಬೇಕೇ ವಿನಾ ಸಂಕಟಪಡಬಾರದು. ಯಾರಿಗೂ ಯಾವ ಸಂಕಟವೂ ಇಲ್ಲದಂತಾಗಲೆಂದು ದೇವರನ್ನು ಪ್ರಾರ್ಥಿಸುತ್ತೇನೆ. ನೆಹರೂರವರು ಹೇಳುತ್ತಿದ್ದಾರೆ, ಢೇಬರ್‌ರವರು ಹೇಳಿದ್ದಾರೆ, ಅವರು ಹಿರಿಯರು ನಮ್ಮೆಲ್ಲರಿಗೂ ಅವರಲ್ಲಿ ಭಕ್ತಿಯಿದೆ, ಅವರು ಕರ್ಣಾಟಕವಾಗುವುದು ಒಳ್ಳೆಯದೆಂದು ಹೇಳುತ್ತಿದ್ದಾರೆ. ನಮ್ಮ ಮುಖ್ಯಮಂತ್ರಿಗಳೂ ತಮ್ಮ ಭಾಷಣದಲ್ಲಿ ಹೇಳಿದ್ದಾರೆ. ನಮ್ಮ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಚನ್ನಯ್ಯನವರಲ್ಲಿ ನಮಗೆಲ್ಲಾ ಗೌರವವಿದೆ, ಅವರು ಕೂಡ ನನಗೆ ಒಂದು ಮಾತು ಹೇಳಿದರು. ಅದನ್ನು ಅವರು ಡೆಲ್ಲಿಯಿಂದ ಬಂದ ತಕ್ಷಣವೇ ಹೇಳಿದ್ದರೆ ಚೆನ್ನಾಗಿತ್ತು. ಡೆಲ್ಲಿಯಲ್ಲಿರುವ ನಮ್ಮ ನಾಯಕರು ಹೇಳಿದರು, ಅದಕ್ಕೆ ನಾವೆಲ್ಲರೂ ಸಹಕಾರ ಕೊಡಬೇಕು ಎಂದು ವಿಮಾನ ಅಥವಾ ರೈಲು ಇಳಿದ ಕೂಡಲೇ ಹೇಳಿದ್ದರೆ, ಇಲ್ಲಿ ಲಾಠಿ ಪ್ರಕರಣವಾಗುತ್ತಿರಲಿಲ್ಲ. ಹುಡುಗರು ಯಾರ ಮಾತನ್ನೋ ಕೇಳಿಕೊಂಡು ಏಟು ತಿಂದಿದ್ದಾರೆ, ಇದರಿಂದ ನಮಗೆ ಸಂಕಟವಾಗುತ್ತಿದೆ.

ಶ್ರೀ ಬಿ. ಎಂ. ಸೀನಪ್ಪ (ಕಬ್ಬನ್‌ಪೇಟೆ).—ಕಾಂಗ್ರೆಸ್ ಚಳವಳಿ 1942ರಲ್ಲಿ ನಡೆದಾಗ ಹೀಗೆ ಏಟುಗಳು ಬಿದ್ದಾಗ ಏಕೆ ಅಯ್ಯೋ ಎನ್ನಲಿಲ್ಲ.

ಶ್ರೀ ಪಿ. ಆರ್. ರಾಮಯ್ಯ.—ದೊಡ್ಡಪೇಟೆ ಚೌಕದಲ್ಲಿ ಏನಾಯಿತೆಂಬುದು ಗೊತ್ತಿದೆ. ಕಬ್ಬನ್‌ಪೇಟೆ ಎನ್ನುವುದು ಪ್ರಖ್ಯಾತ ಸ್ಥಳ. ಆ ಹೊತ್ತಿನ ದಿವಸ ಯಾರು ಯಾರ ಮೇಲೆ ಕರುಣೆ ತೋರಿಸಬೇಕಾಗಿತ್ತು? ನಮ್ಮ ಮೇಲೆ ನಾವೇ ತೋರಿಸಬೇಕಾಗಿತ್ತೇ? ಮಹಾತ್ಮಾ ಗಾಂಧಿಯವರು Quit India ಎಂದು ಹೇಳಿದರು, ಚಿಕ್ಕ ಮಕ್ಕಳೂ ಕೂಡ ಅದನ್ನು ಹೇಳಿದರು. ಆಗ ಸೆಂಟ್ರಲ್ ಜೈಲು ಧರ್ಮಛತ್ರದ ಹಾಗಿತ್ತು, ಜೈಲೆಂದರೆ ಹೆದರಿಕೆಯೇ ಇರಲಿಲ್ಲ.

ಮಹಾತ್ಮಾ ಗಾಂಧಿಯವರ ವಿಷಯ ಹೇಳುತ್ತೇವೆ: ಅವರ ಮಾತನ್ನು ನಮಗೆ ಹೇಗೆ ಸೂಕ್ತವೋ ಹಾಗೆ ಉಪಯೋಗಿಸಿಕೊಳ್ಳುತ್ತೇವೆ. ಮಹಾತ್ಮಾ ಗಾಂಧಿಯವರು ಮೈಸೂರನ್ನು ಪ್ರೀತಿಸುತ್ತಿದ್ದಹಾಗೆ ಇನ್ಯಾವ ಪ್ರಾಂತ್ಯಗಳನ್ನೂ ಪ್ರೀತಿಸುತ್ತಿರಲಿಲ್ಲ. ಮೈಸೂರಿನ ಜನರು ಅಷ್ಟು ಗುಣಶಾಲಿಗಳು, ಧರ್ಮಿಷ್ಠರು ಎಂಬ ಭಾವನೆಯನ್ನಿಟ್ಟುಕೊಂಡಿದ್ದರು. ಅವರು ಕರ್ಣಾಟಕದಲ್ಲಿಯೂ ಬಹಳ ವಿಶ್ವಾಸವನ್ನಿಟ್ಟುಕೊಂಡಿದ್ದರು. ಅವರು ಎಷ್ಟೋ ಸಾರಿ ಹೇಳುತ್ತಿದ್ದರು, ಕರ್ಣಾಟಕ ಬರುತ್ತದೆ, ಅವಸರಪಡಬೇಡಿ ಎಂದು ಹೇಳುತ್ತಿದ್ದರು. ಎರಡು ಕರ್ಣಾಟಕವಾಗಬೇಕೆಂದು ಹೇಳುತ್ತಿರುವವರೂ ನನಗೆ ಅತ್ಯಂತ ಪ್ರಿಯರಾದ ಸ್ನೇಹಿತರು. ಅವರನ್ನೂ ನನ್ನ ಕಡೆಗೇ ತಿರುಗಿಸಬೇಕೆಂದು ನನಗೆ ಆಶೆ; ಆದರೆ ನನಗೆ ಅಷ್ಟು ಶಕ್ತಿಯಿಲ್ಲ. ಆದರೂ ಸಹಕಾರ ಕೊಟ್ಟರೆ, ಈ ಸಭೆ ಸರ್ವಾನುಮತದಿಂದ ಇದನ್ನು ತೀರ್ಮಾನ ಮಾಡಬಹುದು. ಮುಂದೇನಾದರೂ ಕಷ್ಟ ಸಮಸ್ಯೆಗಳು ಬಂದರೂ ಎಲ್ಲರೂ ಸೇರಿ ಬಗೆಹರಿಸುವುದಕ್ಕೆ ಪ್ರಯತ್ನ ಮಾಡೋಣ. ಲಿಂಗಾಯಿತರು, ಒಕ್ಕಲಿಗರು ಎಂಬ ಭೇದಭಾವನೆ ಬೇಡ, ಅದು ಉಳಿಯುವುದಿಲ್ಲ. ನಮ್ಮಲ್ಲಿ younger generationಗೆ, ನಮ್ಮ ಮನೆಯ ಹುಡುಗರಿಗೆ ಈ ಜಾತಿ ಎನ್ನುವುದು ಗೊತ್ತಿಲ್ಲ. ಹಿಂದಿನವರೇನೋ ಸಂಪ್ರದಾಯವನ್ನಿಟ್ಟುಕೊಂಡು ಬಂದಿದ್ದಾರೆ. ಇನ್ನು ಹತ್ತು ವರ್ಷಗಳಲ್ಲಿ ಇದು ಸಂಪೂರ್ಣವಾಗಿ ಇರುವುದೇ ಇಲ್ಲ; ಉಳಿಯುವುದಿಲ್ಲ, ಇದು ಉಳಿಯುವುದಕ್ಕೆ ಪಂಡಿತ ನೆಹರೂ ಅವರು ಅವಕಾಶ ಕೊಡುವುದಿಲ್ಲ. ಮೈಸೂರಿನ ದೊಡ್ಡ ಹೆಸರು ಉಳಿಯಲಿ.

ರಾಜಪ್ರಮುಖರ ವಿಷಯದಲ್ಲಿ ನಮಗೆ ಪೂಜ್ಯ ಭಾವನೆ ಇದೆ. ನಾನು ವಿಶೇಷವಾಗಿ ಅವರಲ್ಲಿ ಹೋಗದಿದ್ದರೂ ಎರಡು ಸಾರಿ ಹೋಗಿ ನೋಡಿದ್ದೇನೆ. ನನಗೆ ತೋರುತ್ತದೆ, ನಾವೆಲ್ಲ ಇಷ್ಟುಮಟ್ಟಿಗೆ ತ್ಯಾಗ, ತ್ಯಾಗ ಎಂದು ಹೇಳುತ್ತೇವೆ, ಅವರನ್ನು ನೋಡಿದಾಗ ಅವರು ತ್ಯಾಗದ ಮೂರ್ತಿಯೆಂದು ತೋರಿತು. ಏಕೆಂದರೆ, ಅವರು ಹುಟ್ಟಿದ್ದು ಹೇಗೆ, ಕಡೆಗೆ ಯಾವ ಪರಿಸ್ಥಿತಿ ಬಂತು; ರಾಜ್ಯವನ್ನು ಬಿಡಬೇಕಾಯಿತು. ಈ ಹೊತ್ತಿನ ದಿವಸ ಕೂಡ ಅವರು 'ಇದು ನನ್ನದಲ್ಲ. ಎಲ್ಲವೂ ಪ್ರಜೆಗಳಿಗೆ ಸೇರಿದುದು' ಎಂಬ ವಿಶಾಲ ದೃಷ್ಟಿಯನ್ನಿಟ್ಟುಕೊಂಡಿದ್ದಾರೆ. ಅವರು ಸಂಸ್ಕೃತ, ಇತಿಹಾಸ ಎಲ್ಲವನ್ನೂ ಚೆನ್ನಾಗಿ ವ್ಯಾಸಂಗ ಮಾಡಿದ್ದಾರೆ, ಪ್ರಪಂಚವನ್ನು ಸುತ್ತಿದ್ದಾರೆ. ಅವರು ದೈವಭಕ್ತರು, ನಿಷ್ಠರು, ಆಚಾರಶೀಲರು. ಅವರ ವಿಷಯದಲ್ಲಿ ನಮ್ಮಂಥ ಸಾಮಾನ್ಯ ಮನುಷ್ಯರಿಗೇ ಗೌರವವಿರುವಾಗ ನೆಹರೂ, ಪಂತ್ ಮುಂತಾದವರಿಗೆ ಗೌರವವಿದ್ದೇ ಇರುತ್ತದೆ. ಈ ರಾಜ್ಯದ ವಿಷಯದಲ್ಲಿ ರಾಜಪ್ರಮುಖರ ಸ್ಥಾನ ಹೋದರೂ ಚಿಂತೆಯಿಲ್ಲ. ಇದರಲ್ಲೇನಿದೆ? ಇದಕ್ಕಿಂತ ಇಂಡಿಯಾ ದೇಶದಲ್ಲಿ ಇವರಿಗೊಂದು ದೊಡ್ಡ ಸ್ಥಾನವನ್ನು ನಮ್ಮ ನಾಯಕರು ಕಲ್ಪಿಸಿಕೊಡುತ್ತಾರೆ. ಹಾಗೆಯೇ ಆಗಲೆಂದು ನಾವು ಪ್ರಾರ್ಥಿಸೋಣ. ಅವರಿಗೆ ನಮ್ಮ ದೇಶದ ರಾಜಪ್ರಮುಖರ ಸ್ಥಾನ ಸಾಮಾನ್ಯವಾದುದು. ಇದಕ್ಕಿಂತ ದೊಡ್ಡಸ್ಥಾನ ದೊರೆಯುವಂತೆ ಭಗವಂತನು ಮಾಡಲೆಂದು ಪ್ರಾರ್ಥಿಸೋಣ. ಒಟ್ಟಿನಲ್ಲಿ ಮಾನ್ಯ ಸದಸ್ಯರೆಲ್ಲರೂ ದೊಡ್ಡ ಮನಸ್ಸುಮಾಡಿ, ಒಳ್ಳೆಯ ಭಾವನೆಯಿಂದ ಇದು ಆಗಬೇಕೆಂದು ತೀರ್ಮಾನ ಮಾಡಬೇಕೆಂದು ಪ್ರಾರ್ಥಿಸುತ್ತೇನೆ.

Mr. SPEAKER.—The House will now rise and meet again on 29th November 1955 at 12 Noon.

The House adjourned at Thirty Minutes past Five of the Clock to meet again at Twelve of the Clock on Tuesday, the 29th November 1955.

WD 1451—GPB—550—27-2-56